
BROWEN BOOK ONLY

**TEXT CUT WITHIN THE BOOK ONLY**

**TEXT FLY WITHIN THE BOOK ONLY**

**TEXT PROBLEM WITHIN THE BOOK ONLY**

UNIVERSAL
LIBRARY
OU_200026
UNIVERSAL
LIBRARY



# ಉಳುಕು




ಉಳುಕು ಹಿಡಿದ ಭಾಗದಲ್ಲಿ
ಅಮೃತಾಂಜನವನ್ನು
ಹಚ್ಚಿ
ಸರಿಯಾಗಿ ಉಜ್ಜಿದರೆ
ಆಶ್ಚರ್ಯವಾಗುವಂತೆ
ಗುಣ ಕೊಡುವುದು.

# ಅಮೃತಾಂಜನ

ಉಳುಕಿಗೆ ಅಮೋಘವಾದುದು.

ಬೆಂಗಳೂರ ಶಾಖೆ:—ಅಮೃತಾಂಜನ ಲಿಮಿಟೆಡ್

ಕೃಷ್ಣಾ ಬಿಲ್ಡಿಂಗ್ಸ್, ಅವೆನ್ಯೂರೋಡ, ಬೆಂಗಳೂರನಗರ

ಪ್ರೇಮ ಪ್ರಕಟನಾಲಯದ ೧೩ನೆಯ ಪ್ರಕಟನೆ

# ದೀಪದ ಕೆಳಗೆ

( ಸಾಮಾಜಿಕ ಕಾದಂಬರಿ )

★

ಬರೆದವರು :

ಕುಲಕರ್ಣಿ ಶ್ರೀನಿವಾಸ ಬಿ. ಎ.

★

ಸೋಲ್ ಏಜಂಟರು :

ಸಾಹಿತ್ಯ ಭಾಂಡಾರ, ಹುಬ್ಬಳ್ಳಿ.

# ಪ್ರೇಮ ಪ್ರಕಟನಾಲಯ ಧಾರವಾಡ.


**ಸಲಹೆಗಾರರ ಮಂಡಳಿ :**

ಪಂಡಿತ ತಾರಾನಾಥರಾಯರು.

ಪ್ರೊ. ಆರ್. ವಿ. ಜಾಗಿರದಾರ ಎಂ. ಎ. ( ಲಂಡನ್ )

ಪ್ರೊ. ವ್ಹಿ. ಜಿ. ಕುಲಕರ್ಣಿ ಎಂ. ಎ. ಎಲ್ ಎಲ್. ಬಿ.

ಪ್ರೊ. ಎಸ್. ಎಸ್. ಮಾಳವಾಡ ಎಂ. ಎ.

ಶ್ರೀಮಾನ್ ಮಳಿಯೆ ಗೋವರ್ಧನರಾಯರು.


★

ಸಂಪಾದಕರು :

**ಕುಲಕರ್ಣಿ ಶ್ರೀನಿವಾಸ, ಬಿ. ಎ.**

●

ಒಂದು ವರ್ಷದಲ್ಲಿ ಆರು ಸುಂದರ ಗ್ರಂಥಗಳು.

ವಾರ್ಷಿಕ ಚಂದಾ ೨-೮-೦ ]        [ ಬಿಡಿ ಪ್ರಕಟನೆಗೆ ೦-೮-೦

---


ಪ್ರಕಾಶಕರು :

**ವಸಂತಮಾಧವ ಸ್ವಾಮಿರಾವ**
**ಕುಲಕರ್ಣಿ,** ವಿಶಾರದ (ಮದ್ರಾಸ)
ಪ್ರೇಮ ಪ್ರಕಟನಾಲಯ
**ಧಾರವಾಡ.**

ಮುದ್ರಕರು :

**ನಾರಾಯಣಾಚಾರ್ಯ ಅಣ್ಣಾಚಾರ್ಯ**
**ಹೊಸಕೇರಿ**
ವಿಜಯ ಮುದ್ರಾಲಯ
**ಧಾರವಾಡ.**

# ನನ್ನ ನುಡಿ

ಕಲಾಪ್ರಪಂಚದಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಕೆಲಸ ಮಾಡ ಬೇಕೆನ್ನುವವನು ಜೀವನದ ಕೆಲವು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಸಮಾಜದ ಸದ್ಯದ ಪರಿಸ್ಥಿತಿಯಲ್ಲಿ ಆ ಸಮಸ್ಯೆಗಳೇ ಕಲಾವಿದನ ಕಲೋ ಪಾಸನೆಯ ಆಸೆಯ ಕುಡಿಯನ್ನೇ ಚಿವುಟಿ ಬಿಸಾಡಲೂಬಹುದು. ಈ ಮನೋಧರ್ಮದಿಂದ ಕಲಾಪ್ರಗತಿಯಾಗಲಾರದು.

ಜನಜೀವನದ ಪ್ರತಿಬಿಂಬವೇ 'ಕಲೆ' ಎಂದು ಹೇಳಿಕೊಳ್ಳುತ್ತಿದ್ದರೂ ಜನಜೀವನದ ರೀತಿ–ನೀತಿಗಳು ಕಲಾಪ್ರಪಂಚದ ರೀತಿನೀತಿಗಳೇ ಆಗಿ ಉಳಿಯುವವೆಂದು ಹೇಳಲು ಸಾಧ್ಯವಿಲ್ಲ. ಕಲಾಕೋವಿದರ ನಿತ್ಯಜೀವನ ವನ್ನು ನೋಡುವ ದೃಷ್ಟಿಯು ಹೆಚ್ಚು ಆಳವಾಗಿರಬೇಕು–ಹೆಚ್ಚು ವಿಶಾಲ ವಾಗಿರಬೇಕು.

ಈ ಪುಸ್ತಕದಲ್ಲಿ ಕಥಾಭಾಗದಕಿಂತಲೂ ವಿಚಾರದ ಭಾಗವೇ ಹೆಚ್ಚಾ ಗಿದೆ. ಚರ್ಚೆ ಹಾಗೂ ವಿವೇಚನೆಯನ್ನೇ ಪ್ರಧಾನವಾಗಿಟ್ಟುಕೊಂಡಿದ್ದರಿಂದ ಕಥಾ ಪ್ರವಾಹಕ್ಕೆ ಕುಂದುಂಟಾಗಿದೆ ಎಂಬುದನ್ನು ನಾನು ಬಲ್ಲೆ. ಆದರೂ ಇದೂ ಒಂದು ಕಾದಂಬರಿ ಎಂಬ ಆತ್ಮವಿಶ್ವಾಸದಿಂದಲೇ ರಸಿಕರ ಮುಂದೆ ಇಡನ್ನು ಇಡುತ್ತಲಿದ್ದೇನೆ. ನಾನೊಡ್ಡಿದ ಸಮಸ್ಯೆಗಳನ್ನು ಪೂರ್ತಿಗೊಳಿ ಸುವ ಹೊಣೆಯನ್ನು ಆ ರಸಿಕರ ಮೇಲೆಯೆ ಇಟ್ಟಿದ್ದೇನೆ.

ಗ್ರಂಥಕರ್ತ

# ಪ್ರೇಮದ ಪ್ರಕಟನೆಗಳು

| | | | |
|---|---|---|---|
| ೧ | ನರಕದಲ್ಲಿ ನರಸಿಂಹ | (ಒಂದು ಸಂಪೂರ್ಣ ನಾಟಕ) | ೦-೬-೦ |
| | | ಬರೆದವರು: "ಶ್ರೀರಂಗ" | |
| ೨ | *ಭಾವ ಪ್ರಭಾತ | (೧೪ ಸಣ್ಣ ಕತೆಗಳು) | ೦-೬-೦ |
| | | ಬರೆದವರು: ಹ. ಪೀ. ಜೋಶಿ ಬಿ. ಎ. | |
| ೩ | ಚಂದ್ರನಾಥ | (ಶರಚ್ಚಂದ್ರರ ಕಾದಂಬರಿ) | ೦-೬-೦ |
| | | ಅನುವಾದಕರು: ಗುರುನಾಥ ಜೋಶಿ | |
| ೪ | ನಡುಮನೆಯಲ್ಲಿ | (೮ ಏಕಾಂಕ ನಾಟಕಗಳು) | ೦-೬-೦ |
| | | ಬರೆದವರು: ಎಸ್. ಕೆ. ಕುಲಕರ್ಣಿ ಎಂ. ಎ. | |
| ೫ | ನಟ | (೯ ಸಣ್ಣ ಕತೆಗಳು) | ೧-೬-೦ |
| | | ಬರೆದವರು: ಕೆ. ಗೋಪಾಲಕೃಷ್ಣರಾಯರು ಬಿ. ಎ. | |
| ೬ | ಹತ್ತು ಕತೆಗಳು | (೧೦ ಸಣ್ಣ ಕತೆಗಳು) | ೦-೬-೦ |
| | | ಬರೆದವರು: ಹತ್ತು ಕನ್ನಡ ಕತೆಗಾರರು | |
| ೭ | ಪರಾಗ | (ಕವನ ಸಂಗ್ರಹ) | ೦-೬-೦ |
| | | ಬರೆದವರು: ೪೨ ಕನ್ನಡ ಕವಿಗಳು | |
| ೮+೯ | ಬಣ್ಣದ ಬೀಸಣಿಕೆ | (೭ ಏಕಾಂಕ ನಾಟಕಗಳು) | ೦-೧೨-೦ |
| | | ಬರೆದವರು: ಅ. ನ. ಕೃಷ್ಣರಾಯರು | |
| ೧೦+೧೧ | ಅದ್ಭುತ-ರಮ್ಯ ಕತೆಗಳು | (ಗ್ರೀಕ್ ಪುರಾಣದಿಂದ) | ೦-೧೨-೦ |
| | | ಬರೆದವರು: ರಾ. ನ. ಮುಳಗಿ, ಹುಬ್ಬಳ್ಳಿ | |
| ೧೨ | ಕಾಶ್ಮೀರ ಪ್ರವಾಸ | (ಕಾಶ್ಮೀರದ ವರ್ಣನೆ) | ೦-೬-೦ |
| | | ಬರೆದವರು: ಗುರುನಾಥ ಜೋಶಿ | |
| ೧೩ | ದೀಪದ ಕೆಳಗೆ | (ಸಾಮಾಜಿಕ ಕಾದಂಬರಿ) | ೦-೮-೦ |
| | | ಬರೆದವರು: ಕುಲಕರ್ಣಿ ಶ್ರೀನಿವಾಸ ಬಿ. ಎ. | |
| | | (ಅಚ್ಚಿನಲ್ಲಿ) | |
| ೧೪ | ಬೈಗು-ಬೆಳಗು | (ಇಬ್ಬರ ಕತೆಗಳು) | ೦-೮-೦ |
| | | ಬರೆದವರು: ಇಬ್ಬರು ಕತೆಗಾರರು | |
| ೧೫ | ಚಾಡಿಯ ಚೌಕು | (ಸಂಪೂರ್ಣ ನಾಟಕ) | ೦-೮-೦ |
| | | ಬರೆದವರು: ಪ್ರೊ. ಎನ್. ಎಮ್. ಕುಲಕರ್ಣಿ ಎಂ. ಎ. | |
| ೧೬ | ಚಿಕ್ಕದೊಡ್ಡವರು | (ಹರಟೆಗಳ ಸಂಗ್ರಹ) | ೦-೮-೦ |
| | | ಬರೆದವರು: ಕೋ. ಶಿ. ಕಾರಂತ | |

* ಪ್ರತಿಗಳು ತೀರಿವೆ.

ಅಗಲಿದ ನನ್ನ ಸಹೋದರ

**ಗುರುನಾಥನಿಗೆ -**

## ಹದಿನಾಲ್ಕನೆಯ ಪ್ರಕಟನೆ

# ಬೈಗು-ಬೆಳಗು

ಬಾಳಿನ ಬೈಗು–ಬೆಳಗುಗಳನ್ನು ಚಿತ್ರಿಸುವ ಕೆಲವು
ಕತೆಗಳ ಸಂಗ್ರಹ.

ಬರೆದವರು: ಆರ್. ಬಿ. ಸೇನ್ ಮತ್ತು ಶಂಕರತನಯ

## ಹದಿನೈದನೆಯ ಪ್ರಕಟನೆ

# ಚಾಡಿಯ ಚೌಕು

ಮೂರು ಅಂಕಿನ ಹಾಸ್ಯರಸಪೂರ್ಣ
ಸಾಮಾಜಿಕ ನಾಟಕ.

ಬರೆದವರು: ಪ್ರೊ. ಎನ್. ಎಮ್. ಕುಲಕರ್ಣಿ
ಎಂ. ಎ. (ಬನಾರಸ)


## ಹದಿನಾರನೆಯ ಪ್ರಕಟನೆ

# ಚಿಕ್ಕ-ದೊಡ್ಡವರು

ದೊಡ್ಡವರಲ್ಲಿಯ ಚಿಕ್ಕತನ, ಚಿಕ್ಕವರಲ್ಲಿಯ ದೊಡ್ಡತನಗಳನ್ನು
ವಿನೋದಾತ್ಮಕವಾಗಿ ರೂಪಿಸಿರುವ
ಹರಟೆಗಳ ಸಂಗ್ರಹ.

ಬರೆದವರು: ಕೋ. ಶಿ. ಕಾರಂತ

ದೀಪದ



ಕೆಳಗೆ

ಮುಂದಿನ ಪ್ರಕಟನೆ

# ಬೈಗು—ಬೆಳಗು

ಬಾಳಿನ-ಬೈಗು-ಬೆಳಗುಗಳನ್ನು ಚಿತ್ರಿಸುವ
ಕೆಲವು ಕತೆಗಳ ಸಂಗ್ರಹ.

ಬರೆದವರು :

**ಆರ್. ಬಿ. ಸೇನ್**

ಮತ್ತು

**ಶಂಕರತನಯ**

೧

ಸಂಜೆಯ ಅಡಿಗೆ-ಅನ್ನವನ್ನೊಂದು ಮಾಡಿದರಾಯಿತು, ಮಧ್ಯಾಹ್ನದ ಸಾರು ಪಲ್ಲೆ ಭಕ್ಕರಿ ಎಲ್ಲವೂ ಮಿಕ್ಕಿದೆ ಎಂದು, ಮುಗ್ಗಲು ಮನೆಯ ಅಕ್ಕವ್ವನ ಮನೆಯಲ್ಲಿ ಸೂಸಿ ಬಹಳ ಹೊತ್ತು ಮಾತನಾಡುತ್ತ ಕುಳಿತಿದ್ದಳು. ಅದೆಷ್ಟೊ ಮಾತು ಕತೆ–ಹಾಳು ಹರಟೆ–ಹೊತ್ತು ಕಳೆಯುವುದಕ್ಕೆ ಸಾಧನ. ಅಕ್ಕವ್ವನ ಮನೆಯಲ್ಲಿ ಗಂಡಸರು ಮನೆಗೆ ಬರುವುದು ರಾತ್ರಿ ೧೦ ಗಂಟೆಗೆ. 'ಅದೇನು ಕೆಲಸವೊ ಹಾಳು ಕೆಲಸ. ಹೊತ್ತಿಗೆ ಸರಿಯಾಗಿ ಊಟಕ್ಕಾದರೂ ಬರಬಾರದೇ ?' ಎಂದು ಅವಳು ಗೊಣಗುಟ್ಟುವುದು ದಿನಾಲು ಇದ್ದದ್ದೆ.

ಅಂತೂ ಸೂಸಿ ದೀಪ ಹೊತ್ತಿಸಿದ ಅದೆಷ್ಟೊ ಹೊತ್ತಿನ ಮೇಲೆ ಹಟದಿಂದ ಹೊರಟಂತೆಯೇ ಹೊರಟಳು. ಅಕ್ಕವ್ವನು ಇನ್ನೂ ಎರಡು ತಾಸಾದರೂ ಅವಳನ್ನು ಬಿಡುವಂತಿರಲಿಲ್ಲ. ಆಗ ೮ ಗಂಟೆಯಾಗಿರಬೇಕು. ತುಂಬಾ ತಡವಾಯಿತಲ್ಲ ಎಂಬ ದುಗುಡ ಅವಳಿಗೆ. ಅವಳ ಗಂಡ ಶಾಮು ತನ್ನ ಸ್ಟೂಡಿಯೊ ಇಕ್ಕುವುದು ಸಂಜೆ ೮ ಗಂಟೆಗೆ. ಆ ಮೇಲೆ ಯಾರಾದರೂ ಗಿರಾಕಿಗಳು ಬಂದರೆ 'ನಾಳೆ ಬನ್ನಿರಿ' ಎಂದು ಹೇಳುವ. ಸ್ಟೂಡಿಯೊದಿಂದ ಮನೆಗೆ ಬರಲು ಬಹಳೆಂದರೆ ೧೫ ನಿಮಿಷದ ಹಾದಿ. ಅಂತೂ ೮॥ ಯೊಳಗಾಗಿ ಶಾಮನು ತಪ್ಪದೆ ಮನೆಯಲ್ಲಿರುವವನು. ಅವನು ಮನೆಗೆ ಬರುವುದರೊಳಗಾಗಿ ಎಲ್ಲವನ್ನು ಚೊಕ್ಕಟವಾಗಿರಿಸದಿದ್ದರೆ ಸೂಸಿಯ ಮನಸ್ಸಿಗೆ ನೆಮ್ಮದಿಯಾಗದು. ದಿನಾಲು ಇದ್ದಲಿ ಒಲೆಯ ಮೇಲೆ ಅನ್ನಕ್ಕಿಡುವವಳು. ಆದರೆ ಇಂದು ಮೊದಲಿಗೇ ತಡವಾದ್ದರಿಂದ ಕಟ್ಟಿಗೆ ಹಚ್ಚಿ ಅನ್ನ ಮಾಡುವುದೇ ಒಳಿತೆಂದು ಒಲೆ ಹೊತ್ತಿಸಿದಳು. ಅನ್ನಕ್ಕೆ ಇಟ್ಟಳು. ಒಲೆ ಎಷ್ಟು

ಉರಿದರೂ ಅವಳಿಗೆ ತೃಪ್ತಿಯಿಲ್ಲ. ತುಟಿಗೆ ಹಚ್ಚಿದ ಊದುಗೊಳುಬೆಯನ್ನು ಕೆಳಗಿಡಲಿಲ್ಲ. ಒಂದೇ ಸವನೆ ಸುರಿಯುತ್ತಲಿದ್ದ ಕಣ್ಣೀರಿನ ಕಡೆಗೆ ಅವಳ ಲಕ್ಷ್ಯವಿರಲಿಲ್ಲ.

ಅನ್ನವಂತೂ ಆಯ್ತಿತು. ಅವಸರದಲ್ಲಿ ಕಂದೀಲು ಸ್ವಚ್ಛವಾಡದೆ ಹಚ್ಚಿಬಿಟ್ಟಿದ್ದಳು. ಈಗ ಅದನ್ನು ಒರೆಸಿ ಸ್ವಚ್ಛ ಮಾಡಿದಳು. ಕಸ-ಹಾಸಿಗೆ ಮಾಡುವುದೂ ಹಾಗೆ ಉಳಿದಿತ್ತು. ಅದು ನೆನಪಾಗುತ್ಕಲೆ ಚಬಕದಿಂದ ಪೆಟ್ಟು ತಿಂದ ಕುದುರೆಯಂತೆ ಚಟ್ಟನೆ ಮೇಲಕ್ಕೆದ್ದಳು. ' ಈಗ ಶಾಮನು ಮನೆಗೆ ಬಂದರೆ ಹೇಗೆ ' ಎಂಬ ವಿಚಾರವು ಬರುತ್ತಲೆ ಹೃದಯವು ನಡುಗಿದಂತಾಯಿತು. ಬೇಸತ್ತು ಬಂದವನು ಈ ಅವ್ಯವಸ್ಥೆಯನ್ನು ನೋಡಿ ಅದೆಷ್ಟು ಜಿಗುಪ್ಸೆಗೊಳ್ಳುವನೋ! ಶಾಮನು ಕಲೋಪಾಸಕ; ಅವನಿಗೆ ಎಲ್ಲವೂ ಚೊಕ್ಕಟವಾಗಿರಬೇಕು, ಅಚ್ಚುಕಟ್ಟಾಗಿರಬೇಕು, ಸುಂದರವಾಗಿರಬೇಕು. ಮನೆಯಲ್ಲಿ ತೂಗು ಹಾಕಿದ ಚಿತ್ರಗಳ ಮೇಲೆ ಸ್ವಲ್ಪ ಸಹ ಧೂಳು ಕೂತಿರಬಾರದು. ಯಾವುದಾದರೂ ಒಂದು ಚಿತ್ರವು ಸ್ವಲ್ಪ ಬದಿಗೆ ಸರಿದಿದ್ದರೆ ಅದು ಕೂಡಲೆ ಅವನಿಗೆ ತಿಳಿದು ಬರುವುದು. ಮೊದಲು ಅದನ್ನು ಸರಿಯಾಗಿರಿಸಿ ಆ ಮೇಲೆ ಕೈಕಾಲು ತೊಳೆದುಕೊಳ್ಳಲು ಏಳುವನು. ಸೂಸಿ ಎಷ್ಟು ನೆನಪು ಮಾಡಿಕೊಂಡು ಎಲ್ಲವನ್ನೂ ಸರಿಯಾಗಿರಿಸಿದ್ದರೂ ಶಾಮನ ಕಣ್ಣಿಗೆ ಏನಾದರೂ ಒಂದು ತಪ್ಪು ಕಾಣಿಸುತ್ತಿತ್ತು. ಹೀಗಿರುವಾಗ ಮನೆಯು ಇಷ್ಟು ಅವ್ಯವಸ್ಥಿತವಾಗಿರುವಾಗ ಶಾಮನು ಬಂದುಬಿಟ್ಟರೆ ಹೇಗೆ! ಶಾಮನಿಗೆ ಶಾರೀರಿಕ ಶ್ರಮದೊಂದಿಗೆ ಮಾನಸಿಕ ಶ್ರಮವೂ ಹೆಚ್ಚುತ್ತಲಿದೆ. ಕೊಡಕೊಳ್ಳುವ ವ್ಯವಹಾರವು ಬೆಳೆದು ಇತರರಿಂದ ಬರುವ ಹಣ ಸಮಯಕ್ಕೆ ಸರಿಯಾಗಿ ಬಾರದೆ ಸಾಲಗಾರರ ಕೈಯಲ್ಲಿ ಸಿಕ್ಕು ಬಹಳ ಪೇಚಾಡುತ್ತಿದ್ದಾನೆ ಎಂಬುದನ್ನು ಅವಳು ಬಲ್ಲಳು. ಮೊದಲೇ ಬೇಸತ್ತು ಬಂದಿದ್ದಾನೆ ಎಂದು ಮುಗುಳುನಗೆಯೊಡನೆ ಅವನನ್ನು ಸ್ವಾಗತಿಸುವಳು. ನಗುತ್ತಲೆ ಮಾತನಾಡುವಳು. ಅವನ ಮನಸ್ಸಿಗೆ ಸ್ವಲ್ಪ ಅಸಮಾಧಾನವಾದರೂ ಇವಳಿಗೆ ಸಾವಿರ ಚೇಳು ಕಡಿದಷ್ಟು ವ್ಯಥೆಯಾಗುವುದು.

ಕಸ-ಹಾಸಿಗೆ ಆಯಿತು. ಶಾಮನು ಇನ್ನೂ ಬರಲಿಲ್ಲ. ಇದೀಗ ಬರಬಹುದು ಎಂದು ತಾಟು ಮಣೆಗಳನ್ನು ಹಾಕಿ ಕಾಲು ತೊಳೆಯುವು ದಕ್ಕೆ ನೀರು ತುಂಬಿಟ್ಟು ಪಡಸಾಲೆಗೆ ಬಂದು ಹೊರಗೆ ಇಣಿಕಿ ನೋಡಿದಳು. ರಸ್ತೆಯಲ್ಲಿ ಯಾರೊ ಒಬ್ಬಿಬ್ಬರು ಬರುತ್ತಿದ್ದರು. ಹೋಗುತ್ತಿದ್ದರು. ಆದರೆ ಅವರಲ್ಲಿ ಯಾರೂ ಶಾಮನಲ್ಲ. ಪಡಸಾಲೆಯಲ್ಲಿಯೆ ಗೋಡೆಗೆ ಆತು ಕುಳಿತು ಕೊಂಡಳು. ೧೦-೧೫ ನಿಮಿಷಗಳು ಕಳೆದಿರಬಹುದು. ಶಾಮು ಬರುವ ಲಕ್ಷಣಗಳು ಕಾಣಲಿಲ್ಲ. ಬೇಸರ ಬಂದಿತು. ಅರ್ಧ ಮುಗಿಸಿಟ್ಟ ಕಾದಂಬರಿ ಯೊಂದನ್ನು ತೆಗೆದುಕೊಂಡು ಓದುತ್ತ ಕುಳಿತಳು. ಕಥೆಯು ಮನವನ್ನು ಸೆಳೆದುಕೊಂಡಿದ್ದರಿಂದ ಕಾಯುತ್ತ ಕುಳಿತಾಗಿನ ಕಾತರಭಾವವು ಕೆಲ ಮಟ್ಟಿಗೆ ಕಡಿಮೆಯಾದಂತಾಯಿತು.

ಬಾಗಿಲಲ್ಲಿ ಯಾರೋ ಧುತ್ತೆಂದು ಬಂದು ನಿಂತರು. ಸೂಸಿ ಬೆಚ್ಚಿ ಒಮ್ಮೆಲೆ ನಡುಮನೆಯ ಬಾಗಿಲ ಹಿಂದೆ ಸರಿದುಕೊಂಡಳು. ಬಂದವರು ' ಶಾಮಣ್ಣನೋರು ಇದ್ದಾರೇನು ? ' ಎಂದು ಕೇಳಿದರು.

ಸೂಸಿ ಬಂದ ವ್ಯಕ್ತಿಯನ್ನು ಕಾಲಿನಿಂದ ನೆತ್ತಿಯ ವರೆಗೆ ಮರು ಮರು ನೋಡಿದಳು. ಅವನು ಬಂದ ರೀತಿಯ ಮೇಲಿಂದಲೆ ಅವನು ಯಾರೆಂಬುದು ಅವಳಿಗೆ ಹೊಳೆದಿತ್ತು; ಈಗ ಸ್ಪಷ್ಟವಾಯಿತು. ತಲೆ ಬಾಗಿಸಿ ಸಣ್ಣ ದನಿಯಲ್ಲಿ ' ಇಲ್ಲ ' ಎಂದಳು.

' ಇದು ನೋಡಿರಿ ! ಕಡೆಯ ಮಾತು ಹೇಳಿಹೋಗಬೇಕೆಂದು ನಾನು ನಿಮ್ಮ ಕಡೆ ಬಂದಿದ್ದೇನೆ. ಈ ಎರಡು ತಿಂಗಳು ನಿಮ್ಮ ತೊಂದರೆ-ತಾಪ ತ್ರಯ ಕೇಳಿದ್ದಾಯಿತು. ಆದರೆ ದಿನದಿನಕ್ಕೆ ಅವು ಬೆಳೆಯುತ್ತಲೆ ನಡೆ ದಿವೆ. ನಾನಾದರೂ ಏನು ಮಾಡಲಿ ? ಈ ತಿಂಗಳು ನಮ್ಮ ಮನೆಬಾಡಿಗೆ ಚುಕ್ತಾ ಆಗಬೇಕು. ಅವರೆ ಇದ್ದಿದ್ದರೆ ನೆಟ್ಟಗಾಗುತ್ತಿತ್ತು. ಆಯಿತು ನೀವು ಇದ್ದೀರಲ್ಲ. ಅವರಿಗೆ ನಾನು ಹೇಳಿದೆನೆಂದು ಹೇಳಿರಿ. ಕಡೆಗೆ ಹಾಗೆ ಹೀಗೆ ಎಂದು ಅಂದುಕೊಳ್ಳುತ್ತ ಅವರು ಕೂಡಬಾರದು. ಇದ್ದ ಸಂಗತಿ

ಸ್ಪಷ್ಟವಾಗಿ ಹೇಳಿಬಿಟ್ಟಿದ್ದೇನೆ.' ತನ್ನ ದರ್ಪದಲ್ಲಿಯೇ ಸೆಟೆದುನಿಂತು ಮಾತನಾಡಿದನು.

ಅವನ ಮಾತು ಮುಗಿಯುವ ವರೆಗೆ ಒಂದೇಸವನೆ ಇವಳ ಎದೆ ಬಡೆದುಕೊಳ್ಳುತ್ತಲಿತ್ತು. ಅವನ ಮಾತು ಮುಗಿಯುತ್ತಲೆ 'ಹೇಳತೇನೆ' ಎಂದಳು.

ಅವನು ಮರಳಿದ. ಒಂದು ದೊಡ್ಡ ಭಾರ ಇಳುಹಿದಂತಾಯಿತು ಸೂಸಿಗೆ. ಮೆಲ್ಲಗೆ ಒಂದು ಉಸಿರನ್ನು ಬಿಟ್ಟಳು. ಅದರ ಶಬ್ದವು ಕೇಳಬರ ದಿದ್ದರೂ ಹೃದಯವನ್ನು ಹಗುರುಮಾಡುವ ಗುಣವಿದ್ದಿತು ಆ ಉಸಿರಿನಲ್ಲಿ.

ಈ ಸ್ಥಿತಿಯಲ್ಲಿ ಶಾಮನು ಇನ್ನೂ ಏಕೆ ಬರಲಿಲ್ಲವೆಂಬ ವಿಚಾರವು ಅವಳಿಗೆ ಸಿಡಿಲಿನಂತೆ ತೋರಿತು. ಇಂತಹ ನೂರಾರು ಸಾಲಗಾರರನ್ನು ಅವನು ದಿನಾಲು ಸಮಾಧಾನಗೊಳಿಸಬೇಕು. ಅವನ ಧೈರ್ಯ-ಸ್ಥೈರ್ಯ ಗಳು ಹೆಚ್ಚಿನವು ಎಂದುಕೊಂಡಳು. ಒಮ್ಮೊಮ್ಮೆ ಶಾಮನಿಗೆ ಎಲ್ಲವೂ ಬೇಸರವೆನಿಸಬಹುದು. ಅವನು ಎಲ್ಲಿಯಾದರೂ ಹೋಗಬಲ್ಲ; ಏನಾದರೂ ಮಾಡಿ ತನ್ನ ಜೀವನವನ್ನು ನಿರಾತಂಕವಾಗಿ ಸಾಗಿಸಬಲ್ಲ. ತಾನೊಬ್ಬಳು ಅವನಿಗೆ ಕಾಲ್ತೊಡಕು. ತನಗಾಗಿ ಅವನು ಮನೆ ಮಾಡಿಕೊಂಡಿರಬೇಕು. ಮನೆ ಎಂದಮೇಲೆ ಬರುವವರು-ಹೋಗುವವರು ಇದ್ದೇ ಇರುವರು. ಶಾಮನಿಗೆ ತನ್ನ ಕೈ ಹಿಡಿದಾಗ ಸಂಕಟ ಪರಂಪರೆಗಳನ್ನೇ ಕೈಹಿಡಿದು ಕರೆ ಯುತ್ತಲಿರುವೆನೆಂಬುದರ ಕಲ್ಪನೆ ಬಂದಿರಲಾರದು ಎಂದು ಯೋಚಿಸಿದಳು.

ಅವಳ ವಿಚಾರಕ್ಕೆ ತಡೆ ಇರಲಿಲ್ಲ. ಗಲ್ಲಕ್ಕೆ ಕೈಕೊಟ್ಟು ಶೂನ್ಯ ದೃಷ್ಟಿ ಯಿಂದ ಎಲ್ಲಿಯೋ ನೋಡುತ್ತ ನಿಂತುಬಿಟ್ಟಿದ್ದಳು. ಶಾಮ ಬರದಿದ್ದರೆ ಇನ್ನೂ ಅದೆಷ್ಟು ಹೊತ್ತು ಹಾಗೇ ನಿಂತಿರುತ್ತಿದ್ದಳೊ! ಶಾಮ ಬಂದ. ಚಪ್ಪಲಿಯ ಸದ್ದಾಗುತ್ತಲೂ ಆ ಕಡೆ ಕಣ್ಣುಗಳನ್ನು ಹೊರಳಿಸಿದಳು. ಶಾಮ ಕಂಡ. 'ಯಾಕೊ ಎಷ್ಟು ಹೊತ್ತು ಮಾಡಿದಿರಿ ಇವತ್ತು?' ಎಂದು ಕೇಳಿದಳು.

'ಹೊತ್ತಾಯ್ತು' ಎನ್ನುತ್ತ ಹಾಗೆ ಒಳಗ ನಡೆದ. ಮೋರೆಯನ್ನು ಈ ಕಡೆ ತಿರುಗಿಸಲಿಲ್ಲ ಕೂಡ.

ಕೋಟು, ಶರ್ಟು ತೆಗೆದು ಕೈಕಾಲು ತೊಳೆದು ಊಟಕ್ಕೆ ಕುಳಿತ. ಸಂಪೂರ್ಣವಾಗಿ ಮೌನವು ಅವನನ್ನು ಆವರಿಸಿಕೊಂಡಿದ್ದಿತು. ದಿನಾಲು ಮನೆಗೆ ಬರುತ್ತಲೆ ಮಾತಿನ ಮಳೆಗೆ ಪ್ರಾರಂಭವಾಗಬೇಕು; ಇಂದೇಕೆ ಎಂದಿಲ್ಲದ ಈ ಮೌನ ಎಂಬುದರ ಅರ್ಥವು ಸೂಸಿಗೆ ಹೊಳೆಯಲಿಲ್ಲ. ಮೊದಲು ಹಾಕಿದ ಅನ್ನದಲ್ಲಿಯೇ ತುಪ್ಪಅನ್ನ, ಸಾರುಅನ್ನವಾಯಿತು. ಮಜ್ಜಿಗೆ ಅನ್ನಕ್ಕೂ ಅದರಲ್ಲಿಯೇ ಸ್ವಲ್ಪ ಇಟ್ಟುಕೊಂಡಿದ್ದ. ಸೂಸಿ ಅನ್ನ ಬಡಿಸಲು ಬಂದಳು, ಶಾಮು ಬೇಡವೆಂದ.

'ಊಟವನ್ನೆ ಮಾಡಲಿಲ್ಲ?' ಸೂಸಿ ಕೇಳಿದಳು.

'ಹಸಿವೆಯಿಲ್ಲ' ಎಂದು ಒಂದೇ ಶಬ್ದದಲ್ಲಿ ಉತ್ತರ.

ಮನೆಯ ಯಜಮಾನನು ಬಾಡಿಗೆಯ ವಿಚಾರವಾಗಿ ಹೇಳಿ ಹೋದ ಮಾತನ್ನು ಶಾಮುನಿಗೆ ತಿಳಿಸಬೇಕಿತ್ತು. ಆದರೆ ಧೈರ್ಯ ಸಾಲದು. ತುದಿಯ ನಾಲಗೆಯ ವರೆಗೆ ಬಂದುದನ್ನು ಮತ್ತೆ ತಡೆದು ಹಿಡಿಯುತ್ತಲಿದ್ದಳು. ಶಾಮುನು ಸರಿಯಾಗಿ ಒಂದಾದರೂ ಮಾತನಾಡಿದರೆ ಹೇಳೋಣ ಎಂದು ಕಾದಿದ್ದಳು. ಆದರೆ ಶಾಮುನ ಮೋರೆಯ ಮೇಲಿನ ಗಂಟುಗಳು ಬಿಚ್ಚಲಿಲ್ಲ. ತನ್ನ ಗುಂಗಿನಲ್ಲಿಯೇ ಮಗ್ನನಾಗಿದ್ದ.

ಕೊನೆಗೆ ಸೂಸಿಯೆ ಮಾತಿಗೆ ಪ್ರಾರಂಭಮಾಡಿದಳು. 'ಗಿರಾಕಿಗಳು ಬಹಳ ಇದ್ದವೇನೋ? ಕೆಲಸಾನೂ ಬಹಳೇ ಆಗಿರಬೇಕಲ್ಲ!'

'ನಾನು ಸ್ಟೂಡಿಯೊ ತೆರೆಯಲೇ ಇಲ್ಲ.'

'ಹಾಗಾದರೆ ಎಲ್ಲಿಗೆ ಹೋಗಿದ್ದಿರಿ?'

'ಹೀಗೇ ಹೋಗಿದ್ದಿವಿ ಒಂದು ಕೆಲಸದ ಮೇಲೆ.'

ಅಂತೂ ಒಮ್ಮೆ ರೈಲುಗಾಡಿಯು ಹಳಿಯನ್ನೇರಿತು. ಇನ್ನೇನು ಚಿಂತೆಯಿಲ್ಲ ಎಂದುಕೊಂಡಳು ಸೂಸಿ. ಆವನ ಸಂಗಡ ಮಾತನಾಡಬೇಕೆಂಬ ಲವಲವಿಕೆಯು ಹೆಚ್ಚಿತು. ಅವನ ಮೋರೆಯ ಮೇಲೆ ನಗೆಮುಗುಳು ಒಡೆದುದನ್ನು ನೋಡಿಯೆ ತೀರಬೇಕೆಂಬ ಹಟದಿಂದ 'ಸಿನೇಮಾ ಏನಾದರೂ ಒಳ್ಳೆಯದು ಬಂದಿತ್ತೇನು?' ಎಂದಳು.

'ಹೂ ಸಿನೇಮಾ. ನಮ್ಮದೇ ಒಂದು ಸಿನೇಮಾ ಆಗುತ್ತಿರುವಾಗ ರೊಕ್ಕ ಕೊಟ್ಟು ಬೇರೆ ಸಿನೇಮಾ ಏಕೆ ನೋಡಬೇಕು' ಎಂದು ಆ ವಿಷಣ್ಣ ವದನದಲ್ಲಿಯೆ ಒಂದು ಬಗೆಯ ನಗೆಯನ್ನು ಮೂಡಿಸಲು ಯತ್ನಿಸಿದ ಶಾಮು. ಸೂಸಿಗೆ ಅವನ ಮಾತಿನ ಅರ್ಥವಾಗದಿದ್ದರೂ ಆ ನಗೆಯು ಅದೆಷ್ಟೋ ಮಾತುಗಳನ್ನು ಸೂಚಿಸಿತು. ಉದ್ದರಿಯಾಗಿ ಫೋಟೊ ತೆಗೆದುಕೊಟ್ಟು ಅವರ ಮನೆಗೆ ಎಡತಾಕಬೇಕು. ಹಣ ಕೊಟ್ಟವರೂ ನಮ್ಮವರೆ, ಕೊಡ ದಿದ್ದವರೂ ನಮ್ಮವರೆ ಎಂದು ಸಮಾಧಾನ ತಾಳಿಕೊಂಡಿರಬೇಕು. ಸ್ವಲ್ಪ ಸಿಟ್ಟಾದರೆ–ಬಿರುಸು ಮಾತನಾಡಿದರೆ ಋಣಾನುಬಂಧವೆ ಕಡಿದುಹೋಗು ವುದು. ಇದ್ದ ನಾಲ್ಕಾರು ಗಿರಾಕಿಗಳನ್ನು ಕಳೆದುಕೊಳ್ಳಬೇಕಾಗುವುದು. ಇತ್ತ ಸಾಹುಕಾರರಿಗಾದರೂ ಎಷ್ಟೆಂದು ಸುಳ್ಳು ಹೇಳಿ ಹೇಳಿ ದಿನಗಳನ್ನು ನೂಕುವುದು! ಇದು ಶಾಮುನ ನಿತ್ಯಜೀವನವಾಗಿತ್ತು. ಆದರೆ ಇಂದು ಅವನ ಹೃದಯಕ್ಕೆ ವಿಶೇಷ ಪೆಟ್ಟು ತಗಲಿದೆ ಎಂದುಕೊಂಡಳು. ಅವಳು ಏನೊಂದೂ ಉತ್ತರ ಕೊಡಲು ಯತ್ನಿಸಲಿಲ್ಲ.

ಶಾಮುನ ಊಟವಾಯಿತು. ಹಾಸಿಗೆಯಮೇಲೆ ಬಿದ್ದುಕೊಂಡ. ಸೂಸಿಯೂ ಊಟದ ಶಾಸ್ತ್ರವನ್ನು ಮುಗಿಸಿದಳು. ಎಂಜಲುಗೋಮು ಮಾಡಲೂ ಅವಳಿಗೆ ಮನಸ್ಸಾಗಲಿಲ್ಲ. ಎಲ್ಲವನ್ನು ಹಾಗೆ ಬಿಟ್ಟು ಮಲ ಗುವ ಕೋಣೆಗೆ ಬಂದಳು.

ಶಾಮುನು ಪಿಳಿಪಿಳಿ ಕಣ್ಣುಗಳನ್ನು ಬಿಡುತ್ತ ಮಾಳಿಗೆಯನ್ನೆ ನೋಡುತ್ತ ಎರಡೂ ಕೈಗಳನ್ನು ತಲೆಗೆ ಆಸರವಾಗಿಟ್ಟುಕೊಂಡು ಮಲಗಿದ್ದ. ಸೂಸಿ ಶಾಮುನ ಹಾಸಿಗೆಯ ಬಳಿ ಕುಳಿತುಕೊಂಡಳು. ಶಾಮುನ ತಲೆಯ ಮೇಲೆ ಕೈಯನ್ನಿಟ್ಟು 'ಏಕೆ ಬಹಳ ಆಯಾಸವಾಗಿದೆಯೇನು?' ಎಂದು ಕೇಳಿದಳು.

'ಏನಿಲ್ಲ. ನೀನೇಕೆ ಇಷ್ಟು ಬೇಗ ಊಟ ಮುಗಿಸಿದೆ!'

'ಎಷ್ಟು ಬೇಗವಾದರೂ ನಿಮ್ಮಕಿಂತಲೂ ಹೆಚ್ಚು ಉಂಡಿದ್ದೇನೆ.'

ಶಾಮುನಿಗೆ ಒಮ್ಮಿಲೆ ಏನೊ ನೆನಪಾದಂತಾಯಿತು. 'ಮನೆಗೆ ಯಾರಾ ದರೂ ಬಂದಿದ್ದರೇನು!'

ಮನೆಯ ಬಾಡಿಗೆಗಾಗಿ ಬಂದಿದ್ದವನ ವಿಷಯ ಹೇಳಿಬಿಡಬೇಕು ಎಂದು ನಿಶ್ಚಯಿಸಿದಳು. ಆದರೆ ನಾಲಗೆ ಏಳಲೇ ಇಲ್ಲ. ಹಾಲಲ್ಲಿ ಸಕ್ಕರೆ ಬೆರೆಸುವ ಬದಲು ಉಪ್ಪು ಬೆರೆಸಲು ಬಯಸಲಿಲ್ಲ. 'ಆ' ಎಂದವಳೆ ಅಷ್ಟಕ್ಕೇ ತಡೆದು ' ಯಾರಿಲ್ಲ ' ಎಂದುಬಿಟ್ಟಳು.

' ಸ್ಟೂಡಿಯೊ ಪ್ರಾರಂಭಿಸುವಾಗ ಹೊಲ ಬರೆಯಿಸಿಕೊಂಡು ಸಾಲ ಕೊಟ್ಟಿದ್ದನಲ್ಲ ಆ ಸಿದ್ದಪ್ಪಣ್ಣ. ಅವನ ಭೆಟ್ಟಿಯಾಯಿತು. ಬಾಯಿಗೆ ಬಂದಂತೆ ಮಾತನಾಡಿದ. ಹೊಲ ಮಾರಿಬಿಟ್ಟು ಅವನ ಸಾಲತೀರಿಸಿಬಿಡ ಬೇಕೆಂದು ನಿಶ್ಚಯಿಸಿದ್ದೇನೆ. ಅಂತೂ ಸೂಸಿ ಬಹಳ ದಿನ ಹೀಗೆ ನಡೆಯು ಲಾರದು ' ಎಂದು ಉಸಿರುಬಿಟ್ಟ ಶಾಮು.

ಹಿರಿಯರ ಕಾಲದಿಂದ ನಡೆದುಬಂದ ಎಷ್ಟು ಒಳ್ಳೆಯ ಹೊಲ ಇಷ್ಟು ಹಗುರಾಗಿ ಹೋಗಿಬಿಟ್ಟಿತಲ್ಲ. ಅನೇಕ ಸಲ ಬೇಸತ್ತಕಾಲಕ್ಕೆ ಶಾಮು ಯಾವುದಾಗದಿದ್ದರೂ ಸರಿ ನಮ್ಮ ಗುಡ್ಡದ ಓರೆಯ ಹೊಲವೊಂದಿದೆಯಲ್ಲ, ಎರಡು ಹೋರಿಮಾಡಿ ನೇಗಿಲ ಹೊಡೆದುಕೊಂಡು ರಾಜ-ರಾಣಿಯಂತೆ ಇರೋಣ ಎಂದು ಹೇಳಿಕೊಳ್ಳುತ್ತಿದ್ದ. ಆ ಕೊನೆಯ ಆಸರವೂ ಈಗ ಕೈಬಿಟ್ಟಂತಾಯಿತು. ಸೂಸಿಗೆ ತಾವು ಇನ್ನು ನಿರಾಧಾರರು ಎಂಬ ವಿಚಾ ರವು ಬಹಳ ತೊಂದರೆ ಕೊಟ್ಟಿತು.

ಪತಿಯನ್ನು ದಿಟ್ಟಿಸಿದಳು. ಶಾಮನ ಕಣ್ಣುಗಳು ಅರೆಮುಚ್ಚಿ ಕೊಳ್ಳುತ್ತಲಿದ್ದವು. ತನ್ನ ಹಿತಕ್ಕಾಗಿ ಸತತವೂ ಚಿಂತಿಸುತ್ತಲಿರುವ ಈ ದೇವನಿರುವಾಗ ನಾನೇಕೆ ನಿರಾಧಾರಳು ಎಂದು ತನಗೆ ತಾನೆ ಕೇಳಿ ಕೊಂಡಳು. ಶಾಮನ ಹಣೆಯಮೇಲೆ ಇಟ್ಟಿದ್ದ ಅವಳ ಕೈಯಲ್ಲಿ ಇನ್ನಿಷ್ಟು ಭಾರವು ತಾನಾಗಿಯೆ ಇಳಿಯಿತು. ಶಾಮನ ಮೇಲೆ ಹಾಗೆ ಹೊರಳಿಬಿಡ ಬೇಕು ಎಂದು ಅವಳಿಗೆ ಆಸೆಯಾಯಿತು. ಆ ಹವಣಿಕೆಯಲ್ಲಿರುವಾಗಲೆ ಶಾಮು ಅವಳ ಕಡೆ ಕಣ್ಣು ಹೊರಳಿಸಿದ.

ಆ ಕಣ್ಣುಗಳ ಕುಣಿಕೆಯಲ್ಲಿ ಮುಗುಳುನಗೆಯ ಸೆಳಕು ಮಿನುಗುತ್ತ ಲಿತ್ತು. ಬಾಳಿನ ಕಾರ್ಗತ್ತಲೆಯಲ್ಲಿ ಯಾವ ಆಶಾಕಿರಣವು ಅವನಿಗೆ ಕಂಡಿತೊ !

೨

ಅವಳ ಕೈಗಳನ್ನು ಗಟ್ಟಿಯಾಗಿ ಹಿಡಿದುಕೊಂಡ. ಅವನಿಗೆ ಈಗ ಸಾಲಗಾರರ ಕಾಟದ ಅರಿವು ಇರಲಿಲ್ಲ. ತನ್ನ ಜೀವನವನ್ನು ಹೇಗೆ ಸಾಗಿಸಲಿ ಎಂಬ ಚಿಂತೆಯೂ ಇರಲಿಲ್ಲ. ಜಗತ್ತಿಗೆ ಇಂದು ಅವನು ಬೇಡವಾಗಿರಬಹುದು. ಎಲ್ಲರೂ ಅವನನ್ನು ತಿರಸ್ಕೃತನಂತೆ ನೋಡುತ್ತಿರಬಹುದು. ಅವನ ಇರುವಿಕೆಯ ಕಡೆಗೆ ಆಗು-ಹೋಗುಗಳ ಕಡೆಗೆ ಯಾರ ಗಮನವೂ ಇರದಿರಬಹುದು; ಆದರೆ ಅವನ ಬಾಳುವೆಯೊಂದಿಗೆ ಬೆರೆತುಕೊಂಡ ಜೀವ ಇನ್ನೊಂದಿದೆ. ಅವನ ಸುಖ-ದುಃಖಗಳೇ ಅವಳ ಸುಖ-ದುಃಖಗಳು; ಅವನು ನಕ್ಕರೆ ನಗುವಳು; ಅತ್ತರೆ ಅಳುವಳು. ಅವಳು ಸಂತೋಷವಾಗಿರಲಿ, ನಗುತ್ತಲಿರಲಿ ಎಂದಾದರೂ ಅವನು ಸಂತೋಷವಾಗಿರಬೇಕು. ನಗಬೇಕು. ಈ ಎಲ್ಲ ಯೋಚನೆಗಳು ಅವನ ತಲೆಯಲ್ಲಿ ಒಂದರಹಿಂದೊಂದು ಬಂದವು. ಶಾಮನು ಸೂಸಿಯ ನಡುವಿನ ಮೇಲೆ ಕೈಯನ್ನಿರಿಸಿದ. ಸೂಸಿ ಶಾಮನ ಬದಿಯಲ್ಲಿಯೆ ಒರಗಿದಳು.

ಶಾಮನ ಕೈ ಅವಳ ಬೆನ್ನ ಮೇಲೆ ಆಡುತ್ತಲಿತ್ತು. ಆ ಕೈ ಹಾಗೆ ಮೇಲಕ್ಕೆ ಸರಿಯುತ್ತ ತಲೆಯಕಡೆಗೆ ಬಂದಿತು; ತುರುಬಿನಮೇಲೆ ನಿಂತಿತು; ಬಹಳ ಹೊತ್ತಿನ ವರೆಗೆ ನಿಂತಿತು. ಆ ತುರುಬು ಬಂಗಾರದ ಮೊಗ್ಗೆಯ ಮಾಲೆಯನ್ನು ಕಳೆದುಕೊಂಡು ಆರು ತಿಂಗಳಾದರೂ ಆಗಿರಬಹುದು. ಹಬ್ಬ-ಹುಣ್ಣಿಮೆಯ ದಿನ ಬಿಳೀ ಪತ್ತಲವನ್ನುಟ್ಟು ಮೊಗ್ಗೆಯಮಾಲೆಯನ್ನು ಮುಡಿದಳೆಂದರೆ ಆಯಿತು ಅವಳ ಶೃಂಗಾರ. ಅವಳ ಎಲ್ಲ ವೈಭವವೂ ಇದ್ದುದು ಆ ಮೊಗ್ಗೆಯಮಾಲೆಯಲ್ಲಿ. ಅದನ್ನು ಹೇಗಾದರೂ ಮಾಡಿ ಹಬ್ಬದ ಹೊತ್ತಿಗೆ ಒತ್ತಿಬಿಡಿಸಿಕೊಂಡು ಬರುವೆನೆಂದು ವಚನ ಕೊಟ್ಟಿದ್ದ. ಹಬ್ಬವಂತೂ ಬಂದೇ ಬಿಟ್ಟಿತು.

'ಅಕ್ಕವ್ವ ಹಬ್ಬದ ದಿನ ತಮ್ಮಲ್ಲಿ ಊಟಕ್ಕೆ ಬರಲು ಹೇಳಿದಳು. ಇವರಿಗೆ ಹೇಗೆ ತಿಳಿಯುವುದಿಲ್ಲವೊ ಒಬ್ಬಳನ್ನೆ ಊಟಕ್ಕೆ ಕರೆಯಲಿಕ್ಕೆ !' ಸೂಸಿ ನಗೆಯಾಡಿದಂತೆ ಅಂದಳು. ಏಕೆಂದರೆ ಸೂಸಿಯು ತನಗೆ ದೊರೆತ ಆಮಂತ್ರಣದ ವಿಷಯವಾಗಿ ಹೇಳಿದಾಗಲೆಲ್ಲ ಶಾಮು ಹೇಳುತ್ತಿದ್ದ ಮಾತನ್ನೂ ಇಂದು ತಾನೇ ಹೇಳಿ ಬಿಟ್ಟಿದ್ದಳು.

ಓಹೊ ಇವಳೂ ಹಬ್ಬದ ವಿಷಯವಾಗಿಯೆ ವಿಚಾರ ನಡೆಸಿದ್ದಾಳೆ. ಇನ್ನು ಎರಡನೆ ಮಾತು ಮೊಗ್ಗೆಯ ಮಾಲೆಯದು. ಅದನ್ನು ಮರೆಯಿಸಿ ಬಿಡಬೇಕೆಂದು 'ಹೋಗಿ ಬಾ ಅದರಲ್ಲೇನು ?' ಶಾಮುನಂದ.

'ನಾನೇನು ಒಲ್ಲೆ. ಮನೆಯಲ್ಲಿ ಮಾಡಿಟ್ಟ ಶಾವಿಗಿ ಮುಗ್ಗುತ್ತಲಿವೆ. ಯುಗಾದಿ, ವರ್ಷದ ತೊಡಕು; ಅನ್ನ ಸಾರು ಪಾಯಸ ಮಾಡುತ್ತೇನೆ. ಆದರೆ ಮೊದಲಿಗೇ ಹೇಳಿಟ್ಟಿರುತ್ತೇನೆ, ವರ್ಷದ ತೊಡಕಿನ ದಿವಸ ನೀವು ಓೀಗೆ ಗಂಟು ಮೋರೆ ಮಾಡಿಕೊಂಡು ಕುಳಿತರೆ ನಾನೇನು ಕೇಳುವವಳಲ್ಲ !' ಈಗ ಸೂಸಿಯ ಕೈ ಶಾಮುನ ಕೂದಲುಗಳನ್ನು ಸರಿಪಡಿಸುತ್ತಲಿತ್ತು.

ಕಳೆದ ವರ್ಷದ ಯುಗಾದಿಯು ಅವನಿಗೆ ನೆನಪಾಯಿತು. ಸೂಸಿಯು ಹೊಸದಾಗಿ ಮನೆಗೆ ಬಂದಿದ್ದಳು. ಪರದೇಶಿಯಂತೆ ಅಲ್ಲಿ ಇಲ್ಲಿ ಇದ್ದು ಜೀವನವನ್ನು ನೂಕಿದವನು ಈಗ ತನ್ನದೂ ಒಂದು ಮನೆಯನ್ನು ಮಾಡಿ ಕೊಂಡಿರುವ ಪ್ರಸಂಗ ಬಂದಿತು. ಡ್ರಾಯಿಂಗ ಪರೀಕ್ಷೆ ಪಾಸಾಗಿದ್ದ. ಮೊದಲಿನಿಂದಲೂ ಚಿತ್ರ ತೆಗೆಯುವುದರಲ್ಲಿ ಆಸಕ್ತಿ ಹೆಚ್ಚು. ಒಬ್ಬರ ಸ್ಟೂಡಿಯೊದಲ್ಲಿ ಕೆಲಸ ಮಾಡಿಕೊಂಡಿದ್ದ. ಕೆಲಸವು ಹೆಚ್ಚಾಗಿಯೇ ಇತ್ತು. ಕೆಲಸವೆಷ್ಟಿದ್ದರೂ ಸರಿಯೆ, ಮಾಡಿಕೊಂಡಿರಬಹುದು. ಆದರೆ ಕೆಲಸ ಕ್ಕಿಂತಲೂ ಕುರಕುರಿ ಹೆಚ್ಚಾದರೆ ಮನಸ್ಸು ಬೇಸರಗೊಳ್ಳುವುದು. ಹೊಸ ಜೀವನವು ಸ್ವತಂತ್ರವಾಗಿರಲಿ ಎಂದು ಆ ನೌಕರಿಯನ್ನು ಬಿಟ್ಟುಕೊಟ್ಟ. ಸ್ವತಂತ್ರ ಜೀವನದ ಕಲ್ಪನೆಯು ತುಂಬಾ ಸುಖಕರವಾಗಿತ್ತು. ಯಾರ ಹಂಗೂ ಇಲ್ಲದ ಜೀವನವೇ ಸ್ವರ್ಗವೆಂದು ಅವನಿಗೆ ತೋರಿತು. ಆದರೆ ಆ ಜೀವನದ ಹೊಳವು ಹಾಕುವುದು ಹೇಗೆ ? ಇದ್ದ ಹೊಲವೊಂದನ್ನು ಒತ್ತಿ ಹಾಕಿ ಸಾಲ ತೆಗೆದ. ಸ್ವತಂತ್ರ ಸ್ಟೂಡಿಯೊ ಪ್ರಾರಂಭಿಸಿದ.

ಇಂದಿಗೆ ಆ ಬದಲಾವಣೆಯಾಗಿ ಸರಿಯಾಗಿ ಒಂದು ವರ್ಷವಾಯಿತು. ಆ ವರ್ಷದ ತೊಡಕಿನ ದಿನ ತನ್ನ ಜೀವನದ ತೊಡಕು ಬಿಟ್ಟಿತು ಎಂದು ಭಾವಿಸಿಕೊಂಡಿದ್ದ. ಆದರೆ ಅಂದಿನ ತೊಡಕು ಇಂದಿಗೂ ಅವನಿಗೆ ತೊಡಕಾಗಿಯೆ ಉಳಿಯಿತು. ಒಂದು ವರ್ಷದ ನಂತರದಲ್ಲಿಯೂ ಅಂದಿನಂತೆಯೆ ಮುಂದೇನು ಎಂಬ ಯೋಚನೆಯಲ್ಲಿದ್ದಾನೆ. ಸ್ವತಂತ್ರ ಜೀವನದ ಸವಿಯನ್ನು ಉಂಡದ್ದಾಯಿತು. ಆದರೆ ಅದರಿಂದ ಸುಖ ಸಮಾಧಾನಗಳು ಮಾತ್ರ ದೊರೆಯಲಿಲ್ಲ. ನೌಕರಿಮಾಡುತ್ತಲಿದ್ದಾಗ ತನ್ನ ಕೆಲಸವಿಷ್ಟೇ ಎಂಬುದರ ಕಲ್ಪನೆಯಿತ್ತು; ನಿರ್ದಿಷ್ಟ ಕಾಲದ ವರೆಗೆ ಕೆಲಸಮಾಡುತ್ತಲಿದ್ದ. ಮಿಕ್ಕ ವೇಳೆಯಲ್ಲಿ ಸ್ವೇಚ್ಛೆಯಿಂದ ತಿರುಗಾಡಬಹುದಿತ್ತು ಯಜಮಾನನ ನಿಷ್ಠುರದ ಮಾತುಗಳನ್ನು ಗಾಳಿಗೆ ತೂರಿಬಿಟ್ಟು ತಲೆಯನ್ನು ತಣ್ಣಗೆ ಮಾಡಿಕೊಂಡು ತನ್ನ ಕೋಣೆಗೆ ಮರಳುತ್ತಲಿದ್ದ. ಈಗ ಸ್ಟುಡಿಯೊ ತೆಗೆದ ಮೇಲೆ ಯಾವಾಗಲೂ ಕೆಲಸವೇ. ತೀರಿತು ಎಂಬ ಮಾತೇ ಇಲ್ಲ. ಎಷ್ಟು ಕೆಲಸ ಮಾಡಿದರೂ ತೃಪ್ತಿಯಿಲ್ಲ. ಬಿಡುವು ಬೇಕು ಎಂದು ತನಗೆ ತಾನೇ ನಿರ್ಬಂಧನೆಗಳನ್ನು ಹಾಕಿಕೊಂಡಿದ್ದ. ರಾತ್ರಿ ಎಂಟು ಗಂಟೆಯ ಮೇಲೆ ಸ್ಟುಡಿಯೊ ತೆರೆಯುವಂತಿಲ್ಲ ಎಂಬುದು ಆ ನಿರ್ಬಂಧಗಳಲ್ಲಿ ಒಂದು. ಈ ನಿರ್ಬಂಧಕ್ಕಾಗಿ ಕೆಲವು ಗಿರಾಕಿಗಳನ್ನು ಅವನು ಕಳೆದುಕೊಳ್ಳಬೇಕಾಗುತ್ತಲಿತ್ತು. ಆದರೆ ಮನುಷ್ಯನಾದ ಮೇಲೆ ಅವನಿಗೆ ವಿಶ್ರಾಂತಿ ಬೇಡವೆ!

ನೌಕರಿ ಇದ್ದಾಗಿನ ಇನ್ನೊಂದು ಅನುಕೂಲತೆಯು ಅವನಿಗೆ ಈಗ ಇಲ್ಲದಂತಾಗಿತ್ತು. ತನ್ನ ಕೆಲಸಕ್ಕೆ ಸಿಗುತ್ತಲಿದ್ದ ಪ್ರತಿಫಲ ಎಷ್ಟೇ ಅಲ್ಪವಾಗಿರಲಿ ಅಷ್ಟರಲ್ಲಿಯೆ ತನ್ನ ಖರ್ಚಿನ ಬಾಬುಗಳನ್ನೆಲ್ಲ ಹೊಂದಿಸಿಕೊಳ್ಳಬಹುದಿತ್ತು. ಮಾತು ಕೊಟ್ಟ ಮೇರೆಗೆ ಕೊಡುವವರಿಗೆ ಸ್ವಲ್ಪಲ್ಲ ಸ್ವಲ್ಪಾದರೂ ಹಣವನ್ನು ಕೊಡಲು ಸಾಧ್ಯವಾಗುತ್ತಿತ್ತು. ಈಗ ಮಾತ್ರ ಎಲ್ಲವೂ ಅನಿಶ್ಚಿತ. ವ್ಯವಹಾರ ಬೆಳೆದಷ್ಟು ಲಾಭ ಹೆಚ್ಚು ಎಂದು ಉದಾರ ಹೃದಯದಿಂದ ಕೈ ಸಡಿಲುಮಾಡಿದ. ಇದರಿಂದ ಉದ್ದರಿ ಖಾತೆಯು ಬೆಳೆಯುತ ನಡೆಯಿತು. ಅವನು ಯಾರಿಗಾದರೂ ಕೊಡುವುದಿದ್ದರೆ ಅವರು ಗೆರೆಕೊರೆದಂತೆ ದಿನವನ್ನು ನಿಯಮಿಸಿ ಅಂದು ಅವನ ಬಾಗಿಲುಕಟ್ಟಿ ಕುಳಿತುಕೊಳ್ಳು

ತ್ತಿದ್ದರು. ಜೀವವನ್ನು ಒತ್ತಿ ಇಟ್ಟಾದರೂ ಮರ್ಯಾದೆಯನ್ನು ಕಾಯ್ದು ಕೊಳ್ಳದೆ ನಿರ್ವಾಹವಿಲ್ಲ. ಅವನಿಗೆ ಹಣ ಕೊಡಬೇಕಾಗಿದ್ದವರು ಮಾತ್ರ ಏನೂ ಆಯಾಸವಿಲ್ಲದೆ, ಸಂಕೋಚಪಟ್ಟುಕೊಳ್ಳದೆ ಒಂದೊಂದು ತಿಂಗಳು ಕೆಲವು ಸಲ ನಾಲ್ಕಾರು ತಿಂಗಳು ಹಾಯಾಗಿ ಮುಂದಕ್ಕೆ ನೂಕಿ ಬಿಡುತ್ತಿದ್ದರು.

ವ್ಯವಹಾರದಲ್ಲಿ ಈ ಬಗೆಯ ಸಿಥಿಲತೆ ಉಂಟಾಗಲು ಕಾರಣವೇನು ಎಂಬುದೆ ಅವನಿಗೆ ಬಿಚ್ಚಲಾರದ ಒಗಟಾಗಿತ್ತು. ಆದರೂ ಇದಕ್ಕೆ ಎರಡು ಬಗೆಯಾಗಿ ಉತ್ತರ ಕೊಟ್ಟುಕೊಳ್ಳುತ್ತಲಿದ್ದ. ಮೊದಲನೆಯದಾಗಿ ಅವನ ಉದ್ದರಿ ಗಿರಾಕಿಗಳಲ್ಲಿದ್ದ ಮನೋದಾರ್ಢ್ಯ ಹಾಗು ಸ್ಪಷ್ಟೋಕ್ತಿ ಅವನಲ್ಲಿರಲಿಲ್ಲ. ನಂಬುವಂತೆ ಸುಳ್ಳು ಹೇಳುವ ಕಲೆಯೂ ಅವನಿಗೆ ಸಾಧಿಸಿರಲಿಲ್ಲ. ಒಂದು ವಾರದ ಮೇಲೆ ಬನ್ನಿರಿ ಎಂದು ನೂರನೆಯ ಸಲ ಹೇಳುವಾಗಲೂ ಉದ್ದರಿ ಗಿರಾಕಿಗಳು ಪ್ರದರ್ಶಿಸುತ್ತಲಿದ್ದ ಸ್ಥಿರತೆ ಹಾಗು ಗಾಂಭೀರ್ಯಗಳು ಅವನು ಮೂರನೆಯ ಸಲ ತನ್ನ ಸಾವುಕಾರರಿಗೆ ಹೇಳುವಾಗಲೂ ಉಳಿಯುತ್ತಿರಲಿಲ್ಲ. ಮೋರೆಯು ಪೆಚ್ಚಾಗುತ್ತಿತ್ತು. ವಚನವನ್ನು ಮುರಿದುದಕ್ಕಾಗಿ ತಾನೇ ನಾಚಿಕೊಳ್ಳುತ್ತಿದ್ದ. ಎರಡನೆಯದಾಗಿ ಅವನ ಮುಖದ ಮೇಲೆ ಹಣ ವಸೂಲಿ ಮಾಡುವವನ ಚಿಹ್ನಗಳೇ ಇರಲಿಲ್ಲ. ಹಣ ವಸೂಲಿ ಮಾಡುವವನಕಿಂತಲೂ ದೇಶಾವರಿ ಕೇಳಬಂದವನಂತೆ ಗಿರಾಕಿಗಳಲ್ಲಿ ಅಂಗಲಾಚಿ ಕೇಳುತ್ತಿದ್ದ. ಈ ಕಾಲದಲ್ಲಿ ದರ್ಪಕ್ಕೆ ಬೆಲೆ ಇದೆಯೆ ವಿನಃ ದೈನ್ಯವನ್ನು ಯಾರು ಕೇಳಬೇಕು. ಅಂತೆಯೆ ಶಾಮನು ಜನರ ದೃಷ್ಟಿಯಲ್ಲಿ ಅವ್ಯವಹಾರಿ ಎಂದು ತೀರ್ಮಾನವಾಯಿತು.

“ ಈ ಸ್ಟೂಡಿಯೊ ಎಂದು ಮುಚ್ಚಿ ಬಿಡುವೆನೊ ಎಂದೆನಿಸುತ್ತಿದೆ. ಅಲ್ಲಿಯ ವರೆಗೆ ನನ್ನ ಜೀವಕ್ಕೇನು ಸಮಾಧಾನವಿಲ್ಲ. ಸ್ಟೂಡಿಯೊ ಮುಚ್ಚಬೇಕು, ಐದಾಗಲಿ ಹತ್ತಾಗಲಿ ತಪ್ಪದೆ ಬರುವಂತಹ ನೌಕರಿ ಸಿಗಬೇಕು. ಅಂದರೆ ನನ್ನ ಎಲ್ಲ ಯೋಚನೆಗಳು ದೂರಾಗುತ್ತವೆ. ನಾನೂ ಒಬ್ಬ ಮನುಷ್ಯನಾಗುತ್ತೇನೆ. ವರ್ಷದ ತೊಡಕಿನ ದಿವಸವಷ್ಟೆ ಅಲ್ಲ ದಿನಾಲು ನಗುತ್ತಲಿರುತ್ತೇನೆ. ’

'ಏನು ನೌಕರಿಯೊ ಏನೊ. ಆ ಸುಖವನ್ನೂ ಉಂಡಾಗಿದೆಯಲ್ಲ. ಅದೇನು ನಿಮಗೆ ಹೊಸದಲ್ಲ. ಅಕ್ಕವ್ವನ ಗಂಡನಿಗೂ ನೌಕರಿ ಅದೆ ಎನ್ನುವ ಸಮಾಧಾನ ಮಾತ್ರ. ಮನೆಗೆ ಬರುವುದು-ಬಾರದೆ ನಿರ್ವಾಹವಿಲ್ಲದ್ದರಿಂದ. ಮನೆಗೆ ಬಂದ ಶಾಸ್ತ್ರ ಮಾಡುವುದು. ಕೂತುಕೊಂಡು ಎರಡು ಮಾತನಾಡುವುದಕ್ಕೂ ಅವಕಾಶವಿಲ್ಲ. ಯಾವಾಗ ನೋಡಿದರೂ ದುಗದುಗಿ. ಈ ಪರಿ ದುಡಿದು ಸಾವುಕಾರನನ್ನು ಸಂತೋಷಗೊಳಿಸಿ ಮಾಡುವುದಾದರೂ ಏನು ?'

'ಹಾಗಾದರೆ ಏನು ಮಾಡಬೇಕು? ಆ ರಂಗಾಚಾರಿಗೆ ಏನು ಕಡಿಮೆಯಾಗಿದೆ ಎಂದು ಹೊಸ ಸ್ಟುಡಿಯೊ ಪ್ರಾರಂಭಿಸಿದ? ಅದೂ ನನ್ನ ಸ್ಟುಡಿಯೊದ ಎದುರಿಗೆ! ಅವನಿಗೇನು ನಾನು ಅಂತಹದು ಮಾಡಿದ್ದೆ? ಮೊದಲಿನ ೪-೬ ತಿಂಗಳು ನನ್ನ ವ್ಯವಹಾರವೇನು ಇಷ್ಟೊಂದು ಕೆಟ್ಟಿರಲಿಲ್ಲ. ಆದರೆ ರಂಗಾಚಾರಿಗೂ ನನಗೂ ಸರಿಯೆ, ಜೋಡಿಯೆ? ಅವರಪ್ಪ ದುಡದು ಇಟ್ಟದ್ದನ್ನು ಅವ, ಅವನ ಮಗ ಕುಳಿತುಕೊಂಡು ತಿಂದರೂ ತೀರುವ ಹಾಗಿಲ್ಲ. ಅವನ ಈ ಕಾಂಪಿಟೇಶನ್ ನಾನು ಹೇಗೆ ತಡೆದುಕೊಳ್ಳಲಿ. ಅವನಿಗೆ ಬೇರೆ ಉದ್ಯೋಗ-ಧಂದೆ ಕಂಡಿರಲಿಕ್ಕೇ ಇಲ್ಲವೆ? ನಮ್ಮ ಜನರ ಹಣೇಬರಹವೇ ಇಷ್ಟು. ಯಾರಾದರೂ ಒಂದು ಕೆಲಸವನ್ನು ಪ್ರಾರಂಭಿಸಿದರೆ ಅಲ್ಲಿಯೆ ಇರುವೆಯಂತೆ ಮುಕರಿಬಿಡುವುದು. ಹೊಸಹೊಸದಾಗಿ ಯೋಚನೆ ಮಾಡಿ ಹೊಸ ಕೆಲಸಗಳನ್ನು ಹುಡುಕಿ ತೆಗೆಯುವ ಬುದ್ಧಿಯೇ ಇಲ್ಲ!'

ಕನ್ನಡಿಗರೊ ಕುರಿಹಿಂಡೊ ಎಂಬ ವಿಷಯವನ್ನಿಟ್ಟುಕೊಂಡು ಬೇಕಾದ ಹಾಗೆ ತಾಸೆರಡುತಾಸು ಉಪನ್ಯಾಸ ಕೊಡಬಲ್ಲೆ ಎಂದೆನಿಸಿತು ಶಾಮನಿಗೆ. ಹೈಸ್ಕೂಲಿನಲ್ಲಿರುವಾಗಲೆ ತನಗೆ ಇಷ್ಟೊಂದು ಅನುಭವವು ಬಂದಿದ್ದರೆ ತಾನೇ ಡಿಬೇಟಿಂಗ ಸೆಕ್ರೆಟರಿಯಾಗುತ್ತಿದ್ದೆ ಎಂದುಕೊಂಡ.

ತಾನು ಹೊಸದಾಗಿ ಸ್ಟುಡಿಯೊ ಪ್ರಾರಂಭಿಸಿದಾಗ ಕೇಣೀಕರ ಸ್ಟುಡಿಯೊದವರು ಅಂದಮಾತು ಅವನಿಗೆ ಪಕ್ಕನೆ ನೆನಪಾಯಿತು. ಆ ಪ್ರಾಂತಕ್ಕೆಲ್ಲ ಕೇಣೀಕರ ಸ್ಟುಡಿಯೊ ಅತ್ಯಂತ ಪ್ರಾಚೀನವಾದದ್ದು ಹಾಗು ಅಷ್ಟೇ

ಪ್ರಸಿದ್ಧವಾದದ್ದು. ಫೋಟೊ ಎಂಬುದು ಯಕ್ಷಿಣಿ ವಿದ್ಯೆ ಎಂದು ಜನರು ಭಾವಿಸಿದ್ದಾಗ ಅವರ ಸ್ಟೂಡಿಯೊ ಜನ್ಮತಾಳಿತು. ಫೋಟೊ ಎಂಬುದು ಒಂದು ಕಲೆ, ವಿವಿಧ ಮುಖವಾಗಿ-ವಿವಿಧ ರೀತಿಯಲ್ಲಿ ಬದಲಾವಣೆಗಳಿಗೆ ಈಡಾಗುವ ಮನುಷ್ಯ ಜೀವನದ ಸನ್ನಿವೇಶಗಳನ್ನು ಸಂಗ್ರಹಿಸಿಡಲು ಅತ್ಯವಶ್ಯಕವಾದ ಸಾಧನ ಎಂದು ಜನರು ಭಾವಿಸುವ ವರೆಗೆ ಅದು ಜೀವಿಸಿಕೊಂಡು ಬಂದಿದೆ. ಅಂತೆಯೆ ಇನ್ನು ಮುಂದೆಯಾದರೂ ಫೋಟೊ ತೆಗೆಯುವುದು ಅನಂತಕಾಲದ ವರೆಗೆ ತಮ್ಮ ಸೊತ್ತಾಗಿರಬೇಕೆಂಬುದೆ ಅವರ ಮನೀಷೆ.

' ಇಂತಹ ಹುಡುಗರೆಲ್ಲ ಸ್ಟೂಡಿಯೊ ತೆಗೆಯುವ ಸಾಹಸ ಮಾಡಿದ ರೆಂದೆ ವ್ಯವಹಾರವೆಲ್ಲ ಕೆಟ್ಟು ಹೋಯಿತು ' ಎಂದು ಕೇಣೀಕರರು ಶಾಮ ನನ್ನು ಟೀಕಿಸಿದ್ದರು. ಫೋಟೊ ತೆಗೆಯುವುದನ್ನು ಇವರಿಗೆ ಯಾರೂ ಜಹ ಗೀರಿ ಹಾಕಿ ಕೊಡಲಿಲ್ಲ ಎಂದು ಶಾಮ ಉತ್ತರ ಕೊಟ್ಟಿದ್ದ. ಅವರ ದಾದರೂ ಏನು ತಪ್ಪು. ಹೊಟ್ಟೆಯ ಹೋರಾಟದಲ್ಲಿ ಯಾರಿಗೆ ಯಾರೂ ಹೆಸರಿಡುವ ಹಾಗಿಲ್ಲ. ತಮ್ಮ ತಮ್ಮ ರೀತಿಯಲ್ಲಿ ಎಲ್ಲರೂ ಹೆಣಗುವವರೇ. ಯಾವುದು ನ್ಯಾಯವೊ ಯಾವುದು ಅನ್ಯಾಯವೊ ? ಗೆದ್ದದ್ದೇ ನ್ಯಾಯ ಸೋತದ್ದೇ ಅನ್ಯಾಯ. ಒಂದು ಸ್ಟೂಡಿಯೊ ಸುಸೂತ್ರವಾಗಿ ನಡೆಯಿಸಿ ಕೊಂಡು ಹೋಗುವಷ್ಟು ವ್ಯವಹಾರ ಚತುರನು ನಾನಲ್ಲವಲ್ಲ ಎಂದು ಶಾಮನು ತನ್ನನ್ನು ತಾನೆ ಹಳಿದುಕೊಂಡ.

' ನೌಕರಿ ಮಾಡಬೇಕು ಎಂದು ಇಷ್ಟು ಸಲೀಸಾಗಿ ಹೇಳಿ ಬಿಡು ತ್ತೀರಿ. ಆದರೆ ನೌಕರಿ ಸಿಗಬೇಕಲ್ಲ ಎಂಬ ವಿಚಾರವನ್ನೆ ಮಾಡಿದಂತಿಲ್ಲ ' ಎಂದಳು ಸೂಸಿ.

' ನನಗೆ ನೌಕರಿ ಸಿಗದಿದ್ದರೂ ನಿನಗಾದರೂ ಸಿಗುವವಲ್ಲ. ಹೆಂಡತಿ ಸುಶಿಕ್ಷಿತಳಾಗಿದ್ದುದರ ಉಪಯೋಗ ಗಂಡನಿಗೆ ಆಗಬಾರದು ಎಂದು ಬೇರೆ ಎಲ್ಲಿಯೂ ಹೇಳಿಲ್ಲವಲ್ಲ. '

' ಇಂತಹ ಮಾತನಾಡಲಿಕ್ಕೆ ಕೇಳಿರಿ ಬೇಕಾದರೆ. ಮಾತಿಗೇನು ತುದಿ

ಯಿಲ್ಲ ಬುಡವಿಲ್ಲ. ಸಿಳ್ಳಿಮಿಳ್ಳಿ ನಾಲ್ಕು ಇಯತ್ತೆ ಇಂಗ್ಲೀಷು ಕಲಿತೆನೊ ಇಲ್ಲವೊ ಸುಶಿಕ್ಷಿತಳು ಸುಶಿಕ್ಷಿತಳು ಎಂದು ತಿವಿದು ತಿವಿದು ಮಾತನಾಡು ವುದು. ನಿಮ್ಮನ್ನು ಕೂಡಿಸಿ ದುಡಿದು ಹಾಕಬೇಕೆಂದು ಎಂದಿನಿಂದಲೂ ನನ್ನ ಮನಸ್ಸಿನಲ್ಲಿ ಕಟಿಯುತ್ತಿದೆ. ನಿಮ್ಮ ಈ ತೊಂದರೆ-ತಾಪತ್ರಯ ನೋಡಿ ನನಗೂ ಕಸವಿಸಿಯಾಗುತ್ತಿದೆ. ಆದರೇನು ಮಾಡಲಿ? ಪ್ರಸಂಗ ಬಂದರೆ ದುಡಿಯಲಿಕ್ಕಿಲ್ಲ ಎಂದು ಮಾತ್ರ ನೀವು ತಿಳಿದುಕೊಳ್ಳಬೇಡಿರಿ.'

'ನಾನು ಹಾಗೆ ತಿಳಿದುಕೊಂಡೇ ಇಲ್ಲ. ಯಾರು ದುಡಿದರೂ ಅಷ್ಟೆ. ಸಂಸಾರ ಸುಸೂತ್ರ ಸಾಗಿದರಾಯಿತು. ಒಂದು ರಥದ ಎರಡು ಗಾಲಿಗಳು........'

'ಸಾಕು ಸಾಕು ವೇದಾಂತ ಯಾಕೆ ನಿದ್ದಿ ಬಂದಿಲ್ಲೇನು ನಿಮಗೆ? ಸುಮ್ಮನೆ ಮಲಗಿಕೊಳ್ಳಿರಿ. ಸಾಕು ನೋಡಲಾರೆ.'

'ಅಂತೂ ಪ್ರಸಂಗ ಬಂದರೆ ನನಗಾಗಿ ದುಡಿಯಲು-ನೌಕರಿ ಮಾಡಲು ಅನುಮಾನಿಸುವುದಿಲ್ಲ ಎಂದೆಯಲ್ಲ. ಇದ್ದುದರಲ್ಲಿಯೆ ಎಷ್ಟೋ ಸಮಾಧಾನವಾಯಿತು.'

'ಹೋದ ವರ್ಷ ಇಷ್ಟು ಲೆಕ್ಕಹಾಕಿ ಈ ಸ್ಟುಡಿಯೊ ತೆಗೆದು ಇದ್ದ ಒಂದು ಹೊಲವನ್ನು ಕಳೆದುಕೊಂಡೆವು. ಇನ್ನು ಈ ವರ್ಷ ನಮಗಾಗಿ ಏನೇನು ಕಾದುಕೊಂಡು ಕುಳಿತಿದೆಯೊ, ಏನೇನಾಗುವುದಿದೆಯೊ ಎಲ್ಲವೂ ಆಗಲಿ. ಬೇಡವೆಂದರೆ ಬಿಡುವ ಹಾಗಿಲ್ಲ. ಈಗಂತೂ ಮಲಗಿರಿ ರಾತ್ರಿ ಬಹಳವಾಯಿತು.' ಎಂದು ಸೂಸಿ ತನಗೂ ಶಾಮನಿಗೂ ಕೂಡಿಯೇ ಮುಸುಕು ಎಳೆದುಕೊಂಡಳು.

# ೩

ಆ ಮುಸುಕು ಶಾಮನ ಮೋರೆಯನ್ನೂ ಮುಚ್ಚಿಕೊಂಡಿತ್ತು. ಸೂಸಿ ಶಾಮನನ್ನು ಗಟ್ಟಿಯಾಗಿ ತಬ್ಬಿಕೊಂಡಿದ್ದಳು; ಗಲ್ಲಕ್ಕೆ ಗಲ್ಲವನ್ನು ಹಚ್ಚಿದ್ದಳು. ಶಾಮನು ಅವಳ ಮೈಮೇಲೆ ಕೈಯನ್ನು ಚೆಲ್ಲಿದ್ದನು. ಮುಂದೆ ಕೆಲವು ನಿಮಿಷಗಳಲ್ಲಿಯೆ ಸೂಸಿಯ ಗೊರಕೆಯ ಸದ್ದು ಕೇಳತೊಡಗಿತು.

ಆದರೆ ಶಾಮನು ಮಾತ್ರ ಕಣ್ಣುಗಳನ್ನು ಬಿಟ್ಟುಕೊಂಡು ಹಾಗೆ ಬಿದ್ದುಕೊಂಡಿದ್ದ. ತಲೆಯಲ್ಲಿ ಸಾವಿರಾರು ವಿಚಾರಗಳು. ತನ್ನ ಜೀವನವೆ ಈ ರೀತಿ ಹೊಯ್ದಾಡುತ್ತಿರುವಾಗ ತಾನು ಮದುವೆ ಮಾಡಿಕೊಂಡಿದ್ದು ಸರ್ವಥಾ ತಪ್ಪಾಯಿತು ಎಂದುಕೊಂಡ. ಚಿತ್ರಗಳನ್ನೇನೊ ಬರೆದೇ ಬರೆಯುತ್ತಲಿದ್ದ – ಗಳಿಗೆ ಕೂಡ ಬಿಡುವಿಲ್ಲ. ಆದರೆ ಎಲ್ಲವೂ ಬಿಟ್ಟಿ ಕೆಲಸವೆ. ಹಣ ಕೊಡುವವರೇ ಇಲ್ಲ. ವೃತ್ತ ಪತ್ರಿಕೆಗಳ ಕಾಟವಂತೂ ಅವನಿಗೆ ವಿಶೇಷವಾಗಿತ್ತು. ತನ್ನ ಚಿತ್ರಗಳೂ ಅಚ್ಚಾಗುತ್ತಲಿವೆ ಎಂಬ ಸಂತೋಷದ ವಿನಃ ಹೆಚ್ಚಿನ ಪ್ರತಿಫಲವೇನೂ ಅವನಿಗೆ ದೊರೆಯುತ್ತಿರಲಿಲ್ಲ. ೪–೮ ವರ್ಷಗಳ ಹಿಂದೆ ಕನ್ನಡದಲ್ಲಿ ವೃತ್ತಪತ್ರಿಕೆಗಳೆ ತೀರ ವಿರಳವಾಗಿದ್ದವು. ಇಂದು ದಿನ ದಿನಕ್ಕೆ ಹೊಸ ಹೊಸ ಪತ್ರಿಕೆಗಳು ಜನ್ಮ ತಾಳುತ್ತಲಿವೆ. ಕೆಲವು ಪತ್ರಿಕೆಗಳಲ್ಲಿ ಚಿತ್ರಗಳನ್ನು ಉಪಯೋಗಿಸಿಕೊಳ್ಳುವ ಹೊಸ ವಿಧಾನವನ್ನೂ ಪ್ರಾರಂಭಿಸಿದ್ದಾರೆ. ಇಂದಿಲ್ಲ ನಾಳೆಯಾದರೂ ಹಣವನ್ನು ಕೊಡಬಹುದು ಎಂಬುದೆ ಅವನ ಬಲವತ್ತರವಾದ ಆಸೆ.

ಕಾಂಪಿಟೇಶನ್ನೂ ಪ್ರಾರಂಭವಾದಂದಿನಿಂದ ಫೋಟೊ ತೆಗೆಯುವ ಕೆಲಸವು ವಿಶೇಷವಾಗಿ ಇರಲಿಲ್ಲ. Business ಎಂದು ಫೋಟೊ ತೆಗೆಯುವದನ್ನು ನಿಲ್ಲಿಸಬೇಕಾಗಿ ಬಂದರೂ ಅದನ್ನೊಂದು Hobby ಎಂದು

ಪ್ರಾರಂಭಿಸಿದ. ಮನೆಯಿಂದ ಹೊರಬಿದ್ದಾಗಲೆಲ್ಲ ಹೆಗಲಿಗೆ ಒಂದು ಕ್ಯಾಮರಾ ಹಾಕಿರುವುದು. ಕಣ್ಣಿಗೆ ಕಂಡ ವಸ್ತುಗಳ ದೃಶ್ಯಗಳ ಫೋಟೊ ತೆಗೆಯುತ್ತ ಹೊರಡುವುದು. ಒಂದೊಂದರಲ್ಲಿ ಒಂದೊಂದು ಬಗೆಯ ಸೌಂದರ್ಯವು ಅವನಿಗೆ ಕಾಣುತ್ತಿತ್ತು. ಅವುಗಳನ್ನೆಲ್ಲ ಸಂಗ್ರಹಿಸಿರಬೇಕೆಂದು ಅವನ ಬಯಕೆ. ಮುಂದೆ ಈ ಚಿತ್ರಗಳಲ್ಲಿ ಕೆಲವನ್ನು ಆಗಾಗ ಇಂಗ್ಲೀಷು ಪತ್ರಿಗಕೆಳಿಗೆ ಕಳಿಸುತ್ತಿದ್ದ. ಒಂದೆರಡು ಸಲ ಅಲ್ಪಸ್ವಲ್ಪ ಬಹುಮಾನವೂ ದೊರೆಯಿತು. ಆದರೆ ಇವನು ಖರ್ಚು ಮಾಡಿದ ಪ್ರಮಾಣದಿಂದ ಅದು ತೀರ ಕಡಿಮೆ. ಕ್ಯಾಮರಾ ಚೆನ್ನಾಗಿಲ್ಲ ಇಲ್ಲವಾದರೆ ಪ್ರತಿ ಸಲವೂ ಬಹುಮಾನ ಪಡೆಯಬಹುದಿತ್ತು ಎಂದುಕೊಳ್ಳುವ. ಪ್ರಾಯಶಃ ಅದೇ ಕಾರಣವಿದ್ದರೂ ಇರಬಹುದು. ಅಂತೂ ಫೋಟೊ ಅವನಿಗೆ ಖರ್ಚಿನ ಬಾಬಾಗಿಯೆ ಉಳಿದಿತ್ತು.

ತೈಲಚಿತ್ರಗಳನ್ನು ಕೂಡ ತಕ್ಕಮಟ್ಟಿಗೆ ಚಿತ್ರಿಸಲು ಬಲ್ಲವನಾಗಿದ್ದ. ತೀರ ಸ್ವಲ್ಪ ಹಣದಲ್ಲಿ ಎನ್‌ಲಾರ್ಜಮೆಂಟ ಮಾಡಿಕೊಡುತ್ತಿರುವಾಗ ತೈಲ ಚಿತ್ರಗಳನ್ನು ಯಾರು ತೆಗೆಯಿಸಬೇಕು! ತೈಲ ಚಿತ್ರಗಳ ವಿಷಯ ತಲೆಯಲ್ಲಿ ಬರುತ್ತಲೆ ಸೂಸಿಯ ಚಿತ್ರದ ನೆನಪಾಯಿತು.

ಲೈಫ್ ಸಾಯಜಿನಲ್ಲಿ ಸೂಸಿಯದೊಂದು ತೈಲಚಿತ್ರವನ್ನು ಚಿತ್ರಿಸಿ ಸ್ಟೂಡಿಯೊದಲ್ಲಿಟ್ಟಿದ್ದ. ಮೂಲತಃ ಸೂಸಿಯು ಸುಂದರಳು. ಮೇಲೆ ತುಂಬುಪ್ರಾಯ. ಚಿತ್ರಿಸಿದವ ಶಾಮನಂತಹ ಕಲಾನಿಪುಣ. ತನ್ನ ಪ್ರಿಯಳ ಚಿತ್ರ. ಮನಸ್ಸುಗೊಟ್ಟು ಚಿತ್ರಿಸಿದ್ದ. ಅಂದ ಮೇಲೆ ಅದು ಚಿತ್ತಾಕರ್ಷಕವಾಗಿರಲೆಬೇಕಲ್ಲವೆ? ಸ್ಟೂಡಿಯೊ ನೋಡಲು ಬಂದವರು ಸೂಸಿಯ ಬೊಗಸೆಗಣ್ಣುಗಳನ್ನು ತುಂಬುಗಲ್ಲಗಳನ್ನು ಮುದ್ದು ಮುದ್ದಾದ ತುಟಿಗಳನ್ನು ಕೊರೆದಿಟ್ಟಂತಿರುವ ಮೈಕಟ್ಟನ್ನು ಅದೆಷ್ಟೊ ಹೊತ್ತಿನ ವರೆಗೆ ನೋಡುತ್ತ ನಿಲ್ಲುತ್ತಿದ್ದರು.

ಸೂಸಿಯು ಚಿತ್ರಗಳನ್ನು ಅಚ್ಚುಹಾಕಿಸಿ ಮಾರಿ ತುಂಬಾ ಹಣ ಸಂಪಾದಿಸಬಹುದು. ಎಂದು ಒಮ್ಮೆ ಯೋಚಿಸಿದ. ಅಚ್ಚಿಗೆ ಕೊಟ್ಟು ಬಿಡುವವನೆ-

ಆದರೆ ಒಮ್ಮೆ ಸೂಸಿಯ ಸಂಗಡ ಈ ವಿಷಯ ಪ್ರಸ್ತಾಪಮಾಡಿದ. ಅವಳಿಗೆ ಇದು ಎಷ್ಟು ಮಾತ್ರಕ್ಕೂ ಸಮಂಜಸವೆನಿಸಲಿಲ್ಲ. ತನ್ನ ಚಿತ್ರವನ್ನು ಪ್ರದರ್ಶನಕ್ಕೆಂದು ಹೀಗೆ ಚಿತ್ರಿಸಿ ಸ್ಟುಡಿಯೊದಲ್ಲಿ ಹಾಕಿದುದೆ ಅವಳಿಗೆ ಸರಿಯೆನಿಸಿರಲಿಲ್ಲ. ಬೇಡವೆಂದರೆ ಶಾಮನೆಲ್ಲಿ ನೊಂದುಕೊಳ್ಳುವನೊ ಎಂದು ಸುಮ್ಮನಿದ್ದಳು. ಶಾಮನ ಇಂದಿನ ವಿಚಾರವನ್ನು ಮಾತ್ರ ಸಂಪೂರ್ಣವಾಗಿ ಖಂಡಿಸಿದಳು. ಹಾಗೆಂದಿಗೂ ಆಗಕೂಡದು ಎಂದು ವಾದಿಸಿದಳು. ಶಾಮನು ತೀರ ರೀತಿ-ನೀತಿಗಳನ್ನು ಬಿಡುತ್ತಲಿದ್ದಾನೆ ಎಂದು ಆರೋಪಣೆ ಮಾಡಿದಳು. ಶಾಮನೂ ಹಟ ತೊಡಲಿಲ್ಲ. ಅಷ್ಟಕ್ಕೆ ಆ ಮಾತನ್ನು ಬಿಟ್ಟುಕೊಟ್ಟ.

ಹೀಗೆ ಏನನ್ನೊ ನೆನಸಿಕೊಳ್ಳುತ್ತಲಿರುವಾಗ ಅಂದು ಅವನು ವರ್ತಮಾನ ಪತ್ರವೊಂದರಲ್ಲಿ ನೋಡಿದ ಜಾಹೀರಾತೊಂದು ನೆನಪಿಗೆ ಬಂದಿತು. ಒಂದು ಸಾಮಾಜಿಕ ಚಲನ ಚಿತ್ರಕ್ಕೆ ನಟಿಯರು ಬೇಕು ಎಂದು ಜಾಹೀರಾತು ಕೊಟ್ಟಿದ್ದರು. ಹಾಡಲು ಬಲ್ಲ ಸುಂದರ ತರುಣಿಯರು ಡೈರೆಕ್ಟರರನ್ನು ಸ್ವತಃ ಕಾಣಬೇಕು ಇಲ್ಲವೆ ತಮ್ಮ ಭಾವಚಿತ್ರದೊಂದಿಗೆ ಪತ್ರವ್ಯವಹಾರ ಮಾಡಬೇಕು; ಕುಲೀನಸ್ತ್ರೀಯರಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಡಲಾಗುವುದು ಎಂದು ಉಲ್ಲೇಖಿಸಿದ್ದರು.

ಸೂಸಿಯು ಚಲಚ್ಚಿತ್ರ ನಟಿ ಏಕಾಗಬಾರದು? ಏಕೊ ಮೈ ಜುಮ್ಮೆಂದಿತು. ತಪ್ಪೇನು? ಚಲಚ್ಚಿತ್ರ ನಟಿ! ಸ್ಟುಡಿಯೊದಲ್ಲಿ ಅವಳ ಚಿತ್ರವನ್ನು ತೂಗು ಹಾಕಿದ್ದೇ ಅವಳ ಮನಸ್ಸಿಗೆ ಬಂದಿರಲಿಲ್ಲ. ಇನ್ನು ಅವಳು ಚಲಚ್ಚಿತ್ರ ನಟಿಯಾಗಲು ಸಮ್ಮತಿಸುವಳೇ? ಅವಳಲ್ಲಿ ರೂಪವಿದೆ. ಚಲಚ್ಚಿತ್ರ ಪ್ರಪಂಚಕ್ಕೆ ಆದರ್ಶಳಾಗುವಂತಹ ಚೆಲುವಿದೆ. ತಕ್ಕಮಟ್ಟಿಗೆ ಹಾಡುವುದಕ್ಕೆ ಕೂಡ ಬಲ್ಲವಳಾಗಿದ್ದಾಳೆ. ಕಂಠವು ಚೆನ್ನಾಗಿದೆ-ಸ್ವಲ್ಪ ಶಿಕ್ಷಣಬೇಕಷ್ಟೆ. ಇಷ್ಟು ಗುಣಗಳಿಂದಲೆ ಈಗಿನ ಎಲ್ಲ ನಟಿಯರನ್ನು ಅವಳು ಮೀರಿಸಬಲ್ಲಳು. ಸಾಲೆಯಲ್ಲಿದ್ದಾಗ ವಾರ್ಷಿಕೋತ್ಸವಗಳ ಕಾಲಕ್ಕೆ ನಾಟಕಗಳಲ್ಲಿ ಚಿಕ್ಕ ಪುಟ್ಟ ಪಾತ್ರಗಳನ್ನು ವಹಿಸುತ್ತಲಿದ್ದಳು. ನಾಟಕ, ಅಭಿನಯ, ಹಾಡುವುದು, ರಂಗಭೂಮಿ ಈ ವಿಷಯಗಳೇನು ಅವಳಿಗೆ ತೀರ ಅಪರಿಚಿತವಾದವುಗಳಲ್ಲ.

ಇದು ಚಿಕ್ಕವಳಾಗಿದ್ದಾಗಿನ ಮಾತಾಯಿತು. ಈಗ ದೊಡ್ಡವಳಾಗಿದ್ದಾಳೆ. ವಯಸ್ಸು ೧೬–೧೭ ಇದ್ದರೂ ತಾನು ದೊಡ್ಡ ಹೆಂಗಸು ಎಂದು ಭಾವಿಸಿಕೊಳ್ಳುತ್ತಲಿದ್ದಾಳೆ. ನಾಚಿಕೆಯಂತೂ ಹೇಳತೀರದಷ್ಟಾಗಿದೆ. ಮನೆಬಿಟ್ಟು ಹೊರಗೆ ಬರುವುದಕ್ಕೆ ಕೂಡ ಒಲ್ಲಳು. ಸ್ಟುಡಿಯೊಕ್ಕೆ ಎಂದಾವರೂ ಬಂದರೆ ಅದು ಅವನ ಸುದಿನವೆಂದೆ ತಿಳಿದುಕೊಳ್ಳಬೇಕು.

ಕಲಿತ ಹೆಂಗಸರಿಗೆ ಕೆಲಸ ದೊರಕಿಸುವುದು ಅಷ್ಟೇನು ಅಸಾಧ್ಯವಲ್ಲವೆಂಬುದು ಶಾಮನಿಗೂ ಅನುಭವಕ್ಕೆ ಬಂದಿತ್ತು. ಸೂಸಿಗೆ ಮುನಸಿಪಾಲಟಿ ಸಾಲೆಗಳಲ್ಲಿ ಶಿಕ್ಷಕಿಯ ಕೆಲಸವು ದೊರೆಯಬಹುದಾಗಿತ್ತು. ಆದರೆ ಸೂಸಿಯ ಸಂಕೋಚವೃತ್ತಿ ಹಾಗು ನಾಚಿಕೆ ಸ್ವಭಾವ ನೋಡಿ ಇದಾವುದೂ ಬೇಡವೆಂದು ಶಾಮನು ಬಿಟ್ಟುಕೊಟ್ಟ. ಸೂಸಿಯ ಇನ್ನೂ ಕೆಲವು ಚಿತ್ರಗಳನ್ನಾದೂ ಬರೆಯಬೇಕೆಂದು ಅವನಿಗೆ ಬಲವಾದ ಆಸೆಯಿತ್ತು. ಅವಳನ್ನು ಅನೇಕ ಸಲ ಕೇಳಿಕೊಂಡಿದ್ದ. ಸ್ವಲ್ಪ ಒತ್ತಾಯ ಮಾಡಿಯೂ ನೋಡಿದ್ದ. ಆದರೆ ಯಾವುದಕ್ಕೂ ಅವಳು ಸಮ್ಮತಿಸಿರಲಿಲ್ಲ. ಒಂದಿಲ್ಲ ಒಂದು ಕಾರಣವನ್ನು ಮುಂದೆ ಮಾಡಿ ತಪ್ಪಿಸಿಕೊಳ್ಳುತ್ತಿದ್ದಳು.

ಇನ್ನು ಮಾತ್ರ ಸೂಸಿಯು ಏನನ್ನುವಳೋ ಎಂಬ ಹೆದರಿಕೆಯಿಲ್ಲ. ಅವನಿಗಾಗಿ ದುಡಿಯಲು ಸಮ್ಮತಿಸಿದ್ದಾಳೆ. ಸಂಸಾರವು ಸುಸೂತ್ರವಾಗಿ ಸಾಗಬೇಕಾದರೆ ಗಂಡ-ಹೆಂಡಿರಲ್ಲಿ ಯಾರು ದುಡಿದು ತಂದರೂ ಚಿಂತೆಯಿಲ್ಲ ಎಂಬ ತತ್ವವನ್ನು ಒಪ್ಪಿಕೊಂಡಿದ್ದಾಳೆ. ಇನ್ನು ಅವಳ ಚಿತ್ರಗಳನ್ನು ಮನಸ್ಸು ದಣಿಯುವ ವರೆಗೆ ಬಗೆಬಗೆಯಾಗಿ ಚಿತ್ರಿಸಿ ಹಣ ಸಂಪಾದಿಸಬಹುದು. ಅವಳು ಬೇಸರಿಯುವಂತಿಲ್ಲ, ಸುಳ್ಳು ದೇಹಾಲಸ್ಯ ತೋರಿಸಿ ಅವನನ್ನು ನಿರಾಶನನ್ನಾಗಿ ಮಾಡುವಂತಿಲ್ಲ.ಅಥವಾ ಸಾಲೆಯ ಶಿಕ್ಷಕಿಯಾಗಬಹುದು. ಅವಳು ಸಾಲೆಗೆ ಹೋಗುವುದು, ಪ್ರತಿ ತಿಂಗಳು ಪಗಾರ ತರುವುದು, ಅವನು ಚಿತ್ರಗಳನ್ನು ಬರೆಯುತ್ತಲಿರುವುದು. ಶಿಕ್ಷಕಿಯಾದ ಮೇಲೆಯೂ ಅವಳ ಚಿತ್ರಗಳನ್ನು ಬರೆಯಬಹುದಲ್ಲ. ಅದೇ ಸರಿಯಾದ ಯೋಚನೆ. ಇಬ್ಬರೂ ಕೂಡಿಯೆ ದುಡಿಯುವುದು, ಕೂಡಿಯೆ ವೆಚ್ಚಮಾಡುವುದು, ಕೂಡಿಯೆ ಸಂಸಾರ ಸಾಗಿಸುವುದು. ಆಗ ಮಾತ್ರ ಗಂಡ ಹೆಂಡತಿ

ಯಾಗಿದ್ದುದಕ್ಕೆ ಸಾರ್ಥಕವಾಗುವುದು. ಇಬ್ಬರೂ ಸರಿಸಮಾನರು. ಮೇಲು ಕೀಳೆಂಬ ಭೇದ ಭಾವವಿಲ್ಲ. ದುಡಿಯುವವರು ಉಣ್ಣುವವರು ಎಂಬ ವ್ಯತ್ಯಾಸವಿಲ್ಲ. ಅದೇ ಸಾಮ್ಯವಾದ. ಅದೇ ಸುಖಮಯವಾದ ಜೀವನ.

ಸೂಸಿಯು ಚಲಚ್ಚಿತ್ರ ತಾರಕೆಯಾದರೆ.... ಚಲಚ್ಚಿತ್ರತಾರಕೆಯಾದರೆ.... ಇನ್ನೂ ಒಳ್ಳೆಯದಾಗಬಹುದಲ್ಲವೆ? ಕೈತುಂಬ ಹಣ, ಎಲ್ಲರ ಬಾಯಿ ತುಂಬ ಅವಳ ಹೆಸರು. ಸಿನೇಮಾದಲ್ಲಿ ಫೋಟೊಗ್ರಾಫರನಾಗಿರಬೇಕೆಂದು ಅವನಿಗೂ ಬಹಳ ಆಸೆ. ಅವಳು ಅಭಿನಯಿಸಬೇಕು, ಅವನು ಚಿತ್ರತೆಗೆಯಬೇಕು. ಜಗತ್ತೆಲ್ಲವೂ ಅವರ ಜಾಣ್ಮೆಯನ್ನು ಕಲಾಕೌಶಲ್ಯವನ್ನು ಕಂಡು ಬೆರಗುಗೊಳ್ಳಬೇಕು.

ಸೂಸಿಯು ಅವನಿಗಾಗಿ ದುಡಿಯಲು ಸಮ್ಮತಿಸಿದಳೆಂದು ಸಿನೇಮಾ ನಟಿಯಾಗಲು ಕೇಳುವುದೇ? ಪಕ್ಕ ಬಲಿಯುವ ಮೊದಲೆ ಆಕಾಶಕ್ಕೆ ಹಾರಲು ಹವಣಿಸಿದಂತಾಗುವುದೊ ಏನೊ! ಅವಳು ಎಂದಿಗೂ ಸಮ್ಮತಿಸುವುದಿಲ್ಲ. ಮೇಲೆ ಜನರ ಕಾಟ. ಅವನಿಗೆ ಯಾರೂ ಏನನ್ನೂ ಹೇಳುವಂತಿಲ್ಲ. ಹೇಳಿದರೂ ಕೇಳುವವರಾರು? ಅದೊಂದು ಅರಣ್ಯರೋದನ ಎಂದು ಎಲ್ಲರಿಗೂ ಗೊತ್ತಿದೆ. ತನ್ನ ಮನಸ್ಸಿಗೆ ಬಂದದ್ದನ್ನೇ ಮಾಡುವನು, ಯಾರ ಮಾತನ್ನೂ ಕಿವಿಯ ಮೇಲೆ ಹಾಕಿಕೊಳ್ಳುವುದಿಲ್ಲ; ಹುಚ್ಚುಹುಡುಗ, ಅನುಭವ ಸಾಲದು, ತಲೆಗೆ ತಾಕಬೇಕು ಎಂದು ಅನಾದರದಿಂದ ನೋಡುವವರೆ ಬಹಳ ಜನರು. ಎಲ್ಲೊ ಒಬ್ಬಿಬ್ಬರು ಮಾತ್ರ—ಚಿತ್ರಗಳನ್ನು ಚೆನ್ನಾಗಿ ಬರೆಯುತ್ತಾನೆ; ಅವನಲ್ಲಿರುವ ಸಾಮಗ್ರಿಗಳ ಮೇಲಿಂದ ಅವನು ಮಾಡುವ ಕೆಲಸವು ನಿಜವಾಗಿಯೂ ಅಭಿಮಾನ ಪಡುವಂತಿದೆ; ಆದರೆ ಪಾಪ ಪ್ರೋತ್ಸಾಹನವಿಲ್ಲ ಎಂದು ಸಹಾನುಭೂತಿ ತೋರಿಸುವರು.

ಇಲ್ಲಿಯವರೆಗಿನ ಅವನ ಕೃತಿಗಳೆ ಬೇರೆ ಇನ್ನು ಮುಂದಿನವೆ ಬೇರೆ. ಜನರು ಇನ್ನು ಮುಂದೆಯೂ ಅವನ ಬಗ್ಗೆ ಇದೇ ವೃತ್ತಿಯನ್ನು ತಾಳಿಕೊಂಡಿರಬಹುದೆ? ಹೆಂಡತಿಯನ್ನು ಸಿನೇಮಾ ನಟಿಯನ್ನಾಗಿ ಮಾಡಿದರೂ ಜನರು ಸಹಿಸಿಕೊಂಡಿರಬಹುದೆ? ಆಪ್ತರು ಇಷ್ಟರು ಎಲ್ಲರಿಗೂ ಈ ಸುದ್ದಿಯು ಸಿಡಿಲಿನಂತೆ ತೋರುವುದು. ಎಲ್ಲರೂ ತಿರುಗಿ ನಿಂತರೆ?

ಈ ವಿಷಯದಲ್ಲಿ ಶಾಮನು ಸುದೈವಿಯಾಗಿದ್ದ. ಇದ್ದವರಲ್ಲಿ ಸಮೀಪದ ಆಪ್ತನೆಂದರೆ ಸೋದರಮಾವನೊಬ್ಬನೆ. ಅವನು ಇರುವುದೂ ೬೦ ಮೈಲುಗಳ ಅಂತರದ ಮೇಲೆ ಒಂದು ಹಳ್ಳಿಯಲ್ಲಿ. ಅವನಿಗೆ ಈ ವಿಷಯವು ತಿಳಿದರೆ ( ತಿಳಿಯದೆ ಉಳಿಯುವುದಾದರೂ ಹೇಗೆ ) ನಿಶ್ಚಯವಾಗಿಯೂ ಮನಬಂದಂತೆ ಆಡಿಕೊಳ್ಳುವನು.

ಇವರಲ್ಲಿ ಯಾರ ಅಭಿಪ್ರಾಯಕ್ಕೂ ಶಾಮನು ಸೊಪ್ಪು ಹಾಕುವಂತಿರಲಿಲ್ಲ. ಸೂಸಿಯೊಬ್ಬಳು ಒಪ್ಪಿದರೆ ಸಾಕು. ಅವಳೊಬ್ಬಳು ಅವನ ಕಡೆಗೆ ಇದ್ದರೆ ಅಖಿಲ ಪ್ರಪಂಚವನ್ನೆ ಅವನು ವಿರೋಧಿಸಬಲ್ಲ. ಅವಳ ಬಲವು ಅವನಿಗೆ ಸಾವಿರ ಆನೆಗಳ ಬಲವಿದ್ದಂತೆ. ಆ ಬಲವೂ ಕುಂದಿದರೆ?

ಅವನ ಎದೆಯು ಬಡೆದುಕೊಳ್ಳಲಾರಂಭಿಸಿತು. ಉಸಿರು ಹೆಚ್ಚು ಬಿಸಿಯಾಯಿತು. ಸೂಸಿಗೆ ಈ ವಿಷಯ ಕೇಳಬೇಕೊ ಬೇಡವೊ ತಿಳಿಯಲಿಲ್ಲ. ಹೃದಯವು ಕಾತರಭಾವವನ್ನು ತಾಳಿತು. ಸೂಸಿಯು ಅರಗಳಿಗೆಯಲ್ಲಿ ಇವನ ಮನೋಮಂದಿರವನ್ನು ಪುಡಿ ಪುಡಿ ಮಾಡಬಲ್ಲಳು. ಪುನಃ ಶಾಮನು ಎಂದಿನಂತೆಯೆ ಬೀದಿಯ ಸೊತ್ತಾಗಿ ನಿಂತುಕೊಳ್ಳುವನು. ಅವನ ಎಲ್ಲ ಬಯಕೆಗಳೂ ಮಣ್ಣುಗೂಡುವವು. ಇಲ್ಲ, ಅವನ ಸೂಸಿ, ಜೀವದ ಜೀವಾಳದಂತಿದ್ದ ಸೂಸಿ–ಎಂದಿಗೂ ಇಷ್ಟು ನಿಷ್ಠುರಳಾಗುವುದಿಲ್ಲ. ಅವನ ಮನೋರಾಜ್ಯವನ್ನು ಸೂರೆಗೊಳ್ಳುವುದಿಲ್ಲ.

ಮೊದಲು ಡೈರೆಕ್ಟರರನ್ನು ಕಂಡಮೇಲಲ್ಲವೆ ಈ ವಿಚಾರ. ಹಾಲಿಲ್ಲ ಬಟ್ಟಲಿಲ್ಲ ಗುಟಕ್ ಎಂದಂತಾಯಿತಲ್ಲವೆ ಅವನ ವ್ಯವಹಾರ. ಅವನೊಬ್ಬ ಹುಚ್ಚ. ಸೂಸಿಯು ಅವನಿಗೇನೊ ಸುಂದರಳು, ಜಗನ್ಮೋಹಿನಿ ಆದರೆ ಡೈರೆಕ್ಟರರಿಗೂ ಹಾಗೆಯೆ ಕಾಣಿಸಬೇಕಲ್ಲ. ಇವಳ ಹಾಡು, ಇವಳ ಅಭಿನಯ, ಇವಳ ರೂಪ, ಇವಳ ವಯಸ್ಸು ಎಲ್ಲವೂ ಅವರಿಗೆ ಸಮ್ಮತವಾಗಬೇಕು; ಆ ಮೇಲಲ್ಲವೆ ಮುಂದಿನ ವಿಚಾರ. ಒಂದಲ್ಲ ಎರಡಲ್ಲ ಸಾವಿರ ತೊಂದರೆಗಳು.ಎಲ್ಲವನ್ನೂ ದಾಟಬೇಕು.

ಈ ವಿಚಾರಗಳ ತಾಕಲಾಟವು ಅವನನ್ನು ಹಣ್ಣುಮಾಡಿತು. ಮೈ ಬೆವರಿತು. ಗಂಟಲು ಆರಿತು. ಒಂದು ಮಗ್ಗಲಿಗೆ ಹೊರಳಿದ. ತನ್ನ ಬಡಿದುಕೊಳ್ಳುವ ಎದೆ, ಬಿಸಿ ಉಸಿರು ಸೂಸಿಯನ್ನು ಎಚ್ಚರಿಸಬಹುದು ಎಂದು ಹೆದರಿದನೇನೊ !

೪

'ಕಲಾದರ್ಶ ಟಾಕೀಜ ಲಿಮಿಟೆಡ್'ವರ ಕೀರ್ತಿ ದಿಗ್ದೇಶಗಳಲ್ಲಿಯೂ ಹಬ್ಬಿತ್ತು. ಅವರು ಸಿದ್ಧಪಡಿಸಿದ ಸೀತಾಪಹರಣ, ಗರುಡಗರ್ವಭಂಗ, ಭಕ್ತಪ್ರಲ್ಹಾದ, ಕಂಸವಧ, ದಶಾವತಾರ ಮೊದಲಾದ ಒಂದೊಂದು ಚಿತ್ರಪಟವೂ ಅವರಿಗೆ ಲೆಕ್ಕಮೀರಿ ಹಣವನ್ನು ಸಂಪಾದಿಸಿ ಕೊಟ್ಟಿದ್ದವು. ಆದರೆ ಈಗ ಮಾತ್ರ ಜನರು ಪೌರಾಣಿಕ ಚಿತ್ರಪಟಗಳಕಿಂತಲೂ ಸಾಮಾಜಿಕ ಚಿತ್ರಪಟಗಳನ್ನೆ ಹೆಚ್ಚು ಪ್ರೀತಿಸತೊಡಗಿದ್ದರಿಂದ ಅವರ ಚಿತ್ರಪಟಗಳ ಬೇಡಿಕೆ ಕಡಿಮೆಯಾಗುತ್ತಲಿತ್ತು. ಇತರ ಕಂಪನಿಯುವರ ಸಾಮಾಜಿಕ ಚಿತ್ರಗಳಿಗೆ ದುಡ್ಡಿನ ಸುರಿಮಳೆಯಾಗುತ್ತಲಿರುವುದನ್ನು ಅವರು ಕಣ್ಣಾರೆ ನೋಡುತ್ತಲಿದ್ದರು. ತಾವೂ ಕೆಲವು ಸಾಮಾಜಿಕ ಚಿತ್ರಗಳನ್ನು ತಯಾರಿಸದೆ ನಿರ್ವಾಹವಿಲ್ಲವೆಂದು ಅವರು ನಿರ್ಧರಿಸಿದ್ದರು.

ಅವರು ಕೈಕೊಳ್ಳಬೇಕೆಂದು ಮಾಡಿದ ಪ್ರಥಮ ಸಾಮಾಜಿಕ ಚಿತ್ರ 'ಜೀವಜ್ಯೋತಿ' ಎಂಬುದು. ಡೈರೆಕ್ಟರ ಉಮಾಪತಿರಾಯರು ವಿಶೇಷ ಶ್ರಮವಹಿಸಿ ಈ ಚಿತ್ರವನ್ನು ಆದರ್ಶಚಿತ್ರವನ್ನಾಗಿ ಸಿದ್ಧಪಡಿಸಬೇಕೆಂದು ನಿರ್ಧರಿಸಿದ್ದರು. ಸಾಮಾಜಿಕ ಕಾದಂಬರಿಗಳನ್ನು ಬರೆಯುವುದರಲ್ಲಿ ಹೆಸರುವಾಸಿಯಾದ ಶ್ರೀಕಾಂತರವರೇ ಜೀವಜ್ಯೋತಿಯ ಕಥಾಲೇಖಕರು. ಅವರ ಕಾದಂಬರಿಗಳು ಶೃಂಗಾರರಸಕ್ಕಾಗಿ ಖ್ಯಾತಿಗೊಂಡಿದ್ದವು. ಅಂತೇ ಜನಪ್ರಿಯವಾಗಿದ್ದವು.

ಶಾಮನು ಟಾಕಿಯ ಆಫೀಸನ್ನು ತಲುಪಿದಾಗ ಬೆಳಗಿನ ೧೦ ಗಂಟೆಯಾಗುತ್ತ ಬಂದಿತ್ತು. ಬಾಗಿಲಲ್ಲಿ ನಿಂತಿದ್ದ ಆಳನ್ನು ವಿಚಾರಿಸಿದ. ಡೈರೆಕ್ಟರರು ಇನ್ನೂ ಬಂದಿಲ್ಲ ಹಾಗು ಆಫೀಸಿಗೆ ಬರುವುದು ನಿಶ್ಚಿತವಾಗಿ ಹೇಳಲಿಕ್ಕೂ ಸಾಧ್ಯವಿಲ್ಲ ಎಂದು ಆಳು ಹೇಳಿದ. ಅವರನ್ನು ಮನೆಯಲ್ಲಿ ಕಾಣು

ವುದೆ ವಿಹಿತವೆಂದು ಅವರ ಮನೆಯ ವಿಳಾಸವನ್ನು ಕೇಳಿಕೊಂಡು ಅತ್ತ ಕಡೆಗೆ ಹೊರಟ.

ಡೈರೆಕ್ಟರರನ್ನು ನೋಡಿದ್ದನೆ ವಿನಃ ಅವರ ಸಂಗಡ ಮಾತನಾಡುವ ಪ್ರಸಂಗಗಳು ಈ ವರೆಗೂ ಬಂದಿರಲಿಲ್ಲ. ಡೈರೆಕ್ಟರರನ್ನು ಕಾಣುತ್ತಲೆ ಹೇಗೆ ಮಾತು ಪ್ರಾರಂಭಿಸಬೇಕು, ತಾನು ಬಂದ ಕೆಲಸವನ್ನು ಅವರಿಗೆ ಹೇಗೆ ಸೂಚಿಸಬೇಕು ಎಂಬ ಬಗ್ಗೆ ಮನದಲ್ಲಿಯೆ ಲೆಕ್ಕ ಹಾಕಿದ. ' ಸೂಸಿಯು ನಿನಗೆ ಏನಾಗಬೇಕು ಎಂದು ಅವರು ಕೇಳಿದರೆ ಏನೆಂದು ಉತ್ತರ ಕೊಡಲಿ? ಹೆಂಡತಿ ಎಂದು ಹೇಳಿದರೆ ಅವರು ಏನೆಂದುಕೊಳ್ಳುವರೊ ! ಹೆಂಡತಿಯನ್ನು ಸಿನೇಮಾ ನಟಿಯನ್ನಾಗಿ ಮಾಡಲು ಬಂದಿದ್ದಾನೆ ಎಂದು ಪರಿಹಾಸಮಾಡ ಬಹುದು. ಆ ಮೇಲೆ ನನ್ನ ಬಡತನದ ವಿಷಯ ಅವರೆದುರಿನಲ್ಲಿ ತೋಡಿ ಕೊಳ್ಳಬೇಕು. ಮಾಡಿಕೊಂಡ ಹೆಂಡತಿಯ ಹೊಟ್ಟೆಗೆ ಹಾಕಲಾರದ ಗಂಡಸು ಎಂದು ನಗೆಯಾಡುವರು. ಅದು ಸರಿಯೆ. ನಿಜವಾಗಿಯೂ ನಾನು ಕೈಲಾಗದವನು; ಹೇಡಿ ಹೆಂಡತಿಯನ್ನು ಮುಂದೆ ಮಾಡಿ ಅವಳ ಹೆಸರು ಹೇಳಿಕೊಂಡು ಜೀವನ ಸಾಗಿಸಬೇಕೆಂದಿದ್ದೇನೆ. ಅವರು ಹಾಗೆ ತಿಳಿದುಕೊಂಡರೆ ಅದರಲ್ಲಿ ತಪ್ಪೇನು ?

' ನಾನು ಈಗ ಮಾಡಬೇಕೆಂದಿರುವುದು ಉದರ ಸೇವೆಯಲ್ಲಿ ಕಲಾ ಸೇವೆ. ಕಲೋಪಾಸನೆಯನ್ನು ಮಾಡಲು ಹೊರಟಾಗ ಈ ಬಗೆಯ ಉಚ್ಚ ನೀಚ ಭಾವಗಳನ್ನು ತರಕೂಡದು. ಕಲಾಧಿದೇವತೆಯ ದಿವ್ಯ ಮಂದಿರದಲ್ಲಿ ಎಲ್ಲರೂ ಒಂದೆ. ಅವಳನ್ನು ಪೂಜಿಸಲು ಎಲ್ಲರಿಗೂ ಸಮಾನವಾದ ಅಧಿಕಾರ ವಿದೆ. ತಮ್ಮ ಭಕ್ತಿ ವಿಶ್ವಾಸಗಳ ಫಲವಾಗಿ ಅವರವರ ಯೋಗ್ಯತಾನುಸಾರ ಮನ್ನಣೆ ದೊರೆಯುವುದು.

' ಆದರೆ ಈ ಉದಾತ್ತ ತತ್ವಗಳು ಕಲ್ಪನಾ ಸಾಮ್ರಾಜ್ಯದಲ್ಲಿ ಬಹಳ ಸುಂದರವಾಗಿ ತೋರುವವು. ನಿತ್ಯ ಜೀವನದಲ್ಲಿ ಇರುವ, ಹಾಗು ತೋರುವ ವಿಷಯಗಳೆ ಬೇರೆ. ನಾವು ಸಮಾಜದ ಜೀವನಗಳು. ಡೈರೆಕ್ಟರರಂತೆ ಎಲ್ಲರೂ ಆಡಿಕೊಳ್ಳತೊಡಗಿದರೆ ಆವರಿಗೆ ನಾನು ಏನೆಂದು ಉತ್ತರ

ಕೊಡಲಿ? ಆಡುವವರ ಬಾಯಿಯನ್ನು ಹಿಡಿಯುವವರಾರು, ಆಡುವವರು ಆಡಿಕೊಳ್ಳಲಿ ನಾನು ಮಾಡಬೇಕಾದ್ದನ್ನು ಮಾಡುವವನು.

ಗಂಡ ಹೆಂಡತಿ ಎಂಬ ಈ ಸಂಬಂಧವೆ ಇದೆಲ್ಲಕ್ಕೂ ತೊಡಕಾಗಿದೆಯಲ್ಲವೆ? ಅವಳು ನನ್ನ ಹೆಂಡತಿಯೇ ಅಲ್ಲ....ಹೆಂಡತಿ ಅಲ್ಲ. ಸರಿ ಎಲ್ಲರ ಬಾಯಿಗಳಿಗೂ ಬೀಗ ಬಿದ್ದಿತು. ಅಲ್ಲಿಗೆ ವಿಷಯವೇ ಮುಗಿದಂತಾಯಿತು. ಸೂಸಿ ನನ್ನ ಮಿತ್ರಳು! ಆಪ್ತಳು! ಆಪ್ತಳು! ಪರಿಚಿತ ಆಪ್ತ ಮಿತ್ರಳು! ಹಿತ ಸಂಬಂಧಿಕಳು! ಅವಳ ಸುಖ ದುಃಖದ ಸಂಪೂರ್ಣ ಭಾರವೆ ನನ್ನ ಮೇಲಿದೆ.'

ಮನಸ್ಸಿಗೆ ಒಂದು ಬಗೆಯ ಸಮಾಧಾನವಾದಂತಾಯಿತು. ಜೇಬಿನಲ್ಲಿದ್ದ ಸೂಸಿಯ ಚಿತ್ರವನ್ನು ಹೊರಗೆ ತೆಗೆದ. ದಿಟ್ಟಿಸಿ ನೋಡಿದ. ಕೆಲವು ನಿಮಿಷ ನೋಡುತ್ತ ನಿಂತ. ಸೂಸಿ ನನ್ನ ಮಿತ್ರಳು; ಆಪ್ತ ಮಿತ್ರಳು ಎಂದು ಮನದಲ್ಲಿಯೆ ಅನೇಕ ಸಲ ಅಂದುಕೊಂಡ. ಒಮ್ಮೆಲೆ ನೂರಾರು ವಿಚಾರಗಳು ತಲೆಯಲ್ಲಿ ಮೂಡಿದವು.

ಜನರೆದುರಿನಲ್ಲಿ ತಾನು ಅವಳೊಡನೆ ಹೇಗೆ ವರ್ತಿಸಬೇಕು? ಏಕಾಂತದಲ್ಲಿ ಹೇಗಿರಬೇಕು? ಏಕಾಂತವಾದರೂ ತನಗೆ ದೊರೆಯುವುದೊ ಇಲ್ಲವೊ? ಇಷ್ಟು ನಿರ್ಬಂಧನೆಗಳಿದ್ದರೆ ಚಿತ್ರಪಟಕ್ಕೆ ಸೇರುವ ವಿಚಾರವೆ ಬೇಡ. ಅವಳೊಡನೆ ಹೆಚ್ಚು ಸಲಿಗೆ ಮಾಡುವಂತಿಲ್ಲ! ಮೈಮೇಲೆ ಮುಳ್ಳು ಬಂದವು. ಇದು ತನಗೆ ಎಂದಿಗೂ ಸಾಧ್ಯವಿಲ್ಲ. ಸೂಸಿಯ ಚಿತ್ರವನ್ನು ಇನ್ನೂ ಹೆಚ್ಚು ಕಾತರಭಾವದಿಂದ ನೋಡಿದ. ಅದೇ ಮುಗುಳುನಗೆ—ಸ್ವಭಾವಸಿದ್ಧವಾದ ಮುಗುಳುನಗೆ. ಈ ವಿಷಯಗಳೆಲ್ಲ ಅವಳಿಗೆ ತಿಳಿದ ನಂತರದಲ್ಲಿಯೂ ಇದೆ ಮುಗುಳುನಗೆಯು ಈ ತುಟಿಗಳಲ್ಲಿ ಮಿನುಗಬಹುದೆ? ಇದನ್ನೆಲ್ಲ ಅವಳಿಗೆ ಹೇಳುವುದಾದರೂ ಹೇಗೆ?

'ಕುಲೀನ ಸ್ತ್ರೀಯರಿಗೆ ಹೆಚ್ಚು ಪ್ರಾಶಸ್ತ್ಯವನ್ನು ಕೊಡಲಾಗುವುದು ಎಂದು ಪ್ರಕಟಿಸಿರುವುದರಲ್ಲಿ ಅವರ ತಾತ್ಪರ್ಯವೇನು? ಮದುವೆಯಾಗಲಿರುವವರು, ಮದುವೆಯಾದವರು, ವಿಧವೆಯರು ಇವರೆಲ್ಲರೂ ಕುಲೀನರೆ ಅಲ್ಲವೆ? ಇವಳ ಮದುವೆಯಾಗಿದೆ ಎಂದರೆ ತಪ್ಪೇನು? ಮದುವೆಯಾಗಿದೆ ನಾನೆ ಅವಳ ಗಂಡ ಎಂದು ಬಿಟ್ಟರೆ ನಮ್ಮಿಬ್ಬರ ನಡುವೆ ಇಂದು ಇಲ್ಲಿ

ಇರುವ ಸಂಬಂಧವೆ ನಾಳೆ ಅಲ್ಲಿಯೂ ಉಳಿಯುವುದು. ಇದ್ದ ಸಂಗತಿಯನ್ನು ಹೇಳಿ ಬಿಡುವುದೆ ಒಳಿತು. ನನ್ನ ಮಾನವನ್ನು ಉಳಿಸಿಕೊಳ್ಳುವುದಕ್ಕಾಗಿ ಅನರ್ಥ ಪರಂಪರೆಗೆ ತುತ್ತಾಗುವುದು ಬೇಡ. ಅಂತೂ ಡೈರೆಕ್ಟರರ ಮಾತಿನ ಓಘವು ತಿಳಿಯದೆ ಏನನ್ನೂ ಹೇಳಲಿಕ್ಕಾಗದು.

ಉಮಾಪತಿರಾಯರ ಮನೆಯ ಗೇಟಿನ ಬಳಿಯಲ್ಲಿ ಬಹಳ ಹೊತ್ತಿನವರೆಗೆ ವಿಚಾರಿಸುತ್ತ ನಿಂತಿದ್ದ. ಏನೆ ಆಗಲಿ ಇಲ್ಲಿಯ ವರೆಗೆ ಬಂದಿದ್ದೇನೆ; ಅವರನ್ನು ಕಂಡಾದರೂ ಹೋಗೋಣ, ಆದುದಾಗಲಿ ಎಂದು ಗೇಟಿನೊಳಗೆ ಕಾಲಿಟ್ಟ.

ರಾಯರು ಅದೆ ಮುಖಮಾರ್ಜನಾದಿ ಪ್ರಾತರ್ವಿಧಿಗಳನ್ನು ತೀರಿಸಿಕೊಂಡು ಉಪಹಾರ ತೆಗೆದುಕೊಳ್ಳುತ್ತಿದ್ದರು. ಕೆಲವು ನಿಮಿಷ ಶಾಮು ಕಟ್ಟೆಯ ಮೇಲೆ ಕಾಯುತ್ತ ಕುಳಿತುಕೊಳ್ಳಬೇಕಾಯಿತು. ತನ್ನ ಹೆಸರಿನ ಚೀಟಿಯೊಂದನ್ನು ಬರೆದು ಕಳಿಸಿದ. ಮುಂದೆ ಸ್ವಲ್ಪ ಹೊತ್ತಿನ ಮೇಲೆ ಕರೆ ಬಂದಿತು. ಅಂಜುತ್ತ ಅಂಜುತ್ತ ಒಳಗೆ ನಡೆದ.

ಮನೆಯು ವಿಶಾಲವಾಗಿತ್ತು. ಗೋಡೆಯ ಮೇಲೆ ಬಗೆಬಗೆಯ ಚಿತ್ರಗಳನ್ನು ತೂಗುಹಾಕಿದ್ದರು. ರಾಯರು ಸೋಫಾದ ಮೇಲೆ ಒರಗಿ ವರ್ತಮಾನಪತ್ರವನ್ನು ಓದುತ್ತಲಿದ್ದರು. ಶಾಮನು ಒಳಗೆ ಬರುತ್ತಲೆ 'ಏಕೆ ಬಂದಿದ್ದಿರಿ? ' ಎಂದು ರಾಯರು ಕೇಳಿದರು.

ಒಮ್ಮೆಲೆ ವಿಷಯವನ್ನೆ ಪ್ರಾರಂಭಿಸಿದ್ದರಿಂದ ಶಾಮನು ಸ್ವಲ್ಪ ಅಸುಮಾನಿಸಿದ. 'ವರ್ತಮಾನಪತ್ರದಲ್ಲಿಯ ಜಾಹೀರಾತು........' ಇನ್ನೂ ಏನೊ ಹೇಳುವವನಿದ್ದ ಅಷ್ಟರಲ್ಲಿಯೆ ರಾಯರು 'ಸರಿಯಾಗಿ ಕಣ್ಣುತೆರೆದು ಜಾಹೀರಾತನ್ನು ಓದಿದಿರೇನು ? ' ಎಂದರು.

ಶಾಮನಿಗೆ ಏನು ಹೇಳಬೇಕೊ ತಿಳಿಯಲಿಲ್ಲ.

ಪುನಃ ರಾಯರು ' ಮಹಾರಾಯರೆ ನಮಗೆ ನಟಿಯರು ಬೇಕು.... ನಟಿಯರು........ಕುಲೀನರು, ಸುಶಿಕ್ಷಿತರು, ಸುಂದರರು ಆದ ನಟಿಯರು ತಿಳಿಯಿತೆ ? ಈಗಲಾದರೂ ಅರ್ಥವಾಯಿತೆ ? ಈ ಜನರಿಗೆ ಎಂದಿಗೆ ಬುದ್ಧಿ ಬರಬೇಕೊ !' ಎಂದರು.

'ನಾನೂ ಅದಕ್ಕಾಗಿಯೆ ಬಂದಿದ್ದೇನೆ' ಇನ್ನು ಹೆದರಿ ಉಪಯೋಗವಿಲ್ಲವೆಂದು ಧೈರ್ಯವಾಗಿಯೆ ಉತ್ತರಕೊಟ್ಟ ಶಾಮು.

ಶಾಮನನ್ನು ದುರುಗುಟ್ಟಿ ನೋಡಿದರು ರಾಯರು. ಶಾಮು ಮೆಲ್ಲಗೆ ಜೇಬಿನೊಳಗಿಂದ ಸೂಸಿಯ ಚಿತ್ರವನ್ನು ತೆಗೆದು ರಾಯರ ಕೈಗಿತ್ತ. ರಾಯರು ಚಿತ್ರವನ್ನು ಏಕಾಗ್ರಚಿತ್ತದಿಂದ ನೋಡಿದರು. ಬಹಳ ಹೊತ್ತಿನವರೆಗೆ ನೋಡಿದರು. ಕತ್ತನ್ನು ಹಾಗೆ ಹೀಗೆ ಹೊರಳಿಸಿ ನೋಡಿಯೆ ನೋಡಿದರು. ಅವರ ಮೊಗದ ಮೇಲೆ ಅವರಿಗೆ ತಿಳಿಯದಂತೆಯೆ ಮುಗುಳು ನಗೆಯೊಂದು ಮೂಡಿ ಮೂಡಿ ಮಾಯವಾಗುತ್ತಲಿತ್ತು.

ರಾಯರು ಶಾಮುನ ಕಡೆ ಮೋರೆಮಾಡಿ ' ಇವರು ಯಾರು ? ' ಎಂದು ಕೇಳಿದರು.

'ಇವರು....ಇವರು....ನನ್ನ....ನಮ್ಮ-ಮನೆಯವರು'

'ಮನೆಯವರು! '

'ಹೌದು ಮನೆಯವರು—ಆಪ್ತರು. '

'ಆಪ್ತರು ಅಂದರೆ ಏನಾಗಬೇಕು ? ನಿಮಗೂ ಅವರಿಗೂ ಏನು ಸಂಬಂಧ ? ಇದ್ದುದನ್ನು ಸರಿಯಾಗಿ ಹೇಳಿರಿ. ಅದರಲ್ಲೇನೂ ಪ್ರಮಾದವಿಲ್ಲ.'

ಶಾಮನ ಸಂಕೋಚವೃತ್ತಿಯು ರಾಯರಲ್ಲಿ ಇಲ್ಲದ ಕಲ್ಪನೆಗಳನ್ನು ಹುಟ್ಟಿಸಿತು. ಇವರಿಬ್ಬರ ನಡುವಿನ ಸಂಬಂಧ ನ್ಯಾಯವಾದ ಸಂಬಂಧವಲ್ಲ ಎಂದು ತಿಳಿದುಕೊಂಡರು. ಶಾಮುನು ತಾನು ಮಾಡಿದ್ದು ಸರ್ವಥಾ ತಪ್ಪಾಯಿತು ಎಂದುಕೊಂಡ.

' ಇವಳು ನನ್ನ ಹೆಂಡತಿ. '

' ಹೆಂಡತಿ. ಒಂದು ಮಾತಿನ ನಿಷ್ಕರ್ಷವಾದಂತಾಯಿತು. ಇವಳು ನಿಮ್ಮ ಹೆಂಡತಿ. ಹೆಂಡತಿ ಎಂದೆ ತಿಳಿದುಕೊಳ್ಳೋಣ....'

' ಇವಳು ನಿಜವಾಗಿಯೂ ನನ್ನ ಹೆಂಡತಿ ರಾಯರೆ. ಮದುವೆಯ ಹೆಂಡತಿ-ಧರ್ಮಪತ್ನಿ '

‘ ನಾನು ಅದೆಲ್ಲವನ್ನೂ ಒಪ್ಪಿಕೊಂಡೆನಲ್ಲ. ಹೀಗೆ ಕುಳಿತುಕೊಳ್ಳಿರಿ. ನಿಂತುಕೊಂಡೆ ಮಾತನಾಡುವಿರಲ್ಲ’ ಎಂದು ಒಂದು ಕುರ್ಚಿಯನ್ನು ತೋರಿಸಿದರು. ಶಾಮ ಕುಳಿತುಕೊಂಡ.

‘ ಸರಿ. ಇವರು ನಿಮ್ಮ ಹೆಂಡತಿ. ಇವರ ಹೆಸರು ? ’

ಮತ್ತೆ ಶಾಮುನು ಸಂಶಯಕ್ಕೊಳಗಾದ. ಈವರೆಗಿನ ‘ಸೂಸಿ’ ಎಂಬ ಹೆಸರನ್ನೆ ಹೇಳಲು ಅವನಿಗೆ ಮನಸ್ಸಿರಲಿಲ್ಲ. ಹೊಸ ಹೆಸರು ಯಾವುದೆಂಬುವನ್ನು ನಿಶ್ಚಯಿಸಿರಲಿಲ್ಲ. ‘ತಾರಿಣಿ’ ಎಂಬ ಹೆಸರು ಚನ್ನಾಗಿದೆ ಎಂದು ಒಂದು ಸಲ ಯೋಚಿಸಿದ್ದ. ಆದರೆ ಈಗ ಆ ಹೊಸ ಹೆಸರನ್ನೇ ಹೇಳಿದರೆ ಎಲ್ಲಿ ಏನಾಗುವುದೋ ಎಂದು ಒಂದು ಗಳಿಗೆ ಯೋಚಿಸಿದ.

ಮಾತು ಮಾತಿಗೆ ಹೀಗೆ ಅನುಮಾನ ಮಾಡುತ್ತಿರುವುದನ್ನು ಕಂಡು ರಾಯರಿಗೆ ಮತ್ತಿಷ್ಟು ಸಂಶಯವು ಹುಟ್ಟಿತು. ಆದರೂ ಹಾಸ್ಯಮಾಡಬೇಕೆಂದು ‘ ಹೆಂಡತಿಯ ಹೆಸರು ಹೇಳಲಿಕ್ಕೆ ಸಂಕೋಚವೇನೊ ! ’ ಎಂದರು.

‘ ಅದೇನಿಲ್ಲ. ಇವಳಿಗೆ ಎರಡು ಹೆಸರು. ಯಾವುದು ಹೇಳಲಿ ಎಂದು ಯೋಚಿಸುತ್ತಿದ್ದೆ. ತೌರು ಮನೆಯ ಹೆಸರು ಸೂಸಿ ಎಂದು. ಆದರೆ ನಾನು ಪ್ರೀತಿಯಿಂದ ಕರೆಯುತ್ತಿರುವುದು ತಾರಿಣಿ ಎಂದು. ’

‘ ತಾರಿಣಿ....ತಾರಿಣಿ ’ ಎಂದೆನ್ನುತ್ತ ಚಿತ್ರವನ್ನು ಮತ್ತೆ ಮತ್ತೆ ದಿಟ್ಟಿಸಿದರು ರಾಯರು. ಚೆನ್ನಾಗಿದೆ. ಹೆಸರು ತುಂಬಾ ಚೆನ್ನಾಗಿದೆ . ಎಂದು ಸ್ವಲ್ಪ ಹೊತ್ತು ಚಿತ್ರವನ್ನು ನೋಡಿ ಒಮ್ಮೆಲೆ ಹುಬ್ಬುಗಳನ್ನು ಬಿಗಿದು ಮೋರೆಯನ್ನು ಗಂಭೀರವಾಗಿರಿಸಿ ಚಿತ್ರವನ್ನು ಒಂದು ಬದಿಗಿಟ್ಟು ಅಧಿಕಾರಿಗಳ ಧ್ವನಿಯಲ್ಲಿ ವ್ಯವಹಾರದ ಮಾತುಕತೆಗಳಿಗೆ ಆರಂಭಿಸಿದರು. ಪ್ರಾಯಶಃ ಚಿತ್ರವನ್ನು ಕಂಡು ತಮ್ಮ ಸಂತೋಷವನ್ನು ಈ ಬಗೆಯಾಗಿ ತೋರ್ಪಡಿಸಬಾರದಿತ್ತು ಎಂದು ಅವರಿಗೆ ತೋರಿರಬೇಕು.

‘ ಈ ಮೊದಲಿಗೆ ಇವರು ಎಲ್ಲಿಯಾದರೂ ಅಭಿನಯಿಸಿರುವರೇನು ? ’ ರಾಯರು ಕೇಳಿದರು.

' ಹೆಚ್ಚಿನ ಅನುಭವವೇನು ಇಲ್ಲ. ಕೆಲವು ನಾಟಕಗಳಲ್ಲಿ ಮಾತ್ರ ಭಾಗವಹಿಸಿದ್ದಳು ' ಶಾಮನಂದ.

' ಅನುಭವವಿಲ್ಲ, ಹೊಸಬರು. ಹಾಡಲಿಕ್ಕೆ ಬರುವುದೇನು ? '

' ತಕ್ಕ ಮಟ್ಟಿಗೆ. ಕಂಠವು ಚೆನ್ನಾಗಿದೆ. ಆದರೆ ಶಾಸ್ತ್ರೀಯವಾದ ಗಾಯನದ ಪರಿಚಯವು ಸಾಕಷ್ಟಿಲ್ಲ. '

' ಶಿಕ್ಷಣವು ಎಲ್ಲಿಯವರೆಗೆ ಆಗಿದೆ ? '

' ಇಂಗ್ಲೀಷು ಆರು ಇಯತ್ತೆಯವರೆಗೆ '

ರಾಯರು ಮತ್ತೊಮ್ಮೆ ಚಿತ್ರವನ್ನು ಕೈಯಲ್ಲಿ ತೆಗೆದುಕೊಂಡರು. ' ಇವರ ಮೋರೆಯ ಫ್ರಂಟ್‌ವ್ಹ್ಯೂ (Front view) ಹೇಗೆ ಬರುವುದೋ ನೋಡಬೇಕು. ಬಣ್ಣ ಸ್ವಲ್ಪ ಸಾದುಗಪ್ಪು ಇರಬೇಕು ಅಲ್ಲವೆ ? '

' ಸಾದುಗಪ್ಪು ' ಅದೇಕೆ ರಾಯರೆ ? ಅವಳ ಮೈಬಣ್ಣಕ್ಕೆ ಬಂಗಾರವೂ ನಾಚಿಕೊಳ್ಳಬೇಕು. ಇನ್ನು ಫ್ರಂಟ್‌ವ್ಹ್ಯೂ ಎಂದಿರಲ್ಲವೆ ? ನಾನು ಇವಳ ತೈಲಚಿತ್ರವೊಂದನ್ನು ಲಾಯಿಫ್ ಸಾಯಿಜಿನಲ್ಲಿ ತೆಗೆದು ನನ್ನ ಸ್ಟೂಡಿಯೊದಲ್ಲಿ ಹಾಕಿದ್ದೇನೆ. ಅದರಲ್ಲಿರುವುದು ಫ್ರಂಟವ್ಹ್ಯೂನೆ. ಆ ಚಿತ್ರವನ್ನು ಕಂಡು ಮನವಾರೆ ಹೊಗಳದವರೆ ಇಲ್ಲ. '

'ಮೈಬಣ್ಣ ತೆಗೆದುಕೊಂಡು ನಾವೇನು ಮಾಡುವುದಿದೆ. ಮುಖ್ಯ ಫೇಸ್‌ಕಟ್ (Face cut) ಚನ್ನಾಗಿದೆ. ನೀವೂ ಚಿತ್ರಗಳನ್ನು ತೆಗೆಯುತ್ತೀರೇನು ? '

' ತಮ್ಮ ಕೈಯಲ್ಲಿರುವ ಫೋಟೊ ನಾನೇ ತೆಗೆದದ್ದು '

' ಹೀಗೇನು ? ಈಗ ನೀವು ಏನು ಮಾಡುತ್ತಿದ್ದೀರಿ ? '

' ಚಿಕ್ಕದೊಂದು ಸ್ಟೂಡಿಯೊ ಇಟ್ಟುಕೊಂಡಿದ್ದೇನೆ. ತಮ್ಮ ಕಂಪನಿಯಲ್ಲಿ ನನಗೂ ಒಂದು ಕೆಲಸ ದೊರಕಿಸಿಕೊಟ್ಟರೆ ಬಹಳ ಉಪಕಾರವಾಗುವುದು. ನಾವಿಬ್ಬರೂ ಕೂಡಿಯೆ ತಮ್ಮ ಕಂಪನಿಯಲ್ಲಿರಲು ಅನುಕೂಲವಾಗುವುದು '

'ನೋಡೋಣ ನೀವು ಒಂದು ಸಲ ಇವರನ್ನು ನಮಗೆ ಭೆಟ್ಟಿ ಮಾಡಿಸ

ಬೇಕು. ಅಂದರೆ ಮುಂದಿನ ಮಾತುಕತೆಗಳನ್ನಾಡಿಕೊಳ್ಳಲು ಸರಿಯಾಗುವುದು.'

'ಆಗಬಹುದು.'

'ನಿಮಗೆ ಯಾವಾಗ ಬಿಡುವಿದೆ?'

'ಯಾವಾಗಲಾದರೂ ಸರಿಯೆ'

'ನಾಳೆ ಮಧ್ಯಾಹ್ನ ಸಾಧ್ಯವಾಗಬಹುದೇ?'

'ಆಗಬಹುದು'

'ಎರಡು ಗಂಟೆಯ ಸುಮಾರಿಗೆ ಸ್ಟುಡಿಯೊಕ್ಕೆ ಬಂದು ಬಿಡಿರಿ. ಒಂದೆರಡು ಹಾಡಿನ ಟ್ರಯಲ್ಸ (Trials) ಕೂಡ ತೆಗೆದುಕೊಳ್ಳಬಹುದು.'

೩

ಸೂಸಿ ಒಂದು ಕೋರಿಯನ್ನು ಅಡ್ಡ ಹಚ್ಚಿಕೊಂಡು ನೀರು ತುಂಬುತ್ತಲಿದ್ದಳು. ಶಾಮ ಮನೆಗೆ ಬಂದವನೆ ಕೋಟು ಟೊಪ್ಪಿಗೆಗಳನ್ನು ತೆಗೆದಿಡುತ್ತ 'ಸೂಸಿ' ಎಂದು ಕೂಗಿದ.

'ಏನು ?' ಎಂದು ಬಚ್ಚಲಮನೆಯಿಂದಲೇ ಕೇಳಿದಳು ಸೂಸಿ.

'ಇಲ್ಲಿ ಬಾ'

'ಯಾಕೆ ?'

'ಮೊದಲು ಇಲ್ಲಿ ಬಾ'

'ಯಾಕೆ ? ಹೇಳಬಾರದೆ ?'

'ಬಾ ಅಂತೇನಿ ಬರಬಾರದೆ ?'

'ನಳ ಹೋಗುವ ಹೊತ್ತಾಯಿತು'

'ಹೋಗಲಿ ಬಾ ಇಲ್ಲಿ'

'ಹೋಗಲಿ. ನಿಮಗೇನು ?'

'ಬಾ ಇಲ್ಲಿ ಬೇಗ'

'ಏನದು ಅಂಥಾದ್ದು ?'

'ಬಾ ಇಲ್ಲಿ ಹೇಳತೇನಿ'

ಸೂಸಿ ಲಗುಬಗೆಯಿಂದ ಓಡಿಬಂದಳು.

'ಬಂದೆ. ಏನು ?'

ಅಯ್ಯೋ ನನ್ನ ಹಣೇಬರಹ ! ಮೊದಲು ಈ ಸೀರೆ ಬಿಡು. ಏನು ವೇಷ, ಏನು ಭೂಷಣ ! ಆ ಜರದಸೀರೆ—ಹಸಿರು ಸೀರೆ ಎಲ್ಲಿ ಅದೆ ?'

' ಹಸಿರು ಸೀರೆ! ಈಗೇನು ಎಲ್ಲಿಯಾದರೂ ಮೆರವಣಿಗೆ ಹೊರಡುವುದಿದೆಯೇನು ? '

' ಅಂತಿಂತಹ ಮೆರವಣಿಗೆಯಲ್ಲ. ಒಂದು ಓಣಿಯಲ್ಲಿ–ಒಂದ್ಸು ಊರಿನಲ್ಲಿ ಮೆರೆದಾಡುವುದಲ್ಲ. ದೇಶದೇಶದ ತುಂಬ ಮೆರೆದಾಡುವುದು. ಎಲ್ಲರ ಮನವನ್ನು ಸೂರೆಗೊಳ್ಳುವುದು. ಎಲ್ಲರ ಹೃದಯದಲ್ಲಿ ಮೂಡುವುದು. ಆದ್ದರಿಂದ ಹೋಗು-ಬೇಗ ಹೋಗು. ಮೊದಲು ಆ ಹಸಿರು ಸೀರೆಯನ್ನು ಟ್ಟು ಕೊಂಡು ಬಾ. '

' ಏನು ಹೇಳತೀರೊ ಏನೋ. ಕೊಡ ತುಂಬತೇನೋ ನೋಡಿ ಬರತೇನಿ. '

' ತುಂಬಲೊಲ್ಲವೇಕೆ. ತುಂಬಿ ಕೋಡಿ ಹರಿಯಲೊಲ್ಲದೇಕೆ. ಹೋಗು ಮೊದಲು ಆ ಸೀರೆ ಉಟ್ಟುಕೊಂಡು ಬಾ. '

' ಹೂ ' ಎಂದು ಒಳಗೆ ಹೊರಟಳು.

' ಬಚ್ಚಲ ಮನೆಗೆ ಹೊರಟೆಯಲ್ಲ ? '

' ಮತ್ತೇನು ಮಾಡಲಿ ಹಾಗಾದರೆ ? '

' ನಾನು ಇಷ್ಟು ಹೊತ್ತಿನ ವರೆಗೆ ಹೇಳಿದ್ದೇನು ? '

' ಈಗ ಯಾಕೆ ಆ ಸೀರೆ ? '

ಶಾಮು ಅವಸರದಿಂದ ಟ್ರಂಕು ತೆಗೆದು ' ಹಿಡಿ ಉಟ್ಟುಕೊ ' ಎಂದು ಅವಳ ಮೈಮೇಲೆ ಆ ಸೀರೆಯನ್ನು ಎಸೆದ.

ಸೂಸಿ ಕೈಯಲ್ಲಿ ಸೀರೆಯನ್ನು ಹಿಡಿದುಕೊಂಡು ಶಾಮುನನ್ನು ನೋಡುತ್ತ ನಿಂತಳು. ಅವಳ ಮೋರೆಯ ಮೇಲೆ, ಕಣ್ಣುಗಳಲ್ಲಿ ಸಿಟ್ಟು ತುಂಬಿಕೊಂಡಿತ್ತು. ಅದರಲ್ಲಿ ದೈನ್ಯವೂ ಬೆರೆತಿತ್ತು. ಜೊತೆಗೆ ಕಿರುನಗೆಯೂ ಹಣಿಕಿಕ್ಕುತ್ತಿತ್ತು.

' ಹೀಗೆ ಯಾಕೆ ಮಾಡತೀರಿ ನೀವು ? '

' ಏನು ಮಾಡೇನಿ ? '

' ಈ ಸೀರೆ ಯಾಕೆ ಈಗ ? '

ಶಾಮ ಸೂಸಿಯ ಕೈಯಲ್ಲಿಯ ಸೀರೆಯನ್ನು ತೆಗೆದುಕೊಂಡು ಮಡಿಕೆ ಬಿಚ್ಚತೊಡಗಿದ. 'ನೋಡು, ಜಗತ್ತಿನಲ್ಲಿ ನಾನು ಎಲ್ಲ ವಿಷಯಗಳನ್ನು ತಿಳಿದುಕೊಂಡೇ ನಡೆಯುತ್ತೇನೆ ಎಂದರೆ ಯಾರಿಂದಲೂ ಸಾಧ್ಯವಿಲ್ಲ. ಕೆಲವು ಸಲ ದೇವರು, ಧರ್ಮ ಎಂದು ಕಣ್ಣು ಮುಚ್ಚಿನಡೆಯಬೇಕಾಗುವುದು. ಕೆಲವು ಸಲ ವಂಶಪರಂಪರೆಯಾಗಿ ನಡೆದುಬಂದುದು, ಬಿಡಲು ಸಾಧ್ಯವಿಲ್ಲ ಎಂದು ಸುಮ್ಮನಿರಬೇಕಾಗುವುದು. ಮತ್ತೆ ಕೆಲವು ಸಲ ಹಿರಿಯರು - ಬಲ್ಲವರು-ಜ್ಞಾನಿಗಳು ಹೇಳುವರೆಂದ ಮೇಲೆ ಹುಡುಗರು-ಪ್ರಸ್ತುತ ಪ್ರಸಂಗದಲ್ಲಿ ಹುಡುಗಿಯರು ಇಲ್ಲವೆನ್ನಲು ಸಾಧ್ಯವಾಗುವುದಿಲ್ಲ. ಆದಕ್ಕೇ ಹೀಗೆ ಈ ಸೀರೆಯನ್ನು ಉಟ್ಟುಕೊ' ಎಂದು ಅವಳಿಗೆ ಸೀರೆಯನ್ನು ಉಡಿಸಲು ಹೋದ.

'ಇಲ್ಲಿ ಕೊಡಿರಿ ಸಾಕು ನೋಡಲಾರೆ' ಎಂದು ಶಾಮನಿಂದ ಸೀರೆಯನ್ನು ಸೆಳೆದುಕೊಂಡು ಉಟ್ಟುಕೊಳ್ಳತೊಡಗಿದಳು. ಶಾಮ ಕೋಣೆಯಲ್ಲಿ ಕ್ಯಾಮರಾ ಸಿದ್ಧಗೊಳಿಸುತ್ತಲಿದ್ದ. ಸೂಸಿ ಸಿಂಗಾರಾಗಿ ಕೋಣೆಗೆ ಬಂದಳು.

'ನಮ್ಮ ಸಿನೇಮಾ ನಟಿ ಬಂದಳು.'

'ಸಿನೇಮಾ ನಟಿ' ಸೂಸಿಗೆ ಅರ್ಥವಾಗಲಿಲ್ಲ.

ಶಾಮ ಅವಳನ್ನು ಕಣ್ತುಂಬ ನೋಡಿದ. ಫ್ರಂಟ್‌ವ್ಯೂ (front view) ಹೇಗೆ ಬರುವುದೋ ಎಂದು ನಮ್ಮ ಡೈರೆಕ್ಟರ ಸಾಹೇಬರಿಗೆ ಸಂದೇಹ. ಅವನೊಬ್ಬ ಹುಚ್ಚ. ಇಂತಹ ದೇವತೆಯು ನಟಿಯಾಗಿ ದೊರೆಯಬೇಕಾದರೆ ಪುಣ್ಯಬೇಕು ಎಂದು ಮನದಲ್ಲಿಯೇ ಅಂದುಕೊಳ್ಳುತ್ತ, ಅವಳ ಕೈಗಳನ್ನು ಹಿಡಿದು ಕಣ್ಣಲ್ಲಿ ಕಣ್ಣಿಟ್ಟು ನೋಡಿದ. ಸಾದುಗಪ್ಪು! ಗೊಲ್ಲತಿಯರಂತಹ ನಟಿಯನ್ನು ನೋಡಿನೋಡಿ ಅವನ ಕಣ್ಣುಗಳೂ ಮಂಕಾಗಿವೆ. ಹೆಂಗಸಿಗೆ ಸಾದುಗಪ್ಪಿನ ವಿನಃ ಈ ಬಗೆಯ ಬಂಗಾರ ವರ್ಣವು ಇರುವುದು ಸಾಧ್ಯವಿಲ್ಲವೆಂದೇ ಅವನ ಕಲ್ಪನೆಯಾಗಿರಬೇಕು ಎಂದುಕೊಂಡ.

'ಎಲ್ಲಿ ಸ್ವಲ್ಪ ದೂರ ಸರಿದು ನಿಲ್ಲು ನೋಡೋಣ.'

'ದೂರ ನಿಲ್ಲುವುದೇಕೆ, ನಾನು ಹೋಗಿಯೆ ಬಿಡುತ್ತೇನೆ.'

'ಇದಕ್ಕೇ ಏನು ಸೀರೆ ಉಡಹೇಳಿದ್ದು ? ಹುಬ್ಬುಗಂಟು ಹಾಕಬೇಡ; ಹೀಗೆ ಮೋರೆ ಸ್ವಲ್ಪ ಮೇಲೆ ಮಾಡು. ಬೆಳಕು ಸಾಲುವುದಿಲ್ಲವೋ ಏನೋ ಸುಮ್ಮನೆ ಪ್ಲೇಟು ಕೆಡಿಸುವುದು ಬೇಡ. ಮಾಳಿಗೆಯ ಮೇಲೆ ನೋಡೋಣ ನಡಿ. ಬಿಸಿಲು ಹೇಗಿದೆಯೊ.'

'ಇಷ್ಟೇನು ಅವಸರವಿತ್ತು ಈ ಫೋಟೊ ತೆಗೆಯುವುದು ?'

'ಇತ್ತು ಅಂತಲೆ ಇಷ್ಟು ಅವಸರ. ನಡಿ' ಎಂದು ಅವಳನ್ನು ಮಾಳಿಗೆಯ ಮೇಲೆ ಕರೆದುಕೊಂಡು ನಡೆದ. ಅವಳನ್ನು ಒಂದು ಬದಿಗೆ ನಿಲ್ಲಿಸಿದ. ಬಳಿಯಲ್ಲಿ ಒಂದೆರಡು ಹೂವಿನ ಕುಂಡೆಗಳನ್ನು ತಂದಿಟ್ಟ.

'ಸೀರೆಯು ಮುದುಡಿ ಮುದುಡಿಯಾಗಿದೆ ನೋಡು. ಸರಿಯಾಗಿ ಮಾಡಿಕೊ. ಮೋರೆಗೆ ಸ್ವಲ್ಪ ಪಾವುಡರು ಒರೆಸಿಕೊ. ಕಾಲಲ್ಲಿ ಹಾಗೆ ನಿರಿಗೆಗಳನ್ನು ಹಿಡಿಯಬೇಡ, ಬಿಟ್ಟುಬಿಡು. ಕುತ್ತಿಗೆಯನ್ನು ಯಾಕೆ ಹಾಗೆ ಸೆಟೆಸುತ್ತೀ ? ಅದು ತಾನಾಗಿ ನಿಲ್ಲುವಂತೆ ನಿಲ್ಲಲಿ. ನನ್ನ ಕಡೆಗೆ ನೋಡಬೇಡ. ಕಣ್ಣು ಸ್ವಲ್ಪ ಬದಿಗೆ ಹೊರಳಿಸು. ಗಲ್ಲಕ್ಕೆ ಇದೇನೊ ಹತ್ತಿದೆಯಲ್ಲ ?'

'ಸುಮ್ಮನೆ ಹೇಳಿದರೆ ಆಗದೇನೊ ! ಚಿವುಟಿಯೇ ತೋರಿಸಬೇಕೇನು ?'

'ಈಗ ಮೋರೆಯ ಮೇಲೆ ಸರಿಯಾದ ಭಾವ ಬಂದಿತು ನೋಡು. ಸರಿ— ವನ್, ಟು, ಸ್ಟಡಿ ಪ್ಲೀಜ್, ಥ್ರೀ (one, two, steady please, three) ಥ್ಯಾಂಕ್ ಯು (thank you).'

'ಆಯಿತಲ್ಲ ?'

'ಅಷ್ಟೇಕೆ ಅವಸರ ?' ಎಂದು ಕ್ಯಾಮರಾ ಒಂದು ಬದಿಗೆ ತೆಗೆದಿಟ್ಟು 'ಎಲ್ಲಿ ಸ್ವಲ್ಪ ಆಗಲೆ ನಿಂತ ಹಾಗೆ ಇನ್ನೊಂದು ಸಲ ನಿಲ್ಲು.'

'ಏಕೆ ?'

'ಸ್ವಲ್ಪ ನಿಲ್ಲು ಹೇಳುತ್ತೇನೆ.'

'ಹೀಗೆ ಏನು ?'

'ಹೊ ಹಾಗೆ. ಹಾಗೇ ನಿಲ್ಲು' ಎಂದು ಕತ್ತು ಹೊರಳಿಸಿ ನೋಡುತ್ತ, 'ನೋಡು ಸೂಸಿ ಆಗ ನಿನ್ನ ಚಿತ್ರವನ್ನು ತೆಗೆದೆ, ಆ ನಿರ್ಜೀವ ಯಂತ್ರದಿಂದ. ಅದು ಮಸಕಾಗಬಹುದು—ಹಾಳಾಗಬಹುದು. ಅಂತೆಯೆ ಈ ಮತ್ತೊಂದು ಚಿತ್ರ ಬರೆಯುತ್ತಲಿದ್ದೇನೆ. ಎಲ್ಲಿ ಅನ್ನುವಿಯಾ, ಇಲ್ಲಿ-ಈ ಎದೆಯಲ್ಲಿ. ಇಲ್ಲಿ ಮಾತ್ರ ನಿನ್ನ ಚಿತ್ರವು ದಿನದಿನಕ್ಕೆ ಹೊಸ ರೂಪಿನಲ್ಲಿ ಹೊಸ ಸೌಂದರ್ಯದಿಂದ ಶೋಭಿಸುವುದು. ಕಾಲಪುರುಷನ ತುಳಿತದಿಂದ ಹಾಳಾಗಲಾರದು ಈ ಚಿತ್ರ. ನಿನ್ನ ಅಪೂರ್ವ ಸೌಂದರ್ಯದ ಯಥಾವತ್ತಾದ ಚಿತ್ರವೊಂದನ್ನು ಚಿತ್ರಿಸಬೇಕೆಂದಿದ್ದೇನೆ. ವಿಶ್ವವನ್ನು ಬೆಳಗುವ ದಿವ್ಯ ಪ್ರಭೆಯು ನಿನ್ನ ಕಣ್ಣುಗಳಲ್ಲಿ, ನಿನ್ನ ನೋಟಗಳಲ್ಲಿ ತುಂಬಿ ತುಳುಕುತ್ತಿರ ಬೇಕು ಎಂದು ನನ್ನ ಆಸೆಯಿದೆ; ಅದಕ್ಕೆ....'

'ನೀವು ಮಾತಾಡಲು ಪ್ರಾರಂಭಿಸಿದರೆ ಅದಕ್ಕೆ ಪೂರ್ಣವಿರಾಮವೇ ಇರುವದಿಲ್ಲ. ನಿಮ್ಮನ್ನೇ ನೀವು ಮರೆತುಬಿಡುವಿರಿ.'

'ಮೈಮರೆಯುವುದು ಕಲಾಕೋವಿದನ ಪ್ರಥಮ ಚಿನ್ಹ.'

'ಹೀಗೆ ನೀವು ಮೈಮರೆತರೆ ನನ್ನ ಗತಿಯೇನು ? ಅಂತೆಯೆ ಕಲಾ ಕೋವಿದರಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ. ದಯವಿಟ್ಟು ತಾವು ತಮ್ಮ ಕಲೋಪನ್ಯಾಸವನ್ನು ಇಷ್ಟಕ್ಕೆ ಸಾಕು ಮಾಡಿ ನನ್ನನ್ನು ಮುಕ್ತಳನ್ನಾಗಿ ಮಾಡಬೇಕು.'

ಶಾಮು ಅವಳನ್ನು ನೆಟ್ಟನೋಟದಿಂದ ನೋಡುತ್ತಲಿದ್ದ.

'ಏಕೆ ಹಾಗೆ ನೋಡುತ್ತೀರಿ—ಹರಿದುಕೊಂಡು ತಿನ್ನುವ ಹಾಗೆ!'

'ಅದೆ ಅದೆ. ನಾನು ನೋಡುತ್ತಿರುವದೂ ಅದಕ್ಕೆ. ತಿನ್ನಬೇಕು ಅಂತಲೆ ನೋಡುತ್ತಲಿದ್ದೇನೆ. ಆದರೆ ಯಾವ ಭಾಗವನ್ನು ಮೊದಲು ತಿನ್ನಲಿ ಎಂಬುದೇ ನನಗೆ ಸಮಸ್ಯೆಯಾಗಿದೆ.'

ಅಂತೂ ಒಮ್ಮೆ ಸೂಸಿಯನ್ನು ಹೊರಹೊರಡಿಸಿದ. ಎಲ್ಲಿಗೆ ಹೋಗುವುದು ಎಂದು ಅವಳು ಎಷ್ಟು ಕೇಳಿದರೂ ಶಾಮುನು ಹೇಳಲಿಲ್ಲ. ಒಂದು ಕೆಲಸವಿದೆ, ಮಹತ್ವದ ಕೆಲಸವಿದೆ, ಅತ್ಯಗತ್ಯದ ಕೆಲಸವಿದೆ

ಎಂದಿಷ್ಟೆ ಮತ್ತೆ ಮತ್ತೆ ಹೇಳಿದ. ಟಾಕಿಯ ಸ್ಟೂಡಿಯೋದ ಕಡೆಗೆ ಅವಳನ್ನು ಕರೆದುಕೊಂಡು ಹೊರಟ.

ದಾರಿಯಲ್ಲಿ ಮೆಲ್ಲಗೆ ಆ ಪ್ರಸ್ತಾಪವನ್ನೆತ್ತಿದ.

' ಸೂಸಿ! ಒಂದು ಕೆಲಸವನ್ನು ಹುಡುಕಿಕೊಂಡು ಬಂದಿದ್ದೇನೆ '

' ಯಾವ ಕೆಲಸ ? '

' ನನ್ನನ್ನು ಮನೆಯಲ್ಲಿ ಕೂಡಿಸಿ ಮುಡಿದುಹಾಕಬೇಕೆಂದು ನಿನ್ನ ಮನಸ್ಸಿನಲ್ಲಿದೆ ಎಂದಿದ್ದೆಯಲ್ಲವೇ ? ಆ ಸುಯೋಗವು ಈಗ ಬಂದಿದೆ. '

' ನನಗಾಗಿ ನೌಕರಿ ಹುಡುಕಿದ್ದೀರಾ ? '

' ನೌಕರಿ ಎನ್ನಬೇಡ ನೋಡು. ಇದು ನೌಕರಿಯಲ್ಲ. ಜನತೆಯ ಸೇವೆ, ಕಲೋಪಾಸನೆ. '

' ಕೆಲಸವಾದರೂ ಯಾವುದು ಎಂಬುದು ಗೊತ್ತಾದರೆ ? '

' ಗೊತ್ತಾಗುವುದು, ಉತ್ಸುಕಳಾಗಬೇಡ. ನಿನಗಾಗಿ — ನನ್ನ ಪ್ರೀತಿಯ ಹೆಂಡತಿಗಾಗಿ–ನನ್ನ ಹೃದಯದ ದೇವತೆಗಾಗಿ ಯಾವ ಬಗೆಯ ಕೆಲಸವನ್ನು ಹುಡುಕಬಹುದು ಅಂತಹುದನ್ನೆ ಹುಡುಕಿಕೊಂಡು ಬಂದಿದ್ದೇನೆ. ಆ ಕೆಲಸದಿಂದ ನಿನ್ನ ಜೀವನವು ಹೆಚ್ಚು ಸುಂದರವಾಗಬೇಕು; ನನ್ನ ಜೀವನವೂ ವಿಕಾಸವಾಗಬೇಕು; ನಮ್ಮ ಜನ ಜೀವನವು ಉದಾತ್ತವಾಗಬೇಕು. '

' ಯಾವ ಕೆಲಸ ಹೇಳಬಾರದೆ ? '

' ಆಗೊ ಅಲ್ಲಿ ಎದುರಿಗೆ ಕಾಣಿಸುವುದಲ್ಲ....'

' ಯಾವುದು ? '

' ಎದುರಿಗೆ ಕಾಣಿಸುವುದಿಲ್ಲವೆ ? '

' ಟಾಕಿಯ ಸ್ಟೂಡಿಯೊ !'

' ಅದೆ ಅದೆ. ಇನ್ನು ಅದೆ ನಮ್ಮ ಕಾರ್ಯರಂಗ '

' ಅಂದರೆ ? '

' ಸೂಸಿ ' ಶಾಮನು ಸೂಸಿಯ ಹತ್ತಿರಕ್ಕೆ ಬಂದ. ಮೋರೆಯ ಮೇಲೆ ದೈನ್ಯವು ಉಕ್ಕುತ್ತಿತ್ತು.

ಸೂಸಿ ಅತ್ತ ಇತ್ತ ನೋಡಿದಳು. ದಾರಿಯಲ್ಲಿ ಯಾರೂ ಇರಲಿಲ್ಲ. ಮಧ್ಯಾನ್ಹದ ಉರಿಬಿಸಿಲು. ಆ ವಿಸ್ತಾರವಾದ ಬೀದಿಯಲ್ಲಿಯ ಗಿಡದ ನೆರಳು ಈ ಪ್ರಣಯಿಗಳಿಗೆ ಏಕಾಂತ ವಾಸವಾಯಿತು.

ಸೂಸಿಯ ಕೈಯನ್ನು ತನ್ನ ಕೈಯಲ್ಲಿ ತೆಗೆದುಕೊಂಡ. 'ನಿನಗೆ ಕೇಡುಂಟಾಗಬೇಕು ಎಂದು ನಾನೆಂದಾದರೂ ಬಯಸುವೆನೆ? ನೀನು ಸುಖಿಯಾಗಿರಬೇಕು, ನನ್ನನ್ನು ಸುಖಿಯನ್ನಾಗಿ ಮಾಡಬೇಕು. ಇಷ್ಟಾದರೆ ನಾನು ಕೃತಕೃತ್ಯ. ನಾನು ಏನನ್ನಾದರೂ ಹೇಳಿದರೆ ಒಮ್ಮೆಲೆ ಮೋರೆ ತಿರುವಬೇಡ. ನನ್ನ ಆಸೆ—ಅಭಿಲಾಷೆಗಳಿಗೂ ಸ್ವಲ್ಪ ಅವಕಾಶವನ್ನು ಕೊಡು.'

ಸೂಸಿಯು ಏನನ್ನೊ ಹೇಳಬೇಕೆಂದಿದ್ದಳು. ಆದರೆ ಶಾಮನ ಮೋರೆಯ ಮೇಲಿನ ದೈನ್ಯವನ್ನು ನೋಡಿ ಅವಳಿಗೆ ಏನು ಹೇಳಲೂ ಮನಸ್ಸಾಗಲಿಲ್ಲ. ಸುಮ್ಮನೆ ಶಾಮನನ್ನು ನೋಡುತ್ತ ನಿಂತಳು.

'ನಾನು ಹೇಳಲೆ ಸೂಸಿ? ನನ್ನ ಮಾತನ್ನು ಅಲ್ಲಗಳೆಯುವುದಿಲ್ಲವಲ್ಲವೆ ಸೂಸಿ? ಸೂಸಿ! ಹೇಳಲೆ? ನನ್ನ ಮಾತನ್ನು ತೆಗೆದು ಹಾಕಬೇಡ'

'ನಿಮಗೆ ನಾನೆಂದಾದರೂ ಎದುರಾಡಿದ್ದೇನೆಯೆ?

'ನಿಜವಾಗಿಯೂ ಇಲ್ಲ. ಆದರೂ ಏಕೊ ನನಗೆ ಹೆದರಿಕೆಯಾಗುತ್ತಿದೆ. ನಿನ್ನ ಮಾತಿನ ಮೇಲೆ ನನಗೆ ವಿಶ್ವಾಸವಿಲ್ಲವೆಂದಲ್ಲ. ಆದರೂ....' ನಗಬೇಕೆಂದು ಯತ್ನಿಸಿದ.

ಸೂಸಿಗೆ ಇದಾವುದೂ ಅರ್ಥವಾಗಲಿಲ್ಲ. ಹುಚ್ಚಳಂತೆ ಶಾಮನನ್ನು ನೋಡುತ್ತ ನಿಂತಿದ್ದಳು. ಶಾಮನ ನಗೆಯನ್ನೆ ಅನುಕರಿಸಲು ಯತ್ನಿಸಿದಳು.

'ಸೂಸಿ, ಇನ್ನು ನೀನು ಸಿನೇಮಾ ನಟಿಯಾಗಬೇಕು'

ಸೂಸಿಯ ಮೊಗದ ಮೇಲದೆಂತಹ ಬದಲಾವಣೆ?

'ಬೆದರಬೇಡ. ನಟಿಯಾಗುವುದೇನು ದೊಡ್ಡ ಪ್ರಮಾದವಲ್ಲ—ಪಾಪ ಕಾರ್ಯವಲ್ಲ. ಆ ಮಾತುಗಳೆಲ್ಲ ಹಳೆಯವು. ಈಗ ಆ ಭಾವನೆಗಳಲ್ಲಿ ವಿಶೇಷ ವ್ಯತ್ಯಾಸವಾಗಿದೆ. ಕುಲೀನರು ಕೂಡ ಸಿನೇಮಾಗಳಲ್ಲಿ ಪಾತ್ರವಹಿಸಬಹುದು.....'

ಸೂಸಿಗೆ ಇವನ ಈ ಭಾಷಣವು ಬೇಕಿರಲಿಲ್ಲ. 'ನಿಮ್ಮ ತಲೆಯಲ್ಲಿ ಇದನ್ನಾರು ತುಂಬಿದರು?'

'ಯಾರೂ ಇಲ್ಲ'

ಇಬ್ಬರೂ ಕೆಲವು ನಿಮಿಷ ಮೌನವಾಗಿ ನಿಂತರು. ಅಂತರಂಗದಲ್ಲಿ ಮಾತ್ರ ತುಮುಲ ಯುದ್ಧವೆ ನಡೆದಿತ್ತು. ಆ ಯುದ್ಧದಲ್ಲಿ ಬೇಗನೆ ಯಾವ ಪಂಗಡದವರಿಗೂ ವಿಜಯವು ದೊರೆಯುವ ಲಕ್ಷಣವಿರಲಿಲ್ಲ.

'ಏಕೆ ಸೂಸಿ?'

'ಏನು ಹೇಳಲಿ?'

'ದಯಮಾಡಿ ಒಪ್ಪಿಕೊ, ಸೂಸಿ'

'ಏನೂ ಅರಿಯದವಳನ್ನು ಸಿನೇಮಾ ನಟಿಯನ್ನಾಗಿ ಮಾಡಬೇಕೆನ್ನುವಿರಲ್ಲ, ನಾನೇನು ಹೇಳಲಿ?'

'ಅರಿಯದವಳು ಎನ್ನುವ ವಿಚಾರವನ್ನು ನನಗೆ ಬಿಟ್ಟುಕೊಡು. ಯಾರೂ ಹುಟ್ಟುತ್ತಲೆ ಪಂಡಿತರಾಗಿರುವುದಿಲ್ಲ. ನಿನ್ನಲ್ಲಿ ಮಾತ್ರ ಸಿನೇಮಾ ನಟಿಯಾಗಲು ಅಗತ್ಯವಿರುವ ಎಲ್ಲ ಗುಣಗಳೂ ಅವೆ. ಅವುಗಳನ್ನು ನಾನು ಅನೇಕ ಸಲ ಪರೀಕ್ಷಿಸಿದ್ದೇನೆ. ನಿನ್ನೆ ನಾನು ಡೈರೆಕ್ಟರರನ್ನು ಕಂಡು ನಿನ್ನ ಚಿತ್ರ ತೋರಿಸಿ ಮಾತನಾಡಿಕೊಂಡು ಬಂದಿದ್ದೇನೆ. ಅವರು ನಿನ್ನನ್ನು ನೋಡಬೇಕೆನ್ನುತ್ತಾರೆ; ಪರೀಕ್ಷಿಸಬೇಕೆನ್ನುತ್ತಾರೆ. ನೀನು ಅನುಮಾನಿಸಬೇಡ. ಅವರ ಸಂಗಡ ಧೈರ್ಯವಾಗಿ ಮಾತನಾಡು. ಒಂದೆರಡು ಹಾಡುಗಳನ್ನು ಹೇಳೆಂದರೂ ನಾಚಿಕೊಳ್ಳಬೇಡ. ಇಂದಿನ ನಿನ್ನ ವರ್ತನದ ಮೇಲಿಂದ ನಮ್ಮ ಜೀವನದ ಭವಿಷ್ಯವನ್ನು ನಿರ್ಧರಿಸಿಕೊಳ್ಳಬೇಕಾಗಿದೆ.'

'ಈಗ ನಾನೇನು ಮಾಡಲಿ?'

'ಅವರು ಕೇಳಿದ ಪ್ರಶ್ನೆಗಳಿಗೆ ಸರಿಯಾಗಿ ಉತ್ತರಕೊಡು. ನಿನ್ನನ್ನು ನಟಿ ಎಂದು ಅವರು ಸ್ವೀಕರಿಸಿದರೆ ನನ್ನನ್ನು ಕೂಡ ಚಿತ್ರಕಾರನೆಂದು ತೆಗೆದುಕೊಳ್ಳುವರಂತೆ'

'ನೀವು ಇಷ್ಟೊಂದು ದುಡುಕಬಾರದಿತ್ತು. ಇನ್ನೂ ಹೆಚ್ಚು ವಿಚಾರ ಮಾಡಿದ್ದರೆ ಚೆನ್ನಾಗಿತ್ತು.'

'ನಾನು ವಿಚಾರಿಸಿದ್ದೇನೆ. ನನ್ನ ಶಕ್ತಿಮೀರಿ ವಿಚಾರಿಸಿದ್ದೇನೆ. ಆದರೆ ಆ ಬಗ್ಗೆ ನಿನ್ನ ಅಭಿಪ್ರಾಯವನ್ನು ತೆಗೆದುಕೊಳ್ಳುವ ಸಾಹಸ ಮಾಡಲಿಲ್ಲ. ಎಲ್ಲಿ ನೀನು ಬೇಡವೆಂದು ಬಿಡುವಿಯೊ ಎಂಬ ಹೆದರಿಕೆಯು ಯಾವಾಗಲೂ ನನ್ನನ್ನು ಪೀಡಿಸುತ್ತಿತ್ತು.'

'ಮಾತು ಕತೆಗಳು ಕೂಡ ಮುಗಿದಿರಬೇಕು'

'ಇಲ್ಲ ಇಲ್ಲ. ಅಲ್ಲಿಯ ಪರಿಸ್ಥಿತಿಯನ್ನು ನೋಡಿಕೊಂಡು ಮುಂದಿನ ಮಾತು. ನಾನೇನು ಅಷ್ಟು ಹುಚ್ಚನಲ್ಲ ಸೂಸಿ' ಎಂದು ಮೂವತ್ತೆರಡೂ ಹಲ್ಲುಗಳನ್ನು ತೋರಿಸುತ್ತ ಶಾಮನಂದ.

ಶಾಮನ ಈ ವಿರೂಪವನ್ನು ಕಂಡು ಸೂಸಿಗೆ ನಗೆ ಬಂದಿತು. ಅದೂ ಒಂದು ವಿಚಿತ್ರವಾದ ನಗೆ.

'ನೀನು ಹೀಗೆ ಸ್ವಲ್ಪ ನಗುತ್ತಲಿದ್ದರೆ ನನಗೆ ಧೈರ್ಯ ಬಂದಂತಾಗುವುದು. ನೀನು ನನ್ನನ್ನು ಉದ್ಧರಿಸತಕ್ಕವಳು ಎಂದು ಹೇಳಿದೆನಲ್ಲವೆ? ಅದಕ್ಕೆ ಸರಿಯಾಗಿಯೆ ನಿನಗೆ ತಕ್ಕ ಹೆಸರನ್ನೂ ಕೊಟ್ಟಿದ್ದೇನೆ. ಅದೇ ನಿನ್ನ ಹೆಸರೆಂದು ಅವರಿಗೆ ಹೇಳಿದ್ದೇನೆ. ಹೆಸರು ನಾನು ಕೊಟ್ಟದ್ದು ಎಂದ ಮೇಲೆ ಚನ್ನಾಗಿರಲೇ ಬೇಕಲ್ಲವೇ?

'ಮತ್ತೊಂದು ಹೊಸ ಪ್ರಕರಣವೆ ಪ್ರಾರಂಭವಾಯಿತೇನು?'

'ಪ್ರಕರಣವೆಲ್ಲಿಂದ ಬಂತು. ಇದೆ ಪ್ರಕರಣ, ಇದೆ ವಿಷಯ. ಎಲ್ಲವೂ ಇದೇ. ಆದರೆ ನಿನ್ನ ಹೆಸರನ್ನು ಮಾತ್ರ 'ತಾರಿಣಿ' ಎಂದು ಹೇಳಿದ್ದೇನೆ.'

'ತಾರಿಣಿ.... ತಾರಿಣಿ....'

ಸೂಸಿಗೆ ಹಿಡಿಸಲಾರದಷ್ಟು ನಗು ಬಂದು ಬಿಟ್ಟಿತು.

## ೬

ಉಮಾಪತಿರಾಯರು ಹೊಸ ನಟಿಗಾಗಿ ಕಾದುಕೊಂಡಿದ್ದರು. ಮೂರು ಗಂಟೆಯಾಗುತ್ತ ಬಂತು. ಇನ್ನೂ ಏಕೆ ಬರಲಿಲ್ಲವೋ ಎಂದು ಅವರಿಗೆ ಸಂದೇಹ. ಅವಳ ಗಂಡನೊಡನೆ ಅಷ್ಟೊಂದು ಬೇಸರದಿಂದ ಮಾತನಾಡಬಾರದಿತ್ತು. ತಮ್ಮ ಒಪ್ಪಿಗೆಯನ್ನಾದರೂ ಸೂಚಿಸಿದ್ದರೆ ಚನ್ನಾಗಿತ್ತು. ಇನ್ನು ಅವನು ಬಾರದೆ ಹೋದರೆ ಏನು ಮಾಡುವುದು? ಎಂದು ಕಳವಳ ಪಡುತ್ತಿದ್ದರು.

ಜೇಬಿನಿಂದ ಸೂಸಿಯ ಚಿತ್ರವನ್ನು ಹೊರಗೆ ತೆಗೆದರು. ಇದೊಂದು ರತ್ನ ! ರತ್ನ ! ಎಂದು ಸಂತೋಷದಿಂದ ಹಿಗ್ಗಿದರು. ಇಂತಹಳು ನಟಿಯಾಗಿ ದೊರೆಯುವುದು ನಮ್ಮ ಕಂಪನಿಯ ಭಾಗ್ಯ. ಆದರೆ ಮಾತ್ರ ಸ್ವಲ್ಪ ದಡ್ಡತನ ಮಾಡಿದೆ. ಅವನು ಬಹಳ ಹೊತ್ತಿನ ವರೆಗೆ ನಿಂತು ಕೊಂಡೆ ನನ್ನ ಸಂಗಡ ಮಾತನಾಡಿದ. ಅಪಮಾನವೆನಿಸಿಕೊಂಡನೇನೊ ! ಏನು ಮಾಡಲಿ ? ಎಂದು ಏನೇನೊ ಲೆಕ್ಕಹಾಕುತ್ತ ಅವರ ಮಾರ್ಗಪ್ರತೀಕ್ಷೆ ಮಾಡುತ್ತಲಿದ್ದರು.

ಆಳು ಒಂದು ಚೀಟಿಯನ್ನು ಕೊಟ್ಟು ಹೋದ. ಅದರ ಮೇಲೆ 'ನಟಿ ತಾರಿಣಿ' ಎಂದು ಬರೆದಿತ್ತು. ರಾಯರು ಆಸನದಿಂದ ಚಟ್ಟನೆ ಮೇಲಕ್ಕೆದ್ದರು. ಅರಿವೆಗಳನ್ನು ಸರಿಪಡಿಸಿಕೊಳ್ಳುತ್ತ ತಾವೆ ಅವರನ್ನು ಸ್ವಾಗತಿಸಲು ಹೊರಗೆ ಹೊರಟರು.

' ನಮಸ್ಕಾರ ಶಾಮರಾಯರೆ, ನಮಸ್ಕಾರ ತಾರಿಣಿ ದೇವಿಯವರೆ. ಒಳಗೆ ದಯಮಾಡಿಸಬೇಕು. ' ಎಂದರು ರಾಯರು.

ಶಾಮ ಒಳಗೆ ನಡೆದ. ಅನುಮಾನಿಸುತ್ತ ಮೆಲ್ಲಗೆ ಒಂದೊಂದೆ ಹೆಜ್ಜೆಗಳನ್ನು ಎತ್ತಿಹಾಕುತ್ತ ಸೂಸಿ ಶಾಮನನ್ನು ಹಿಂಬಾಲಿಸಿದಳು.

ಟಾಕಿಯ ಆಫೀಸನ್ನು ಬಹಳ ಸುಂದರವಾಗಿ ಸಿಂಗರಿಸಿದ್ದರು. ವಿಧ ವಿಧದ ಆಸನಗಳು, ಚಿಕ್ಕ ಚಿಕ್ಕ ಮೇಜುಗಳು, ನಡುನಡುವೆ ಕೆಲವು ಆರಾಮಾಸನಗಳು. ಇವೆಲ್ಲವುಗಳ ಮೇಲೆ ಬಹಳ ಬೆಲೆಯ ವಸ್ತ್ರಗಳನ್ನು ಹರವಿದ್ದರು. ಗೋಡೆಯ ಮೇಲೆ ಅನೇಕ ಸ್ತ್ರೀ-ಪುರುಷರ ಚಿತ್ರಗಳನ್ನು ಓರಣವಾಗಿ ತೂಗು ಹಾಕಿದ್ದರು. ನೆಲದ ಮೇಲೆ ಹಾಲಿನ ತುಂಬ ಚಿತ್ರ ವಿಚಿತ್ರರಂಜಿತವಾದ ಜಮಖಾನೆಯನ್ನು ಹಾಸಿದ್ದರು.

ಆರಾಮಾಸನದ ಮೇಲೆ ಕುಳಿತುಕೊಳ್ಳಲು ಶಾಮ ಸೂಸಿಯರನ್ನು ಬಿನ್ನವಿಸಿ ರಾಯರು ತಾವೂ ಬಳಿಯ ಕುರ್ಚಿಯೊಂದರ ಮೇಲೆ ಕುಳಿತರು.

‘ ತಾವು ಬರುವಿರೊ ಇಲ್ಲವೊ ಎಂದು ಕೊಂಡಿದ್ದೆ. ತಾವು ಬಂದದ್ದು ಬಹಳ ಸಂತೋಷವಾಯಿತು ’ ರಾಯರು ಮಾತಿಗೆ ಪ್ರಾರಂಭಿಸಿದರು.

‘ ತಮ್ಮಂತಹರು ದಯವಿಟ್ಟು ದರ್ಶನವನ್ನೀಯಲು ಸಮ್ಮತಿಸಿರು ವಾಗ ಬಾರದೆ ಇರಲು ಸಾಧ್ಯವೆ ? ಬರಲು ತಡವಾಯಿತು. ತಮಗೆ ತೊಂದರೆಯಾಯಿತೇನೊ ! ’ ಶಾಮನೆಂದ.

‘ ತೊಂದರೆ ಎಲ್ಲಿಯದು. ಕೇವಲ ಚಿತ್ರವನ್ನು ನೋಡುವುದರಿಂದ ತಾರಿಣಿದೇವಿಯವರ ಪರಿಚಯವು ಸರಿಯಾಗಿ ಆಗಲಿಲ್ಲ. ಅಂತೆಯೆ ಅವರಿಗೆ ಇಲ್ಲಿಯ ವರೆಗೆ ಬರುವ ಶ್ರಮವನ್ನು ಕೊಡಬೇಕಾಯಿತು ’

ರಾಯರು ಹಸನ್ಮುಖಿಗಳಾಗಿ ಸೂಸಿಯ ಕಡೆಗೆ ನೋಡಿದರು. ರಾಯರ ಮಾತಿಗೆ, ಮುಗುಳುನಗೆಗೆ ತಾನು ಉತ್ತರ ಕೊಡಬೇಕೊ ಕೊಡ ಬಾರದೊ, ಕೊಡುವುದಾದರೆ ಯಾವ ಬಗೆಯಾಗಿ ಎಂಬುದು ಯಾವುದೂ ಸೂಸಿಗೆ ತಿಳಿಯಲಿಲ್ಲ. ಶಾಮನ ಕಡೆ ನೋಡಿದಳು. ರಾಯರು ಸೂಸಿ ಯನ್ನುದ್ದೇಸಿಸಿಯೇ ಮಾತನಾಡಿದ್ದಾರೆ ಎಂದು ಶಾಮನು ಸಂಪೂರ್ಣವಾಗಿ ಅರಿತಿದ್ದರೂ ರಾಯರ ಮಾತಿಗೆ ಉತ್ತರವೆಂದು ಮುಗುಳುನಗೆಯೊಡನೆ ತಲೆ ಹಾಕಿದ. ಸೂಸಿಯೂ ಶಾಮನನ್ನೆ ಅನುಸರಿಸಿ ತಾನೂ ನಗಲು ಯತ್ನಿಸಿದಳು.

ಅವಳ ತಲೆಯೂ ಅಲುಗಾಡಿತು. ರಾಯರು ಸೂಸಿಯ ನಗೆಯನ್ನೆ ಎತ್ತಿ ಕೊಂಡು ಮುಂದುವರಿಸಿ 'ತಾವು ಬಂದದ್ದು ಬಹಳ ಸಂತೋಷ' ಎಂದು ಬಾಯಿ ತುಂಬ ಹೇಳಿದರು.

ಸೂಸಿ ಶಾಮುನ ಕಡೆ ನೋಡಿದಳು. ಶಾಮುನ ಮೊಗದ ಮೇಲೆ ಇನ್ನೂ ಕಿರುನಗೆಯು ಮಿನುಗುತ್ತಿತ್ತು.

'ಇದಕ್ಕೆ ಮೊದಲು ಯಾವ ಚಲನಚಿತ್ರದಲ್ಲಿಯಾದರೂ ತಾವು ಭಾಗ ವಹಿಸಿದ್ದಿರಾ ? '

ಸೂಸಿ ಶಾಮುನ ಕಡೆ ನೋಡಿದಳು.

' ಇದೇ ಮೊದಲನೆಯ ಸಲ ' ಶಾಮುನಂದ.

ಸೂಸಿ ಗೋಣು ಹಾಕಿದಳು.

' ಹಾಗಾದರೆ ತಾವು ವಿಶೇಷ ಪರಿಶ್ರಮವನ್ನು ವಹಿಸಬೇಕಾಗುವುದು. ಪ್ರಥಮ ಚಿತ್ರದಲ್ಲಿ ಶ್ರದ್ಧೆಯಿಂದ ಕೆಲಸಮಾಡಿ ಕೀರ್ತಿಯನ್ನು ಸಂಪಾದಿಸಿ ದರೆ ಮುಂದೆ ತಮಗೆ ಬಹಳ ಅನುಕೂಲವಾಗುವುದು. '

ಇಷ್ಟರಲ್ಲಿ ಚಹಾ ಬಂದಿತು. ಸೂಸಿ ಶಾಮುನ ಕಡೆ ನೋಡಿದಳು. ಶಾಮು ಕಣ್ಣು ಚಿವುಟಿದ. ಮೂವರೂ ಚಹಾ ಕುಡಿದರು. ಎಲೆ ಅಡಿಕೆ ಮೆಲ್ಲುವುದಾಯಿತು. ರಾಯರ ಮಾತುಗಳಂತೂ ಒಂದೆ ಸವನೆ ನಡೆದೇ ಇದ್ದವು. ತಾವು ಈ ವರೆಗೆ ತಯಾರಿಸಿದ ಚಿತ್ರಗಳು, ಅವುಗಳಲ್ಲಿ ತಾವು ನಿರ್ವಹಿಸಬೇಕಾಗಿದ್ದ ಕಷ್ಟ ನಷ್ಟಗಳು, ಅವುಗಳ ಬಗ್ಗೆ ದೊಡ್ಡ ದೊಡ್ಡ ಮಹನೀಯರುಗಳಿಂದ ದೊರೆತ ಮಾನ ಮರ್ಯಾದೆ ಮೊದಲಾದವುಗಳ ವಿಷಯವಾಗಿ ನಿರರ್ಗಳವಾಗಿ ಹೇಳಿಕೊಂಡರು.

' ತಮ್ಮ ಒಂದೆರಡು ಹಾಡುಗಳನ್ನು ಕೇಳಬೇಕಿತ್ತು ' ಎಂದು ಸೂಸಿ ಯನ್ನು ನೋಡುತ್ತ ಶಾಮುನ ಕಡೆ ಕಣ್ಣು ಹೊರಳಿಸಿದರು ರಾಯರು.

ಸೂಸಿಯು ಕಾತರಳಾಗಿ ಶಾಮುನನ್ನು ನೋಡಿದಳು.

' ಆಗಬಹುದು ' ನಾಲಿಗೆಯಕಿಂತಲೂ ಕತ್ತನ್ನೆ ಹೆಚ್ಚು ಉಪಯೋಗಿ ಸುತ್ತ ಶಾಮುನಂದ.

' ನನಗೆ ಹಾಡಲಿಕ್ಕೆ ಬರುವುದಿಲ್ಲ ' ಸೂಸಿ ತಡವರಿಸುತ್ತ ಹೇಳಿದಳು.

'ಕಂಠವು ಹೇಗಿದೆ ನೋಡಬೇಕೆಂದು. ಇಷ್ಟೆ! ನಟ ನಟಿಯರಿಗೆ ಹಾಡಲು ಕಲಿಸುವುದಕ್ಕೆ ಇಲ್ಲಿ ದೊಡ್ಡ ಗಾಯಕರನ್ನಿಟ್ಟಿದ್ದೇವೆ. ತಮಗೆ ಬೇಕಾದಷ್ಟು ಗಾಯನದ ಅಭ್ಯಾಸವನ್ನು ಇಲ್ಲಿ ಮಾಡಿಕೊಳ್ಳಬಹುದು. ಮೊದಲು ತಮಗೆ ನಮ್ಮ ಸ್ಟೂಡಿಯೊ ತೋರಿಸಬೇಕೆಂದಿದ್ದೇವೆ. ಅಲ್ಲಿಯೆ ಹಾಡಿನ ಟ್ರಾಯಲ್ ಕೂಡ ತೆಗೆದುಕೊಳ್ಳೋಣ; ಆಗಬಹುದಲ್ಲವೆ?' ರಾಯರು ಕೇಳಿದರು.

ಶಾಮ ಸೂಸಿ ಇಬ್ಬರೂ ತಲೆಹಾಕುತ್ತ ಮೇಲಕ್ಕೆದ್ದರು; ಯಂತ್ರ ದಂತೆ ರಾಯರನ್ನು ಹಿಂಬಾಲಿಸಿದರು.

ಅದೇ ಆಗ ಪೌರಾಣಿಕ ಚಿತ್ರಪಟವೊಂದು ಪೂರ್ತಿಯಾಗಿತ್ತು. ಅದರ ಸೆಟಿಂಗ್ಸ (settings) ಇನ್ನೂ ತೆಗೆದಿರಲಿಲ್ಲ. ಅಲ್ಲಿಯ ಚಿತ್ರವಿಚಿತ್ರವಾದ ಸಾಮಾನುಗಳನ್ನು ಕಂಡು ಸೂಸಿಗೆ ವಿಚಿತ್ರವೆನಿಸಿತು. ಸಿನೇಮಾದಲ್ಲಿ ಕಂಡು ಬರುವ ಕೋಟೆ ಕೊತ್ತಳಗಳು, ರಾಜಾಸ್ಥಾನ, ಸಭಾಗೃಹ ಮೊದ ಲಾದ ಭವ್ಯ ಮಂದಿರಗಳು ಸ್ಟೂಡಿಯೊದ ಒಂದು ಮೂಲೆಯಲ್ಲಿ ರಟ್ಟೆ ನಿಂದಲೂ ಅರಿವೆಯಿಂದಲೂ ತಯಾರಿಸಲ್ಪಟ್ಟವು ಎಂಬ ಸಂಗತಿಯು ಅವಳಿಗೆ ಆಶ್ಚರ್ಯವನ್ನುಂಟುಮಾಡಿತು. ಸ್ಟೂಡಿಯೊದ ಒಂದು ಬದಿಗೆ ಕೃತ್ರಿಮ ಪೇಟೆಯೊಂದನ್ನು ನಿರ್ಮಿಸಿದ್ದರು. ಅಲ್ಲಿ ಇಟ್ಟಿದ್ದ ಕಟ್ಟಿಗೆಯ ಹಣ್ಣು ಹಂಪಲ, ಮಣ್ಣಿನ ಕಾಯಿಪಲ್ಲೆ ಕಂಡು ಇದು ಕೃತ್ರಿಮತೆಯ ಪರಮಾ ವಧಿ ಎಂದು ಬೇಸರಗೊಂಡಳು. ಅಷ್ಟರಲ್ಲಿಯೇ ರಾಯರು ಆ ಕೃತ್ರಿಮ ಪೇಟೆಯ ಚಿತ್ರವನ್ನು ತೋರಿಸಿ 'ಇದು ಪೇಟೆಯ ಚಿತ್ರ' ಎಂದರು.

ಸೂಸಿಗೆ ನಂಬುಗೆಯಾಗಲಿಲ್ಲ. ಚಿತ್ರವನ್ನು ಮತ್ತೆ ನೋಡಿ ಆ ಪೇಟೆಯೊಡನೆ ತುಲನೆಮಾಡಿದಳು. ಸರಿ ಇದರದೇ ಚಿತ್ರ. ಆದರೆ ಎಷ್ಟು ಸುಂದರವಾಗಿದೆ! ತನ್ನ ಕಣ್ಣುಗಳನ್ನೆ ನಂಬದಾದಳು.

'ಹೇಗಿದೆ ನೋಡಿದಿರಾ? ಅಸಹ್ಯವಾದುದರಿಂದ ಸುಂದರವಾದು ದನ್ನು ನಿರ್ಮಿಸುವುದು. ಪೇಟೆಯನ್ನು ನೋಡಿರಿ, ಪೇಟೆಯ ಚಿತ್ರವನ್ನು ನೋಡಿರಿ. ಪೇಟೆಯು ನಮಗೆ ಬೇಸರವನ್ನುಂಟುಮಾಡುತ್ತದೆ. ಪೇಟೆಯ

ಚಿತ್ರವು ನಮಗೆ ಸಂತೋಷವನ್ನುಂಟುಮಾಡುತ್ತದೆ. ಸಿನೇಮಾ ಎಂದರೆ ಇದು ' ರಾಯರು ಗಂಭೀರವಾಗಿ ಹೇಳಿದರು.

' ಅಂತೆಯೆ ಸಿನೇಮಾ ಒಂದು ಕಲೆ. ' ಶಾಮನಂದ.

ಸೂಸಿ ಚಿತ್ರವನ್ನು ಮೂಲದೊಡನೆ ಹೋಲಿಸಿ ನೋಡುವುದರಲ್ಲಿಯೆ ಮಗ್ನಳಾಗಿದ್ದಳು. 'ಸಿನೇಮಾ ಒಂದು ಕಲೆ' ಎಂಬ ಶಾಮನ ಮಾತುಗಳು ಮಾತ್ರ ಅವಳಿಗೆ ನಿಚ್ಚಳವಾಗಿ ಕೇಳಿದುವು. ಮೇಲಿಂದ ಮೇಲೆ ಶಾಮನು 'ಕಲೆ ಕಲೆ' ಎಂದು ಹೇಳುತ್ತಲಿದ್ದಾನೆ. ಕಲೆಯ ಕೈವಾಡದಿಂದಲೆ ಮಕ್ಕಳಾಟ ದಂತಿದ್ದ ಈ ಪೇಟೆಯು ಚಿತ್ರದಲ್ಲಿ ಮಾತ್ರ ಇಷ್ಟೊಂದು ಸುಂದರವಾಗಿ ಕಾಣಿಸುತ್ತಲಿದೆ; ನೋಡುವವರನ್ನು ಮುಗ್ಧಗೊಳಿಸುವಂತಿದೆ. ತಾನೂ ಕೂಡ ಚಿತ್ರದಲ್ಲಿ ಸುಂದರಳಾಗಿಯೆ ಕಂಡು ಎಲ್ಲರನ್ನೂ ಮರಳುಗೊಳಿಸ ಬಹುದು. ಈ ಪೇಟೆಯಕಿಂತಲೂ ನಾನೇನು ಅಸಹ್ಯವಾಗಿಲ್ಲವಷ್ಟೆ! ಎಂಬ ವಿಚಾರಗಳು ಅವಳ ತಲೆಯಲ್ಲಿ ಬಂದು ಹೋದವು.

ಸ್ಟೂಡಿಯೊ ಸುತ್ತಾಡಿ ನೋಡಿಕೊಂಡು ಬಳಿಯ ತೋಟವೊಂದನ್ನು ಪ್ರವೇಶಿಸಿದರು. 'ಚಿಕ್ಕ ಕೈದೋಟವು ಅನೇಕ ಚಿತ್ರಪಟಗಳಲ್ಲಿ ರಾಜೋದ್ಯಾನ ವಾಗಿ ಉಪಯೋಗಿಸಲ್ಪಟ್ಟಿದೆ ' ಎಂದು ರಾಯರು ಹೇಳಿ ಸೋನೇರಿ ಗಿಲೀಟು ಮಾಡಿದ ಕಟ್ಟಿಗೆಯ ಸುಖಾಸನಗಳನ್ನು ತೋರಿಸುತ್ತ ' ಇವು ರಾಜಾಸನ ಗಳು. ಅನೇಕ ರಾಜರ ಹಾಗು ರಾಣಿಯರ ಪ್ರಣಯ ಪ್ರಸಂಗಗಳು ಈ ಆಸನದಲ್ಲಿಯೆ ನಡೆದಿವೆ ' ಎಂದು ನಗುತ್ತ ಹೇಳಿ ಮುಂದಕ್ಕೆ ನಡೆದರು.

ಸ್ಥಳವು ಎಷ್ಟು ಚಿಕ್ಕದಾಗಿದೆ. ಆದರೆ ಇಷ್ಟರಲ್ಲಿ ಎಷ್ಟು ಸಂಗತಿಗಳು ನಡೆಯುವವು ! ಅಲ್ಲಿ ಯುದ್ಧ, ಇಲ್ಲಿ ಪ್ರಣಯ; ಅಲ್ಲಿ ದರ್ಬಾರು, ಇಲ್ಲಿ ಶೃಂಗಾರ; ಇದೇ ರಾಜಾಸ್ಥಾನ, ಇದೇ ಅಂತಃಪುರ; ಇದೇ ಬಡವರ ಗುಡಿ ಸಲು, ಇದೇ ಶ್ರೀಮಂತರ ಮಹಲು, ಇದೇ ಬೀದಿ, ಇದೇ ಪೇಟೆ, ಎಲ್ಲವೂ ಇದೇ ಇದೇ. ಈ ಒಂದು ಸ್ಟೂಡಿಯೊ ಅಖಿಲ ಪ್ರಪಂಚವನ್ನೆ ಒಳಗೊಂಡಂತಿದೆ. ಯಶೋಧರೆಯು ಕೃಷ್ಣನ ಬಾಯಿಯಲ್ಲಿ ಅಖಂಡ ಬ್ರಹ್ಮಾಂಡವನ್ನೆ ಕಂಡಂತೆ ಆ ಸ್ಟೂಡಿಯೊದಲ್ಲಿ ವಿಶ್ವವನ್ನೆ ಕಂಡು ಸೂಸಿಗೆ ಏನೂ ತಿಳಿಯದಂತಾಯಿತು.

'ಇದು ನಮ್ಮ ಮಾನಸ ಸರೋವರ' ಎಂದು ಒಂದು ಚಿಕ್ಕ ಹೊಂಡ ವನ್ನು ತೋರಿಸುತ್ತ ನಗೆಯಾಡಿದರು ರಾಯರು.

ಅದೇನು ಮಾನಸವೊ ಅದೇನು ಸರೋವರವೊ! ಅದು ಹೊಂಡದ ಕಿಂತಲೂ ಚಿಕ್ಕದು. ಗಚ್ಚಿನಿಂದ ಕಟ್ಟಿದ ಹೌದು. ನೀರು ತುಂಬಿ ಅದೆಷ್ಟೊ ದಿನಗಳಾಗಿರಬೇಕು. ನೀರು ಮಲೆತು ಕೊಳೆತಿದ್ದರಿಂದಲೂ ಏನೊ ಒಂದು ಬಗೆಯ ದುರ್ವಾಸನೆಯು ಸುತ್ತಲೂ ತುಂಬಿಕೊಂಡಿತ್ತು. ಅದರಲ್ಲಿ ರಟ್ಟಿನ ಹಾಗು ಬೆಂಡಿನ ದೊಡ್ಡ ಕಮಲದ ಮೊಗ್ಗೆ, ಹೂವು, ಎಲೆಗಳನ್ನು ಮಾಡಿ ತೇಲಿಬಿಟ್ಟಿದ್ದರು. ಒಂದು ಮೂಲೆಯಲ್ಲಿ ಕೆಲವು ರಟ್ಟಿನ ರಾಜ ಹಂಸಗಳೂ ನೀರಿನಲ್ಲಿ ಜೋಲಿ ಹೊಡೆಯುತ್ತ ನಿಂತಿದ್ದವು.

'ಎಲ್ಲವೂ ರಟ್ಟಿನದೆ!' ಅವಳಿಗೆ ತಿಳಿಯದಂತೆ ಉದ್ಗಾರವೊಂದು ಹೊರಬಿದ್ದಿತು.

'ಈ ಚಿತ್ರವನ್ನು ನೋಡಿರಿ' ರಾಯರು ಸರೋವರದ ಚಿತ್ರವನ್ನು ತೋರಿಸಿದರು. ದೂರದಿಂದ ಆ ರಟ್ಟಿನವೂ ಕೂಡ ನಿಜವಾದ ಹಂಸಗಳಂತೆ ಕಾಣಿಸುತ್ತಲಿದ್ದವು. ಒಂದೆರಡು ನಿಜವಾದ ರಾಜಹಂಸಗಳನ್ನೆ ಈಸು ಬಿಟ್ಟಿದ್ದರಿಂದ ಎಲ್ಲವೂ ಸುಂದರವಾಗಿ ಹಾಗು ಸ್ವಾಭಾವಿಕವಾಗಿ ಕಾಣುತ್ತ ಲಿತ್ತು.

ಅನೇಕ ಚಿತ್ರಪಟಗಳಲ್ಲಿ ನಾನು ನೋಡುತ್ತಲಿದ್ದ ರಾಜೋದ್ಯಾನ ದಲ್ಲಿಯೆ ಈಗ ನಿಂತಿದ್ದೇವೆ ಎಂಬ ವಿಚಾರವು ಅವಳಿಗೆ ಬಹಳ ಸಮಾಧಾನ ವನ್ನುಂಟುಮಾಡಿತು. ಇಲ್ಲಿಯೆ ರಾಮನು ಸೀತೆಯೊಡನೆ ವಿಹರಿಸಿದ್ದಾನೆ, ರಾವಣನು ಮಂಡೋದರಿಯೊಡನೆ ಆಟವಾಡಿದ್ದಾನೆ, ಕೃಷ್ಣನು ರಾಧಿ ಯೊಡನೆ ರಮಿಸಿದ್ದಾನೆ. ಅದೆಷ್ಟೊ ಪ್ರಣಯಿಗಳು ಪ್ರೇಮಸಾಗರದಲ್ಲಿ ತೇಲಾಡಿದ್ದಾರೆ. ಅದೇ ಸರೋವರದ ದಂಡೆಯ ಮೇಲೆ, ಅದೇ ಲತಾಮಂಟ ಪದ ಕೆಳಗೆ, ಅದೇ ಆಸನದ ಬಳಿಯಲ್ಲಿ, ಅದೇ ಗಿಡದ ಎಲೆಯೊಂದನ್ನು ಕಿತ್ತು ಅದರ ಜೊತೆಗೆ ಆಟವಾಡುತ್ತ ಸೂಸಿಯೂ ನಿಂತುಕೊಂಡಿದ್ದಾಳೆ. ಅವಳ ರಾಜಾಧಿರಾಜನೂ ಬಳಿಯಲ್ಲಿಯೆ ನಿಂತಿದ್ದಾನೆ.

ಸೂಸಿಯ ಹೃದಯವನ್ನು ಅಪೂರ್ವವಾದ ಆನಂದದ ಸೆಳಕೊಂದು ಅರಗಳಿಗೆ ಬೆಳಗಿತು.

ಸೂಸಿ ಕುಡಿ ನೋಟದಿಂದ ಶಾಮನ ಕಡೆ ಕಣ್ಣು ಹೊರಳಿಸಿದಳು.

ಶಾಮನು ತನ್ನ ಕಲ್ಪನಾಸಾಮ್ರಾಜ್ಯದ ಆಧಿಪತ್ಯದ ಕನಸಿನಿಂದ ಇನ್ನೂ ಎಚ್ಚತ್ತಿರಲಿಲ್ಲ.

## ೭

ಉಮಾಪತಿರಾಯರು ಶಾಮ–ಸೂಸಿಯವರನ್ನು ಒಂದು ಹಾಲಿಗೆ
ಕರೆದುಕೊಂಡು ಬಂದರು. ಹಾಲು ಭವ್ಯವಾಗಿತ್ತು ಹಾಗು ಅಷ್ಟೆ ಸುಂದರ
ವಾಗಿತ್ತು. ಹಾಲಿನ ನಡುವೆ ಸುಖಾಸನಗಳಲ್ಲಿ ೪–೬ ಜನರು ಕುಳಿತು
ಕೊಂಡು ಮಾತನಾಡುತ್ತಲಿದ್ದರು. ಶಾಮ–ಸೂಸಿಯವರನ್ನು ಮುಗುಳು
ನಗೆಯಿಂದ ಎಲ್ಲರೂ ಸ್ವಾಗತಿಸಿದರು.

ಉಮಾಪತಿರಾಯರು ಸೂಸಿಯನ್ನುದ್ದೇಶಿಸಿ ‘ಇವರು ಶ್ರೀಮತಿ
ತಾರಿಣಿದೇವಿಯವರು. ನಮ್ಮ ಶ್ರೀ ಕಾಂತರ ‘ಜೀವಜ್ಯೋತಿ’ ಎಂಬ
ಸಾಮಾಜಿಕ ಚಿತ್ರಪಟದಲ್ಲಿ ಪಾತ್ರವಹಿಸುವ ಇಚ್ಛೆಯಿಂದ ಇಲ್ಲಿಗೆ ಬಂದಿ
ದ್ದಾರೆ. ಅವರ ಬದಿಯಲ್ಲಿರುವವರು ಅವರ ಪತಿಯಾದ ಶ್ರೀಮಾನ್
ಶಾಮರಾಯರು. ಅವರೂ ಕೂಡ ಒಳ್ಳೆ ಚಿತ್ರಕಾರರು. ತಮ್ಮ ಕಲಾ
ನೈಪುಣ್ಯವನ್ನು ಪ್ರದರ್ಶಿಸುವ ಅನೇಕ ಚಿತ್ರಗಳನ್ನು ಬರೆದು ಕೀರ್ತಿಯನ್ನು
ಸಂಪಾದಿಸಿದ್ದಾರೆ’ ಎಂದು ಹೇಳಿ ಆಸನದಲ್ಲಿ ವಿರಾಜಮಾನರಾಗಿರುವ
ಪ್ರಥಮ ವ್ಯಕ್ತಿಯನ್ನು ನಿರ್ದೇಶಿಸಿ ‘ಇವರು ನಮ್ಮ ಕಂಪನಿಯ ಒಡೆಯ
ರಲ್ಲೊಬ್ಬರಾದ ಸೇಟ ಸುಂದರಲಾಲ್‌ಜೀ ಮೆಹರವಾಡೆಯವರು’ ಎಂದರು

ಶಾಮನ ಒಂದು ಸಂಶಯದ ನಿವಾರಣೆಯಾದಂತಾಯಿತು. ‘ಕಲಾ
ದರ್ಶ ಟಾಕೀಜ ಲಿಮಿಟೆಡ್’ ಇದು ಒಂದು ಸಾರ್ವಜನಿಕ ಸಂಸ್ಥೆ ಎಂದು
ಕೊಂಡಿದ್ದ. ಕರ್ನಾಟಕದೊಳಗಿನ ಸಾರ್ವಜನಿಕ ಸಂಘಸಂಸ್ಥೆಗಳ ಜೀವಿತದ
ಪರಿಮಿತಿಯನ್ನೂ ಬಲ್ಲವನಾಗಿದ್ದ. ಅಂತೆಯೆ ಕರ್ನಾಟಕದಲ್ಲಿ ಇಷ್ಟು ದಿನಗಳ
ವರೆಗೆ ಈ ಕಂಪನಿಯು ಜೀವಿಸಿದ್ದುದು ಅವನಿಗೆ ಆಶ್ಚರ್ಯವನ್ನು ಉಂಟು
ಮಾಡಿತ್ತು. ಕಂಪನಿಯು ಕರ್ನಾಟಕದಲ್ಲಿದ್ದರೂ ಆಡಳಿತವು ಕನ್ನಡಿಗರ
ದಲ್ಲ, ಇದೆಲ್ಲವೂ ಕೆಲವು ಸೇಟರ ಆಧೀನಕೊಳ್ಳಪಟ್ಟಿದೆ. ಅಂತೆಯೆ ಜೀವಿಸಿ

ಕೊಂಡಿದೆ. ಇಲ್ಲವಾದರೆ ಎಂದೊ ಚಲ್ಲಾಪಿಲ್ಲಿಯಾಗಿ ಹೋಗುತ್ತಿತ್ತು ಎಂದು ಕೊಂಡ.

ಶಾಮ ಸೂಸಿಯರು ನಯ-ವಿನಯ-ಭಕ್ತಿಗಳಿಂದ ಸೇಟರಿಗೆ ನಮಸ್ಕರಿಸಿದರು. ಆರಾಮಾಸನವನ್ನು ತುಂಬಿದ ತಮ್ಮ ದೇಹವನ್ನು ಅಲ್ಲಿಯೆ ಸ್ವಲ್ಪ ಹೊರಳಿಸುತ್ತ ಸೇಟರು ಅವರ ನಮಸ್ಕಾರವನ್ನು ಸ್ವೀಕರಿಸಿದರು.

ರಾಯರು ಸೇಟರ ಬಳಿಯಲ್ಲಿ ಕುಳಿತ ಮತ್ತೊಬ್ಬ ಮಹನೀಯರನ್ನು ವುದ್ದೇಶಿಸಿ 'ಇವರು ಶ್ರೀಕಾಂತರು. ಈಗ ನಾವು ಕೈಕೊಂಡಿರುವ 'ಜೀವಜ್ಯೋತಿ' ಎಂಬ ಚಿತ್ರದ ಕಥಾಲೇಖಕರು. ಇವರು ಅನೇಕ ಕಾದಂಬರಿಗಳನ್ನು ಬರೆದು ಕರ್ನಾಟಕದಲ್ಲೆಲ್ಲ ಹೆಸರಾಗಿದ್ದಾರೆ. ತಾವು ಇವರ ಕಾದಂಬರಿಗಳನ್ನು ಓದಿರಬಹುದಲ್ಲವೇ?' ಎಂದು ಶಾಮನನ್ನು ಕೇಳಿದರು.

ಶಾಮನು ನಮಸ್ಕರಿಸುತ್ತ 'ಹೌದು ನಾನು ಓದಿದ್ದೇನೆ. ಇವರ 'ಪಾಪಿ ಜೀವನ' ಎಂಬ ಕಾದಂಬರಿಯು ನನ್ನನ್ನು ಮುಗ್ಧನನ್ನಾಗಿ ಮಾಡಿತು. ತಾರಿಣಿದೇವಿಯವರು ಅವರ ಕಾದಂಬರಿಗಳನ್ನೋದಿ ಸಂತೋಷಪಟ್ಟಿದ್ದಾರೆ' ಎಂದ.

'ಕಾದಂಬರಿಗಳನ್ನೇನೊ ಬರೆಯುತ್ತಲಿದ್ದೇನೆ. ಮುಖ್ಯವಾಗಿ ಅವುಗಳಲ್ಲಿ ಅಡಕವಾಗಿರುವ ರಸಾನುಭವವನ್ನು ಮಾಡಿಕೊಳ್ಳುವುದಕ್ಕೆ ತಮ್ಮಂತಹ ರಸಿಕರು ಬೇಕು. ಆಗ ನಮ್ಮ ಶ್ರಮವು ಸಾರ್ಥಕವಾದಂತಾಗುವುದು.' ಶ್ರೀಕಾಂತರು ಇನ್ನು ಏನೇನೊ ಹೇಳಬೇಕೆಂದಿದ್ದರು. ಆದರೆ ರಾಯರು ಮತ್ತೊಬ್ಬರ ಪರಿಚಯ ಮಾಡಿಕೊಡಲು ಪ್ರಾರಂಭಿಸಿದ್ದರಿಂದ ಶ್ರೀಕಾಂತರ ಉಪನ್ಯಾಸವು ಹುಸಿನಗೆಯಲ್ಲಿ ಪೂರ್ತಿಯಾಯಿತು.

ರಾಯರು ಅನಂತರದಲ್ಲಿ ಸಂಗೀತ ನಿರ್ದೇಶಕರು, ಸಂಪಾದಕರು, ಫೋಟೊ ಗ್ರಾಫರರು ಮೊದಲಾದ ಹಲವರ ಪರಿಚಯ ಮಾಡಿಕೊಟ್ಟರು. ಪರಸ್ಪರ ನಮಸ್ಕಾರ ಮಾಡುವುದಾದನಂತರ ಎಲ್ಲರೂ ಕುಳಿತುಕೊಂಡರು.

'ಕುಲೀನರು ಸಿನೇಮಾಗಳಲ್ಲಿ ಪಾತ್ರವಹಿಸಲು ಮುಂದೆ ಬರುತ್ತಿರುವುದನ್ನು ನೋಡಿದರೆ ಹಿಂದುಸ್ಥಾನದಲ್ಲಿ, ಅದರಲ್ಲಿಯೂ ಕರ್ನಾಟಕದಲ್ಲಿ ಚಲಚ್ಚಿತ್ರ ಪ್ರಪಂಚಕ್ಕೆ ಸುಂದರವಾದ ಭವಿಷ್ಯವಿದೆ ಎಂದೇ ನಾನು ಭಾವಿಸು

ತ್ತೇನೆ' ಎಂದು ಠೀವಿನಿಂದ ಶ್ರೀಕಾಂತರು ಹೇಳಿದರು. ಯಾವ ವಿಷಯದ ಮೇಲೆಯೆ ಆಗಲಿ ಚಿಕ್ಕ ಉಪನ್ಯಾಸಗಳನ್ನು ಕೊಟ್ಟಂತೆಯೆ ಮಾತನಾಡ ಬೇಕು ಎಂದು ಅವರ ಆಸೆ. ಯಾವ ಮಾತನ್ನಾಡಿದರೂ ಶ್ರೋತೃಗಳೆದುರಿ ನಲ್ಲಿ ನಿಂತು ಮಾತನಾಡುವ ಉಪನ್ಯಾಸಕನ ಬಿಗುವಿರುತ್ತಿತ್ತು. ನಡು ನಡುವೆ ಮಾತನ್ನು ನಿಲ್ಲಿಸಿ ಎಲ್ಲರ ಮುಖಗಳನ್ನು ಹುಳು ಹುಳು ನೋಡುವ ಅಭ್ಯಾಸವೂ ಅವರಲ್ಲಿತ್ತು. ತಮ್ಮ ಮಾತಿನ ವಿಷಯದಲ್ಲಿ ಶ್ರೋತೃಗಳ ಅಭಿಪ್ರಾಯವು ಹೇಗಿದೆ ಎಂಬುದು ಆಗಲೇ ಅವರಿಗೆ ತಿಳಿದು ಬರಬೇಕು. ಮೇಲಾಗಿ ಅಶಿಕ್ಷಿತರಿಂದ ತುಂಬಿದ ಆ ಕಂಪನಿಯ ಸುಶಿಕ್ಷಿತರಲ್ಲಿ ಇವರೂ ಒಬ್ಬರು; ಪ್ರಥಮ ಶ್ರೇಣಿಯವರು; ಅಲ್ಲದೆ ಗ್ರಂಥಕರ್ತರು; ಕವಿಗಳು.

'ಕನ್ನಡ, ಕರ್ನಾಟಕ ಎಂಬ ಹುಚ್ಚು ನಿಮಗೆ ಎಲ್ಲಿ ಹೋದರೂ ಬಿಡುವ ಹಾಗಿಲ್ಲ. ನೀವು ಮಾಡುವ ಹೆಚ್ಚಿನ ಕೆಲಸ, ಉಜ್ವಲವಾದ ಕರ್ನಾ ಟಕದ ಸೇವೆ ಎಂದರೆ ಮಾತು ಮಾತಿಗೆ ಕನ್ನಡ ಕನ್ನಡ ಎಂದು ಬಡಬಡಿ ಸುವದು. ಏನು ಕನ್ನಡವೋ ಏನು ಕರ್ನಾಟಕವೋ!' ರಾಯರು ತಿರಸ್ಕಾರ ವಾಗಿಯೆ ಮಾತನಾಡಿದರು.

ರಾಯರಿಗೆ ಕರ್ನಾಟಕದ ಬಗ್ಗೆ ಇಷ್ಟು ಬೇಸರವುಂಟಾಗಲು ಪ್ರಬಲ ವಾದ ಕಾರಣವೊಂದಿತ್ತು. ಅವರೂ ಕನ್ನಡಿಗರೇ, ಕರ್ನಾಟಕದ ಬಗ್ಗೆ ಅವರಲ್ಲಿಯೂ ಅಭಿಮಾನವು ತುಂಬಿ ತುಳುಕುತ್ತಲಿತ್ತು. ಆ ಅಭಿಮಾನಕ್ಕೆ ತುತ್ತಾಗಿ ಸಂಕಟಪರಂಪರೆಯನ್ನೆ ಮೈಮೇಲೆ ತಂದುಕೊಂಡಿದ್ದರು. ಪರ ಪ್ರಾಂತಗಳಲ್ಲಿ ಸಿನೇಮಾ ವ್ಯವಸಾಯವು ಇಷ್ಟು ಚೆನ್ನಾಗಿ ನಡೆದಿರುವಾಗ ಕರ್ನಾಟಕವು ಮಾತ್ರ ಕೈಕಟ್ಟಿಕೊಂಡು ಕುಳಿತುಕೊಳ್ಳಬೇಕೆ ಎಂದು ಕೆಲವು ಕೆಚ್ಚೆದೆಯ ಕನ್ನಡಿಗರು ಒಂದು ಸಿನೇಮಾ ಕಂಪನಿಯನ್ನು ಸ್ಥಾಪಿಸಿದರು. ಅದರಲ್ಲಿ ಭಾಗವಹಿಸಲು ಪರಪ್ರಾಂತಗಳ ಸಿನೇಮಾ ಕಂಪನಿಗಳಲ್ಲಿ ಕೆಲಸ ಮಾಡಿಕೊಂಡಿರುವ ಕನ್ನಡಿಗರನ್ನೆಲ್ಲ ಆಮಂತ್ರಿಸಿದರು. ರಾಯರು ಆಗ ಕಲಕತ್ತೆಯಲ್ಲಿ ಸಿನೇಮಾ ಕಂಪನಿಯೊಂದರಲ್ಲಿ ಡೈರೆಕ್ಟರರಾಗಿ ಕೆಲಸ ಮಾಡಿ ಕೊಂಡಿದ್ದರು. ರಾಯರಿಗೂ ಆಮಂತ್ರಣ ಬಂದಿತು. ತನ್ನ ಮನೆಗೆ ಬರುವುದಕ್ಕಾಗಿ ತನ್ನವರಿಂದ ಬಂದ ಆಮಂತ್ರಣ. ಮೇಲಾಗಿ ಭವಿಷ್ಯದ

ವಿಷಯವಾಗಿ ಹೇಳ ತೀರದಷ್ಟು ಆಶ್ವಾಸನಗಳು. ರಾಯರು ಮನಸೋತರು; ರಾಜೀನಾಮೆಯನ್ನು ಕೊಟ್ಟರು. ಕನ್ನಡಿಗರ ಕಂಪನಿ ಪ್ರಾರಂಭವಾಯಿತು. ಚಿತ್ರಪಟವು ಪೂರ್ತಿಯಾಗುವ ಮೊದಲೆ ಕಂಪನಿಯೇ ಪೂರ್ತಿಯಾಯಿತು. ಅದು ಏಕೆ ಹೀಗಾಯಿತೆಂಬುದು ಇನ್ನೂ ಎಲ್ಲರಿಗೂ ಒಂದು ಸಮಸ್ಯೆಯಾಗಿಯೆ ಇದೆ. ಅಂತೂ ರಾಯರು ಪರದೇಶಿಯಾದರು. ತಮಗೆ ಅಂಟಿಕೊಂಡಿದ್ದ ದೇಶಾಭಿಮಾನದ ಕೋಳಿಯನ್ನು ತೊಳೆದುಕೊಂಡು ನಿರ್ಮಲರಾದರು. ಕೊನೆಗೆ ನಿರ್ವಾಹವಿಲ್ಲದೆ ಸೇಟರಿಗೆ ಮೊರೆ ಹೊಕ್ಕರು. ಇವರಿಂದ ಕಲಾದರ್ಶ ತಾರೆಗೆ ವಿಶೇಷ ಲಾಭವಾಯಿತೆ ವಿನಃ ಆ ಕಂಪನಿಯಿಂದ ರಾಯರಿಗೆ ಹೆಚ್ಚಿನ ಸೌಕರ್ಯಗಳೊಂದೂ ದೊರೆಯಲಿಲ್ಲ. ಅವರ ಆಶೆ ಆಕಾಂಕ್ಷೆಗಳು ಈಡೇರಲಿಲ್ಲ. ಕಲಕತ್ತೆಯಲ್ಲಿಯ ತಮ್ಮ ದಿನಗಳನ್ನು ನೆನೆನೆನೆದು ಆಗಾಗ ಮರುಗುತ್ತಿದ್ದರು. ಕರ್ನಾಟಕದ ಬಗ್ಗೆ ಕೆರಳುವುದಕ್ಕೆ ರಾಯರಿಗೆ ಸಾಕಷ್ಟು ಕಾರಣಗಳಿವೆಯಷ್ಟೆ ?

‘ ಇದೇನು ರಾಯರೆ ಹೀಗೆ ಮಾತನಾಡಿದರೆ ? ಕರ್ನಾಟಕದ ಅಪಮಾನವೆಂದರೆ ನಮ್ಮ ನಿಮ್ಮ ಅಪಮಾನ ಕರ್ನಾಟಕದ ಕುಂದು ಕೊರತೆಗಳು ಎಂದರೆ ನಮ್ಮ ನಿಮ್ಮ ಮನೆಗಳಲ್ಲಿ ಕಂಡು ಬರುವ ಕುಂದು ಕೊರತೆಗಳು. ನಾವು ಕನ್ನಡಿಗರು, ಕರ್ನಾಟಕವು ನಮ್ಮದು. ಅದರಲ್ಲಿ ಎಷ್ಟೆ ಲೋಪ ದೋಷಗಳಿರಲಿ ಕರ್ನಾಟಕವು ನಮ್ಮದು. ಊರ್ಜಿತಾವಸ್ಥೆಗೆ ಒಯ್ಯುವ ಸಾಹಸವನ್ನು ನಾವು ಮಾಡಲೇಬೇಕು ’ ಶ್ರೀಕಾಂತರು ಸ್ವಾಭಿಮಾನ ಪೂರ್ಣವಾದ ದೃಷ್ಟಿಯಿಂದ ಎಲ್ಲರ ಕಡೆಗೆ ನೋಡುತ್ತ ಎದೆಯುಬ್ಬಿಸಿ ಮಾತನಾಡಿದರು.

ಈ ಸಮಯಕ್ಕೆ ಸರಿಯಾಗಿ ಸೇಟರು ದೊಡ್ಡದಾಗಿ ಆಕಳಿಸಿದರು.

‘ ಆಯಿತು ಸ್ವಾಮಿ, ಕರ್ನಾಟಕವು ನಿಮ್ಮದೇ ಆಗಿರಲಿ, ಅಲ್ಲವೆಂದು ಹೇಳುವವರಾರು ? ’ ಎಂದು ರಾಯರು ಶ್ರೀಕಾಂತರಿಗೆ ಹೇಳಿ ಆ ಪ್ರಸ್ತಾಪವನ್ನು ಅಷ್ಟಕ್ಕೆ ಪೂರ್ತಿಗೊಳಿಸಿ ತಾರಿಣಿದೇವಿಯ ಕಡೆ ಹೊರಳಿ ‘ ದೇವಿಯವರೆ ತಾವು ಹಾಡುವುದಕ್ಕೆ ಜೊತೆಯ ವಾದ್ಯಗಳೇನಾದರೂ ಬೇಕೆ? ’ ಎಂದು ಕೇಳಿದರು.

ಸೂಸಿಯ ಎದೆ ಬಡೆದುಕೊಳ್ಳಲು ಪ್ರಾರಂಭಿಸಿತು. ಶಾಮನ ಕಡೆ ಕರುಣಾದೃಷ್ಟಿಯಿಂದ ನೋಡಿದಳು. ಅವಳ ಗಂಟಲು ಒಣಗಿ ಮಾತ ನಾಡಲು ಕೂಡ ಬಾರದಂತಾಯಿತು. ಇಲ್ಲಿಯ ವರೆಗೆ ಹುಚ್ಚು ಬಡಿದಂತೆ ಸುಮ್ಮನೆ ಕಣ್ಣು ಬಿಡುತ್ತ ಕುಳಿತಿದ್ದಳು. ಅವಳ ಬದಿಯಲ್ಲಿಯೆ ತಂಬೂರಿ, ತಬಲಾ, ಹಾರ್ಮೊನಿಯಂ, ಸಾರಂಗಿ ಮೊದಲಾದ ವಾದ್ಯಗಳೊಡನೆ ವಾದಕರು ಸಿದ್ಧವಾಗಿ ಕುಳಿತಿದ್ದುದನ್ನು ಅವಳು ನೋಡಿರಲೆ ಇಲ್ಲ. ಈಗ ಸೂಸಿಯ ಕೈಕಾಲೇ ಹೋದವು.

'ಜೊತೆಗೆ ವಾದ್ಯಗಳ ಅವಶ್ಯಕತೆ ಇದೆಯೇ?' ಶಾಮ ಕೇಳಿದ.

'ವಾದ್ಯಗಳ ಜೊತೆ ಇದ್ದರೆ ಚೆನ್ನಾಗಿರುತ್ತದೆ' ಶ್ರೀಕಾಂತರು ಉತ್ತರ ಕೊಡುತ್ತ ಸೂಸಿಯ ಕಡೆ ನೋಡಿದರು. ಅವಳೂ ಅವರ ಕಡೆ ನೋಡಿದಳು. ಅವಳ ಮೋರೆಯ ಮೇಲೆ ಹರಡಿಕೊಂಡಿದ್ದ ದೈನ್ಯವು ಅವರ ಹೃದಯವನ್ನು ಕರಗಿಸಿರಬೇಕು. 'ಜೊತೆ ವಾದ್ಯಗಳು ಹಾಡುವವರ ಇಷ್ಟ. ವಾದ್ಯಗಳ ಜೊತೆಗೇ ಹಾಡಬೇಕೆಂದು ನಮ್ಮ ಹಟವಿಲ್ಲ ಅಲ್ಲವೆ ಗಿರಿಧರಪಂತರೆ?' ಎಂದು ಸಂಗೀತ ನಿರ್ದೇಶಕರನ್ನು ತಮ್ಮ ಅಭಿಪ್ರಾಯಕ್ಕೆ ಎಳೆದುಕೊಂಡು ಶ್ರೀಕಾಂತರು ಮಾತನಾಡಿದರು.

'ಆಗಬಹುದು' ಎಂದರು ಗಿರಿಧರಪಂತರು.

ಸೂಸಿಯು ಮೆಲ್ಲಗೆ ಮೇಲಕ್ಕೆದ್ದು ಸೀರೆಯನ್ನು ಸರಿಪಡಿಸಿಕೊಳ್ಳುತ್ತ ವಾದಕರು ಕುಳಿತಲ್ಲಿಗೆ ನಡೆದಳು. ಮನದಲ್ಲಿಯೆ ಶಾಮನಿಗೆ ಸಾವಿರ ಸಲ ಶಪಿಸುತ್ತಲೆ ತಲೆಬಾಗಿಸಿದಳು! ಶಾಮನು ಕೂಡ ತನ್ನ ಬಲವನ್ನೆಲ್ಲ ಸೂಸಿಗೆ ಕೊಟ್ಟು ಬಿಟ್ಟುದಕ್ಕಾಗಿಯೊ ಏನೊ ತೀರ ನಿರ್ವಿಣ್ಣನಾಗಿದ್ದ. ಸೂಸಿ ಅಲ್ಲಿ ಹಾಸಿದ್ದ ರತ್ನಗಂಬಳಿಯ ಮೇಲೆ ಕುಳಿತಳು ಹಾರ್ಮೊನಿಯಂ ಕೈಯಲ್ಲಿ ತೆಗೆದುಕೊಂಡಳು. ಪಟ್ಟಿಯ ಮೇಲೆ ನಡುಗುವ ಬೆರಳುಗಳನ್ನಿಟ್ಟಳು. ಮೆಲ್ಲಗೆ ತಿದಿಯನ್ನು ಒತ್ತಿದಳು. ಹಾರ್ಮೊನಿಯಂ ಶಬ್ದವನ್ನು ಅರಗಳಿಗೆ ಆಲಿಸಿದ ನಂತರ ಸ್ವಲ್ಪ ಧೈರ್ಯ ಬಂದಂತಾಯಿತು. ಆಗ ಮೋರೆಯನ್ನು ಮೇಲಕ್ಕೆತ್ತಿದಳು. ಹಸಿದ ಬೇಟೆಯ ನಾಯಿಗಳಂತೆ ಎಲ್ಲರೂ ತನ್ನನ್ನೇ ನೋಡುತ್ತಲಿದ್ದಾರೆ ಎಂದೆನ್ನಿಸಿತು ಅವಳಿಗೆ. ಗಂಟಲು ಸರಿಯಾಗಲೆಂದು

ಮೆಲ್ಲಗೆ ಕೆಮ್ಮಿದಳು. ಆದರೆ ಅಷ್ಟು ಕೆಮ್ಮು ಸಾಕಾಗಲಿಲ್ಲ. ಸ್ವಲ್ಪ ಗಟ್ಟಿಯಾಗಿ ಕೆಮ್ಮಲು ಅರೆನಿಮಿಷದ ಬಲವನ್ನು ಸಂಗ್ರಹಿಸಿಕೊಳ್ಳಬೇಕಾಯಿತು.

ಕಳ್ಳದನಿಯಲ್ಲಿ ಮೆಲ್ಲಗೆ ಹಾರ್ಮೋನಿಯಂ ಸ್ವರದೊಡನೆ ದನಿಗೂಡಿಸಿದಳು.

ಸೂಸಿಯ ಈ ಸ್ಥಿತಿಯನ್ನು ನೋಡುತ್ತ ದೂರ ಕುಳಿತುಕೊಳ್ಳುವುದು ಶಾಮನಿಂದಾಗಲಿಲ್ಲ. ಅವಳ ಬಳಿಯಲ್ಲಿ ಹೋಗಿ ಕುಳಿತುಕೊಂಡ.

'ಯಾವ ಹಾಡು ಹೇಳುತ್ತೀ?' ಎಂದು ಕೇಳಿದ.

'ಯಾವುದು ಹೇಳಲಿ?' ಎಂದಳು ಸೂಸಿ.

'ಯಾವುದನ್ನಾದರೂ ಹೇಳು. ನಾಟಕದೊಳಗಿನದು, ಸಿನೇಮಾದೊಳಗಿನದು ಅಥವಾ ಯಾವುದಾದರೂ ಒಂದು ದಾಸರ ಪದವನ್ನು ಹೇಳಿಬಿಡು.'

'ಕೃಷ್ಣಮೂರ್ತಿ.... ಹೇಳಲೆ?'

ಉರುಟಣೆಯ ಕಾಲಕ್ಕೆ ಹೇಳಿದ ಪದ್ಯವದು. ಆ ಕಾಲಕ್ಕೆ ಶಾಮನೆ ಆ ಹಾಡನ್ನು ಮನವಾರೆ ಮೆಚ್ಚಿದ್ದನು. ಈಗಲೂ ಅದೇ ಹಾಡು ಹೇಳುವುದು ಸಮಂಜಸವಾಗಬಹುದೇ!

'ಆಯಿತು ಅದನ್ನೆ ಹೇಳಿ ಬಿಡು' ಶಾಮನಂದ.

ಸೂಸಿ ಮತ್ತೊಂದು ಸಲ ಕೆಮ್ಮಿದಳು. ಉಗುಳು ನುಂಗಿ ಗಂಟಲು ಪರಿಪಡಿಸಿಕೊಳ್ಳಲು ಯತ್ನಿಸಿದಳು.

'ಡ್ರಿಂಕ್ ತರಿಸಲೇನು?' ರಾಯರು ಕೇಳಿದರು.

ಸೂಸಿ ಶಾಮನ ಕಡೆ ನೋಡಿದಳು.

'ಸೀರಾದರೆ ಸಾಕು' ಶಾಮ ಗುಯ್‌ಗುಟ್ಟಿದ.

ಅಲ್ಲಿ ನಿಂತ ಆಳಿನ ಕಡೆ ರಾಯರು ಕಣ್ಣು ಹೊರಳಿಸಿದರು.

ಡ್ರಿಂಕ್ ಬಂದವು. ಒಂದು ಗುಟುಕು ಕುಡಿದ ಮೇಲೆ ಸೂಸಿಗೆ ಇದ್ದದರಲ್ಲಿಯೆ ಸಮಾಧಾನವಾಯಿತು. ಹಾಡು ಪ್ರಾರಂಭಿಸಿದಳು. ಸ್ವಭಾವತಃ ಸೂಸಿಯ ಕಂಠದಲ್ಲಿ ಮಾಧುರ್ಯವಿತ್ತು. ಅದು ಜನ್ಮತಃ ಬಂದುದು. ಚಿಕ್ಕ ಪುಟ್ಟ ನಾಟಕಗಳಲ್ಲಿ ಪಾತ್ರ ವಹಿಸುವಾಗ ಹಾರ್ಮೋನಿಯಂ ಜೊತೆಗೆ

ಕೂಡ ಹೇಳಿ ತಕ್ಕಮಟ್ಟಿಗೆ ಅಭ್ಯಾಸವಾದಂತಾಗಿತ್ತು. ಹಾರ್ಮೋನಿಯಮ್ಮಿನ ವಿನಃ ಮಿಕ್ಕ ಎಲ್ಲ ವಾದ್ಯಗಾರರೂ ಕೈ ಕಟ್ಟಿಕೊಂಡು ಕುಳಿತಿದ್ದರು.

ಸೂಸಿಯು ಹಾಡು ಮುಗಿಯಿತು. ಸೂಸಿಯ ಮುಗ್ಧ ಭಾವ, ಸರಳ ಕಂಠ ಎಲ್ಲರನ್ನೂ ಮರುಳುಗೊಳಿಸಿತು. ಎಲ್ಲರೂ ತಲೆ ಹಾಕಿದರು.

'ಭೇಷ್ ಭೇಷ್' ಎಂದರು ಸೇಡಜಿಯವರು.

'Very good' ಎಂದರು ಉಮಾಪತಿರಾಯರು.

'ಚೆನ್ನಾಗಿದೆ' ಎಂದರು ಶ್ರೀಕಾಂತರು.

'ಪರವಾಯಿಲ್ಲ' ಎಂದರು ಗಿರಿಧರಪಂತರು.

ಮಿಕ್ಕವರೂ ಸಂತೋಷವನ್ನು ಸೂಚಿಸಿದರು.

ಸೂಸಿ ಮತ್ತೊಂದು ಹಾಡನ್ನು ಹೇಳಿದಳು. ಎಲ್ಲರಿಗೂ ಮೆಚ್ಚಿಗೆಯಾಯ್ತು. ಇನ್ನೊಂದು ಹೇಳಲು ಆಗ್ರಹ ಪಡಿಸಿದರು. ಇನ್ನೊಂದು ಹಾಡೂ ಆಯಿತು.

ಸೂಸಿ ಹಾರ್ಮೋನಿಯಂ ನಿಲ್ಲಿಸಿದಳು. ಎಲ್ಲರೂ ಚಪ್ಪಾಳೆ ತಟ್ಟಿದರು. ಸೂಸಿ ಸಮಾಧಾನದ ನಗೆಯೊಡನೆ ಶಾಮುನ ಕಡೆ ನೋಡಿದಳು. ಶಾಮುನಿಗೆ ಹಿಡಿಸಲಾರದಷ್ಟು ಸಂತೋಷವಾಗಿತ್ತು.

ಸೂಸಿ ಶಾಮುರು ತಮ್ಮ ಸ್ಥಳದಲ್ಲಿ ಕುಳಿತುಕೊಂಡರು.

'ಬಹಳ ಸಂತೋಷವಾಯಿತು ಶಾಮುರಾವ್, ಇಷ್ಟು ಚೆನ್ನಾಗಿ ಹಾಡುತ್ತಾರೆ ಎಂದು ನಾವು ಭಾವಿಸಿರಲಿಲ್ಲ' ರಾಯರು ಅಂದರು

'ಕಂಠಕ್ಕೆ ಸಂಸ್ಕೃತಿಯಿಲ್ಲದಿದ್ದರೂ ಇಷ್ಟು ಆಕರ್ಷಕವಾಗಿದೆ. ಇನ್ನು ಸ್ವಲ್ಪ ಪರಿಶ್ರಮ ವಹಿಸಿದರೆ ತಾರಿಣಿದೇವಿಯವರು ಉತ್ತಮ ವರ್ಗದ ಗಾಯಕಿಯರಾಗುವುದರಲ್ಲಿ ಎಷ್ಟೂ ಸಂದೇಹವಿಲ್ಲ' ಎಂದರು ಶ್ರೀಕಾಂತರು.

'ಕಂಠವು ಚೆನ್ನಾಗಿದೆ' ಎಂದು ಮಾತಿನಕಿಂತಲೂ ಕತ್ತನ್ನೆ ಹೆಚ್ಚು ಅಲ್ಲಾಡಿಸುತ್ತ ಅಂದರು ಗಿರಿಧರಪಂತರು. ಅವರಿಗೆ ಕನ್ನಡ ಸರಿಯಾಗಿ ಬಾರದಿದ್ದುದು ಒಂದು ದೊಡ್ಡ ತೊಂದರೆಯೆ ಆಗಿತ್ತು.

ಉಪಹಾರವು ಬಂದಿತು. ರಾಯರು ಸಂತೋಷದ ಭರದಲ್ಲಿ ತಮ್ಮ ಬಡಾಯಿಯನ್ನು ಲೆಕ್ಕವಿಲ್ಲದಷ್ಟು ಹೇಳಿಕೊಂಡರು. ಶ್ರೀಕಾಂತರು ತಮ್ಮ

ಕಾದಂಬರಿಯಲ್ಲಿಯ ಕೆಲವು ಸನ್ನಿವೇಶಗಳನ್ನೆತ್ತಿಕೊಂಡು ಮನವಾರೆ ವರ್ಣನ ಮಾಡಿದರು. ಸೇಟಜಿಯವರು ತಮ್ಮ ಗುಂಗಿನಲ್ಲಿಯೆ ಇದ್ದರು. ಪ್ರಾಯಶಃ ಈ ಹೊಸ ನಟಿಗೆ ಎಷ್ಟು ಪಗಾರವನ್ನು ಗೊತ್ತುಮಾಡಬೇಕು ಎಂದು ಲೆಕ್ಕ ಹಾಕುತ್ತಿದ್ದರೇನೊ !

ಉಪಹಾರವಾದ ಬಳಿಕ ಸೇಟಜಿಯವರು 'ನಾನು ಬರುತ್ತೇನೆ' ಎನ್ನುತ್ತ ಮೇಲಕ್ಕೆದ್ದರು. ಎಲ್ಲರಿಗೂ ನಮಸ್ಕರಿಸಿ, ಅವರ ನಮಸ್ಕಾರಗಳನ್ನು ಗಂಭೀರವಾಗಿ ಸ್ವೀಕರಿಸುತ್ತ ಸೇಟರು ಒಳಗೆ ಹೊರಟರು. ಶ್ರೀಕಾಂತ ಹಾಗೂ ಗಿರಿಧರಪಂತ ಮೊದಲಾದವರೂ ನಮಸ್ಕರಿಸುತ್ತ ಸೇಟರನ್ನು ಹಿಂಬಾಲಿಸಿದರು.

ರಾಯರಿಗೆ ಹೇಳಲಾರದಷ್ಟು ಸಂತೋಷವಾಗಿದ್ದಿತು. 'ನಿಜವಾಗಿಯೂ ನೀವು ಇಲ್ಲಿಗೆ ಬಂದದ್ದು ಬಹಳ ಒಳ್ಳೆಯದಾಯಿತು. ತಾರಿಣಿದೇವಿಯವರನ್ನು ಕಂಪನಿಯಲ್ಲಿ ತೆಗೆದುಕೊಳ್ಳಲು ಎಲ್ಲರ ಸಮ್ಮತಿಯೂ ಇದ್ದಂತಿದೆ. ಸೇಟಜಿಯವರನ್ನು ಈಗ ಭೆಟ್ಟಿಯಾಗಿ ಬಂದು ತಮಗೆ ಎಲ್ಲ ವಿಷಯವನ್ನು ತಿಳಿಸುತ್ತೇವೆ' ಎಂದರು ರಾಯರು.

'ನಮ್ಮ ಮೇಲೆ ತಮ್ಮದು ವಿಶೇಷ ಉಪಕಾರವಾಯಿತು. ಎಲ್ಲರಿಗೂ ನಮ್ಮ ಪರಿಚಯ ಮಾಡಿಕೊಟ್ಟಿರಿ' ಶಾಮನಂದ.

'ಸೇಟರು ಬಹಳ ದೊಡ್ಡ ಮನಸ್ಸಿನವರು. ಅವರು ಹೇಳಿದ್ದಕ್ಕೆ ಮರುಮಾತನಾಡದೆ ಒಪ್ಪಿಬಿಡಿರಿ. ಎಲ್ಲವೂ ತಾನಾಗಿಯೆ ಸರಿಹೋಗುವುದು. ಅವರು ಮನಸ್ಸುಮಾಡಿದರೆ ನಿಮ್ಮನ್ನು ಐಶ್ವರ್ಯದ ಶಿಖರಕ್ಕೇರಿಸಬಹುದು. ಗುಟ್ಟಿನ ಮಾತೆಂದರೆ ಎಲ್ಲ ನಟ ನಟಿಯರಿಗೂ ಬೆಲೆಯನ್ನು ತಂದು ಕೊಡುವವನು ನಾನು. ತಾರಿಣಿದೇವಿಯು ಒಳ್ಳೆ ನಟಿಯಾಗಬಲ್ಲಳು ಎಂದು ನನಗೆ ಆತ್ಮವಿಶ್ವಾಸವಿದೆ. ಸಾಕಲ್ಲವೆ ? ಇದಕ್ಕೆ ಹೆಚ್ಚಾಗಿ ನಾನು ಏನು ಹೇಳಲಿ ? ನಿಮ್ಮ ಚಿತ್ರಕಲೆಯ ವಿಷಯವಾಗಿಯೂ ಅವರಿಗೆ ಹೇಳಿದ್ದೇನೆ.' ಎಂದರು ರಾಯರು.

'ಮುಖ್ಯ ನೀವು ನಮ್ಮ ಹಿತೈಷಿಗಳು ಎಂದು ಸಂಪೂರ್ಣವಾಗಿ ನಂಬಿದ್ದೇನೆ. ಯಾವ ಬಗೆಯ ಎಡರು ತೊಡರುಗಳೂ ಬಾರದಂತೆ ನೋಡಿಕೊಳ್ಳುವ ಭಾರವು ನಿಮ್ಮ ಮೇಲೆಯೆ ಇದೆ. ಈಗಲೆ ಇನ್ನೊಂದು ವಿಷಯ

ವನ್ನು ತಮಗೆ ಅರಿಕೆಮಾಡಿಕೊಳ್ಳಬೇಕೆನ್ನುತ್ತೇನೆ. ಈ ವ್ಯವಸಾಯವು ನಮಗೆ ತೀರ ಹೊಸದು. ಇಲ್ಲಿಯ ರೀತಿ ನೀತಿಗಳು, ನಡೆ ನುಡಿಗಳು ಏನೂ ನಮಗೆ ಗೊತ್ತಿಲ್ಲ. ಇವಳಂತೂ ಈ ವಿಷಯದಲ್ಲಿ ತೀರ ಅಜ್ಞಾನಿಯಾಗಿದ್ದಾಳೆ ಏನು ತಪ್ಪು ತಡೆಗಳಾದರೂ ತಾವು ಕ್ಷಮಿಸಬೇಕು. ಮನೆಯ ಹೊಸ್ತಿಲವನ್ನೇ ದಾಟಿದವಳಲ್ಲ. ನನ್ನ ಒತ್ತಾಯಕ್ಕಾಗಿ ಸಮ್ಮತಿಸಿದ್ದಾಳೆ. ಕಲಾ ಸೇವೆಯನ್ನು ಮಾಡಬೇಕು; ನಮ್ಮ ಚರಿತಾರ್ಥವೂ ಸಾಗಬೇಕು ಎಂಬ ಉದ್ದೇಶದಿಂದ ಈ ಮಾರ್ಗದಲ್ಲಿ ಕಾಲಿಡಬೇಕೆಂದಿದ್ದೇವೆ. ನಮ್ಮ ಮಾನ, ಮರ್ಯಾದೆ ಮೊದಲಾದವುಗಳನ್ನು, ನಮ್ಮಲ್ಲಿ ಅಲ್ಪ ಸ್ವಲ್ಪವಾಗಿದ್ದ ವಿದ್ಯೆ, ಕಲೆ ಮೊದಲಾದವುಗಳನ್ನು, ನಿಮ್ಮ ಕೈಯಲ್ಲಿಟ್ಟಿದ್ದೇವೆ....' ಶಾಮನು ಹೇಳಿಯೇ ಹೇಳಿದ. ಇನ್ನೂ ಏನೇನನ್ನೊ ಹೇಳುವವನಿದ್ದ. ಆದರೆ ನಡುವೆ ರಾಯರು 'ಇದನ್ನೆಲ್ಲ ನೀವು ನನಗೆ ಹೇಳಬೇಕೆ?' ಎಂದು ಶಾಮನ ಮಾತನ್ನು ಪೂರ್ತಿಗೊಳಿಸಿದರು.

ಇಷ್ಟರಲ್ಲಿಯೆ ಆಳೊಬ್ಬನು ಬಂದು 'ಸೇಟಜಿಯವರು ಕರೆಯುತ್ತಾರೆ ಎಂದು ರಾಯರಿಗೆ ಹೇಳಿದ.

'ನಾನು ಈಗ ಬರುತ್ತೇನೆ' ಎಂದು ಶಾಮನಿಗೆ ಹೇಳಿ ರಾಯರು ಒಳಗೆ ನಡೆದರು.

ಆ ಭವ್ಯವಾದ ಹಾಲಿನಲ್ಲಿ ಶಾಮ ಸೂಸಿಯರಿಬ್ಬರೆ ಕುಳಿತಿದ್ದರು. ಒಬ್ಬರನ್ನೊಬ್ಬರು ನೋಡಿದರು; ಹಾಗೆಯೆ ಹಾಲಿನ ತುಂಬ ಕಣ್ಣು ಹೊರಳಿಸಿದರು. ಶಾಮನ ಮೋರೆಯ ಮೇಲೆ ಮುಗುಳುನಗೆ ಮೂಡಿತು. ತನ್ನ ಮುಗಳು ನಗೆಯ ಛಾಯೆಯನ್ನು ಸೂಸಿಯ ತುಟಿಗಳ ಮೇಲೆ ಮೂಡಿಸಬೇಕು ಎಂದು ಅವಳ ಕಡೆ ಬಾಗಿದ, ಕೈಯನ್ನು ಚಾಚಿದ. ಆದರೆ ಸೂಸಿಯ ನಿರಾಶಾ ನೋಟವು ಅವನನ್ನು ಹತಾಶನನ್ನಾಗಿ ಮಾಡಿತು. ಮುಗಳು ನಗೆಯು ಮಾಯವಾಗಿ ಉಸಿರಿನ ರೂಪದಲ್ಲಿ ಹೊರಬಿದ್ದಿತು.

ಅನಂತರ ಶಾಮನಿಗೆ ಸೂಸಿಯ ಕಡೆ ಕಣ್ಣು ಹೊರಳಿಸುವ ಧೈರ್ಯವಾಗಲಿಲ್ಲ. ಬದಿಯಲ್ಲಿಯೆ ಮೇಜಿನ ಮೇಲೆ ಬಿದ್ದಿದ್ದ ಒಂದು ಪತ್ರಿಕೆಯಲ್ಲಿಯ ಚಿತ್ರಗಳನ್ನು ನೋಡುತ್ತ ಕುಳಿತುಕೊಂಡ.

ಕೆಲವು ನಿಮಿಷಗಳ ನಂತರ ರಾಯರು ಒಂದು ಕಾಗದವನ್ನು ತೆಗೆದು ಕೊಂಡು ಅಲ್ಲಿಗೆ ಬಂದರು

'ಇಲ್ಲಿ ನೋಡಿರಿ ಶಾಮುರಾಯರೆ! ನಾನು ನಿಮಗೆ ಮೊದಲಿಗೇ ಕೆಲವು ಮಾತುಗಳನ್ನು ಹೇಳುತ್ತೇನೆ. ಸೇಟಜಿಯವರಿಗೆ ಸಂತೋಷವಾಗಿದೆ ಅಂತೆಯೆ ಈ ಕರಾರು ಪತ್ರವನ್ನು ಸಿದ್ಧಪಡಿಸಿ ನನ್ನ ಕಡೆ ಕೊಟ್ಟಿದ್ದಾರೆ. ನನ್ನ ಅನುಭವದ ಮೇರೆಗೆ ಅವರು ಇಷ್ಟು ಸೌಕರ್ಯಗಳನ್ನು ಯಾರಿಗೂ ಕೊಟ್ಟಿರಲಿಲ್ಲ. ನಮ್ಮ ಕಂಪನಿಯನ್ನು ಸೇರಿದ ಕುಲೀನ ಸ್ತ್ರೀಯರಲ್ಲಿ ತಾರಿಣಿ ದೇವಿಯವರೇ ಮೊದಲಿಗರು ಎಂದು ಈ ಅನುಕೂಲತೆಗಳನ್ನೆಲ್ಲ ಕಲ್ಪಿಸಿ ಕೊಟ್ಟಿದ್ದರೂ ಕೊಟ್ಟಿರಬಹುದು ಅಂತೂ ನಿಮ್ಮ ದೈವ ತೆರೆದಿದೆ ಈ ಸಂಧಿಯನ್ನು ಮಾತ್ರ ಹೋಗಗೊಡಬೇಡಿರಿ. ನಿಮ್ಮಿಬ್ಬರನ್ನೂ ನಿಯಮಿಸಿ ಕೊಳ್ಳುವ ಏರ್ಪಾಟುಮಾಡಿದೆ. ತಾರಿಣಿದೇವಿಯವರಿಗೆ ಪ್ರತಿ ತಿಂಗಳಿಗೆ ೩೦೦ ರೂಪಾಯಿ ನಿಮಗೆ ತಿಂಗಳಿಗೆ ಸಧ್ಯಕ್ಕೆ ೧೦೦. ಈ ಚಿತ್ರವಾದನಂತರ ವೇತನದ ವಿಷಯದಲ್ಲಿ ಪುನಃ ವಿಚಾರಮಾಡೋಣ' ರಾಯರು ನಿರರ್ಗಳ ವಾಗಿ ಮಾತನಾಡಿದರು.

ಶಾಮನಿಗೆ ಏನು ಹೇಳುವುದಕ್ಕೂ ತಿಳಿಯಲಿಲ್ಲ. ಸೂಸಿಯ ಕಡೆ ನೋಡಿದ. ಅವಳು ನೆಲವನ್ನು ನೋಡುತ್ತಲಿದ್ದಳು.

'ಸೇಟಜಿಯವರು ಸಂತೋಷದಲ್ಲಿರುವಾಗಲೆ ಕೆಲಸವನ್ನು ಪೂರೈಸಿ ಬಿಡಬೇಕು. ನಿಮ್ಮ ಈಗಿನ ಸ್ಥಿತಿಗೆ ಇದಕ್ಕೂ ಹೆಚ್ಚು ವೇತನವು ಎಲ್ಲಿಯೂ ದೊರೆಯಲಾರದು ಎಂದು ಧಾರಾಳವಾಗಿ ಹೇಳುತ್ತೇನೆ. ಮತ್ತೆ ಈ ಕಾಲಂ ನೋಡಿರಿ — 'ತಾರಿಣಿದೇವಿಯವರ ಮಾನಮರ್ಯಾದೆಗೆ ಕುಂದು ಬಾರದಂತೆ ಎಲ್ಲ ಬಗೆಯಿಂದಲೂ ಎಚ್ಚರಿಕೆಯನ್ನು ತೆಗೆದುಕೊಳ್ಳಲಾಗು ವುದು' ಎಂದು ನಾನೇ ಪ್ರತ್ಯೇಕವಾಗಿ ಬರೆಯಿಸಿದ್ದೇನೆ. ಇನ್ನೂ ನಿಮ್ಮ ಸಂದೇಹಗಳೇನಾದರೂ ಇದ್ದರೆ ಹೇಳಿರಿ.'

'ನಾಳೆ ನಿಮಗೆ ವಿಚಾರಮಾಡಿ ತಿಳಿಸಿದರೆ....' ಶಾಮನು ಅನುಮಾನಿ ಸುತ್ತ ಹೇಳಿದ.

' ನನ್ನ ದೇನೂ ಅಭ್ಯಂತರವಿಲ್ಲ. ಆದರೆ ಇಷ್ಟೆ, ಕೈಗೆ ಬಂದುದನ್ನು ಬಿಡಬೇಡಿ. ಕೈಗೆ ಸಿಕ್ಕಿರುವಾಗಲೆ ಅದನ್ನು ತೆಗೆದುಕೊಂಡು ಬಿಡಬೇಕು. ನಿಮಗೆ ಸಂದೇಹಗಳೇನಾದರೂ ಇದ್ದರೆ ಹೇಳಿರಿ, ಅವುಗಳನ್ನು ನಿವಾರಿಸ ಬಹುದು ' ಕೊನೆಯ ಮಾತನ್ನು ಹೇಳುವಾಗ ಶಾಮನಕಿಂತಲೂ ರಾಯರು ಸೂಸಿಯನ್ನೇ ನೋಡುತ್ತಿದ್ದರು.

' ಅಂತಹ ಸಂದೇಹಗಳೇನು ಇಲ್ಲ ' ಶಾಮನಂದ.

' ಸಿನೇಮಾದಲ್ಲಿ ಪಾತ್ರವಹಿಸಲು ತಾರಿಣಿದೇವಿಯವರು ಸಿದ್ಧರಿರುವ ರಷ್ಟೇ ? '

ಶಾಮನ ಸಂದೇಹವನ್ನೇ ರಾಯರು ಎತ್ತಿಕೊಂಡು ಆಡಿ ಬಿಟ್ಟರು. ಈ ಸಂದೇಹವಿದ್ದರೆ ಇಲ್ಲಿಯ ವರೆಗೆ ಬರುವ ಶ್ರಮವನ್ನಾದರೂ ಏಕೆ ವಹಿಸಬೇಕಿತ್ತು ? ರಾಯರು ಸ್ವಲ್ಪ ಬೇಸರದಿಂದಲೆ ಈ ರೀತಿ ಕೇಳಿರಬೇಕು ಎಂದು ಶಾಮನು ಭಾವಿಸಿಕೊಂಡ.

' ಹಾಗಿದ್ದರೆ ಇಲ್ಲಿಗೆ ಬರುವಕಾರಣವೇ ಇರಲಿಲ್ಲ ' ಶಾಮನು ಧೈರ್ಯವಾಗಿ ಹೇಳಿಬಿಟ್ಟ.

' ಸರಿ ಹಾಗಿದ್ದರೆ ಯೋಚನೆಯೇನು ? '

ಸೂಸಿಯನ್ನು ವಿಚಾರಿಸಿ ಮಾತು ಕೊಡಬೇಕು ಎಂಬುದೇ ಶಾಮನ ಮನೀಷೆ. ಈ ಬಗೆಯ ಕರಾರು ಪತ್ರಕ್ಕೆ ಒಪ್ಪಿದರೆ ಪ್ರಮಾದವಿಲ್ಲ, ಸೂಸಿಯು ಸಮ್ಮತಿಸುವಳು, ಸುಮ್ಮ ಸುಮ್ಮನೆ ಮುಂದೆ ಹಾಕುವುದು ಬೇಡ ಎಂದು ಮತ್ತೊಂದು ವಿಚಾರ, ಸೂಸಿಯನ್ನು ನೋಡಿದ. ಅವಳಿನ್ನು ನೆಲವನ್ನೇ ದಿಟ್ಟಿಸುತ್ತಿದ್ದಳು. ಅವಳ ಮನಸ್ಸಿನಲ್ಲಿ ಏನು ನಡೆದಿದ್ದಿತೊ ಯಾರು ಬಲ್ಲರು ?

ಶಾಮ ಕರಾರು ಪತ್ರವನ್ನು ಕೈಯಲ್ಲಿ ತೆಗೆದುಕೊಂಡು ಓದಿದ. ಸಹಿ ಮಾಡಿದ ತಾರೀಖಿನಿಂದಲೆ ವೇತನವು ಪ್ರಾರಂಭವಾಗುವುದು. ಒಂದುವಾರ ದೊಳಗಾಗಿ ಕಂಪನಿ ಮನೆಯಲ್ಲಿಯೆ ಬಂದಿರಬೇಕು. ಒಂದು ತಿಂಗಳಿಗೆ ಇಬ್ಬರಿಗೂ ಕೂಡಿ ನಾಲ್ಕುನೂರು ರೂಪಾಯಿಗಳು ! ಊಟ ವಸತಿಯ ವೆಚ್ಚವೆಲ್ಲ ಕಂಪನಿಯದೆ ! ಒಂದು ದಿನಕ್ಕೆ ಸುಮಾರು ೧೫ ರೂಪಾಯಿಗಳು!

ಮರ್ಯಾದೆಯಿಂದ ನಡೆಯಿಸಿಕೊಳ್ಳುವ ಬಗ್ಗೆ ಸಂಪೂರ್ಣ ಆಶ್ವಾಸನವಿದೆ. ಇನ್ನೇನು ಬೇಕು?'

ಶಾಮು ಮೆಲ್ಲಗೆ ಸೂಸಿಯ ಎದುರಿಗೆ ಆ ಕಾಗದವನ್ನು ಹಿಡಿದ.

'ನೋಡಿದೆಯಲ್ಲವೆ?'

ಸೂಸಿ ಶಾಮನ ಮೋರೆ ನೋಡಿದಳು.

'ಆಗಬಹುದಲ್ಲವೆ?'

ಸೂಸಿ ಶಾಮನನ್ನೇ ನೋಡುತ್ತಿದ್ದಳು.

ಫೌಂಟನ್‌ಪೆನ್ನು ಸೂಸಿಯ ಕೈಯಲ್ಲಿ ಕೊಡುತ್ತ 'ಇಲ್ಲಿ' ಎಂದ.

ಸೂಸಿ ಸಹಿ ಮಾಡಿದಳು. ಆಗಲೂ ಶಾಮನನ್ನೇ ನೋಡುತ್ತಲಿದ್ದಳು. ಆ ನೋಟದಲ್ಲಿ ಎಷ್ಟೊಂದು ಅರ್ಥವು ಅಡಕವಾಗಿತ್ತು!

ಅಂತೂ ಒಮ್ಮೆ ತನ್ನ ಜನ್ಮದಲ್ಲಿ ಸಾಲಗಾರರ ಪೀಡೆಯಿಂದ ಶಾಮು ಪಾರಾದ. ಕಂಪನಿಯವರಿಂದ ಮುಂಗಡವಾಗಿ ತಂದ ಹಣದಿಂದ ಎಲ್ಲರ ಸಾಲಗಳನ್ನು ತೀರಿಸಿದ. ಆ ಒಂದು ವಾರ ಅವನಿಗೆ ಎಷ್ಟೂ ಬಿಡುವಿರಲಿಲ್ಲ. ಮನೆಯಲ್ಲಿ ಕುಳಿತುಕೊಂಡು ಸೂಸಿಯೊಡನೆ ಮನಬಿಚ್ಚಿ ಎರಡು ಮಾತ ನಾಡುವುದಕ್ಕೂ ಅವನಿಗೆ ಅವಕಾಶವಿರಲಿಲ್ಲ.

ಸೂಸಿಗೆ ಎಲ್ಲವೂ ಏನೋ ಒಂದು ವಿಚಿತ್ರವಾಗಿಯೆ ತೋರುತ್ತಲಿತ್ತು. ಏನಾದರೂ ಕೆಲಸ ಮಾಡುತ್ತಿರುವಾಗ ಅರ್ಧಕ್ಕೇ ಕೆಲಸವನ್ನು ನಿಲ್ಲಿಸಿಬಿಟ್ಟು ನೆಲವನ್ನೆ ದಿಟ್ಟಿಸಿ ನೋಡುತ್ತ ನಿಂತು ಬಿಡುತ್ತಿದ್ದಳು. ಒಂದರ ಹಿಂದೊಂದು ವಿಚಾರಗಳು. ಅವುಗಳಿಗೆ ತುದಿಯಿಲ್ಲ ಮೊದಲಿಲ್ಲ.

'ಸಿನೇಮಾ ನಟಿ' 'ಸಿನೇಮಾ ನಟಿ' ಎಂದು ತನ್ನಲ್ಲಿಯೆ ಅಂದು ಕೊಳ್ಳುವಳು. ಎಲ್ಲರೆದುರಿನಲ್ಲಿ ಹಾಡು ಹೇಳಿದ್ದು, ಮೈ ಬೆವೆತದ್ದು, ಗಂಟಲು ಆರಿದ್ದು, ದನಿ ನಡುಗಿದ್ದು, ಎಲ್ಲವನ್ನು ಪುನಃ ಪುನಃ ಜ್ಞಾಪಿಸಿ ಕೊಳ್ಳುವಳು. ಇನ್ನು ಅದೇ ತನ್ನ ಪ್ರತಿನಿತ್ಯದ ಜೀವನವಾಗಬೇಕು ಎಂಬ ನೆನಪು ಬಂದಾಗ ಅವಳ ಮೈಮೇಲೆ ಮುಳ್ಳು ಬರುವವು; ಕಾತರಳಾಗಿ ಬೆದರಿದ ಎರಳೆಯಂತೆ ಅತ್ತಿತ್ತ ನೋಡುವಳು. ತನ್ನ ವಿಚಾರಗಳಿಗೆ, ತನ್ನ ಭಾವನೆಗಳಿಗೆ ತಾನೆ ಉದ್ವೇಗಗೊಳ್ಳುವಳು ಸುದೀರ್ಘವಾದ ಉಸಿರೊಂ ದನ್ನು ಬಿಟ್ಟು ಮತ್ತೆ ಕೆಲಸವನ್ನು ಮುಂದುವರಿಸುವಳು.

'ಹಾಡು ಹೇಳುವಾಗ ಅವರೆಲ್ಲರೂ ನನ್ನನ್ನು ಹೇಗೆ ನೋಡುತ್ತ ಲಿದ್ದರು? ಅಬ್ಬಾ ಎಂತಹ ನೋಟವದು! ಅವರು ಏಕೆ ನನ್ನನ್ನು ಹಾಗೆ ನೋಡುತ್ತಲಿದ್ದರು? ಆ ರಾಯರು ನನ್ನನ್ನು ನೋಡಿ ಮೇಲಿಂದ ಮೇಲೆ ನಗುತ್ತಿದ್ದರು. ಈ ವರೆಗೆ ಯಾರಿಗೂ ತೋರಿಸದ ರಿಯಾಯತಿಯನ್ನು

ನಮಗೆ ತೋರಿಸಿದ್ದಾರಂತೆ. ಅದೇಕೆ? ನಮ್ಮ ಮೇಲೆ ಅವರು ಇಷ್ಟು ದಯೆ ತೋರಲು ಕಾರಣವೇನು? ಆ ಸೇಟರು, ಆ ಕಾದಂಬರಿಕಾರರು, ಎಲ್ಲರೂ ಒಂದೊಂದು ರೀತಿಯಾಗಿಯೆ ಇದ್ದಾರೆ. ನಮ್ಮ ವಿಷಯವಾಗಿ ಅವರು ಏನು ತಿಳಿದುಕೊಂಡಿದ್ದಾರೆಯೊ ಯಾರು ಬಲ್ಲರು!

'ಎಷ್ಟು ಜನ ಗಂಡಸರು! ಅವರ ಸ್ವಭಾವವೇನೊ, ರೀತಿಯೇನೊ ನೀತಿಯೇನೊ! ಅವರ ಸಂಗಡ ಹೇಗೆ ವರ್ತಿಸಬೇಕೊ! ಬಗುಪಿಸಿಂದಿದ್ದರೆ ನನ್ನನ್ನು ಕಾಣುತ್ತಲೆ ಎಷ್ಟು ಸೊಕ್ಕಿನವಳು ಎಂದು ಮೂಗು ಮುರಿಯು ವರೊ! ಸಂತೋಷವಾಗಿದ್ದರೆ ಏನು ಭಾವಿಸುವರೋ ಏನೊ! ಪ್ರಮಾದವು ಬೇರೆ ಆಗಲಿಕ್ಕಿಲ್ಲವಷ್ಟೆ? ಎಲ್ಲರ ಸಂಗಡಲೂ ಸಂತೋಷವಾಗಿರಬೇಕೆಂದೇ ಇವರು ಹೇಳುತ್ತಲಿದ್ದಾರೆ. ಸಂತೋಷವಾಗಿರಬೇಕು. ನಗಬೇಕು, ಕಲೆಯ ಬೇಕು. ಎಲ್ಲರ ಸಂಗಡಲೂ ಸಲಿಗೆಯಿಂದಿರಬೇಕು. ಅವರು ಆಡಿದ ಮಾತುಗಳಲ್ಲಿ ಹಾಸ್ಯವಿರದಿದ್ದರೂ ಮುಗುಳು ನಗೆ ನಗುತ್ತಲಿರಬೇಕು ಅವರನ್ನು ಹೊಗಳಬೇಕು. ಅವರ ಮನವನ್ನು ಹರ್ಷವಾಗಿಡಬೇಕು.

'ಇದು ಹೇಗೆ ನನ್ನಿಂದ ಸಾಧ್ಯ? ಬೆಳಗಿನಿಂದ ಸಂಜೆಯವರೆಗೆ ಬಣ್ಣ ಬಳಿದುಕೊಂಡು ರಣಗುಟ್ಟುವ ಬಿಸಿಲಿನಲ್ಲಿ ಕಣ್ಣು ಕುಕ್ಕಿಸುವ ರಿಫ್ಲೆಕ್ಟರುಗಳ (reflectors) ಹೊಳಪಿನಲ್ಲಿ ಕುದಿಯುತ್ತಿರಬೇಕು. ನಿಜವಾಗಿಯೂ ಇದು ನರಕಯಾತನೆ.

'ಅವರಿಗಾಗಿ ನಾನು ಯಾವ ಕೆಲಸವನ್ನಾದರೂ ಮಾಡಲು ಸಿದ್ಧಳಾಗಿದ್ದೇನೆ. ಆದರೆ ನನಗಾಗಿ ಇಂತಹ ಕೆಲಸವನ್ನು ಅವರು ಹುಡುಕ ಬಾರದಿತ್ತು. ಇಲ್ಲಿ ಮನಕ್ಕೆ, ಮೈಗೆ ಶಾಂತಿಸುಖಗಳು ದೊರೆಯಲಾರವು.

'ಈ ಎಲ್ಲ ವಿಷಯಗಳನ್ನು ನಾನು ಅವರಿಗೆ ಹೇಗೆ ಹೇಳಲಿ? ತಮ್ಮ ಸಂತೋಷದಲ್ಲಿಯೆ ಅವರು ಮುಳುಗಿದ್ದಾರೆ. ಇಂದಿನಿಂದ ನಮ್ಮ ಜೀವನ ದಲ್ಲಿ ಕ್ರಾಂತಿಯಾಯಿತು—ಸೌಖ್ಯದ ಬೆಳಕು ಬೆಳಗಿತು ಎಂದು ಭಾವಿಸುತ್ತ ಲಿದ್ದಾರೆ. ನಮ್ಮ ಕಷ್ಟಕಾಲವು ಕೊನೆಗಂಡಿತು ಎಂದು ಹಿಗ್ಗುತ್ತಲಿದ್ದಾರೆ. ಅವರಿಗೆ ನನ್ನ ಈ ಮನೋಗತವು ತಿಳಿವರೆ?'

ಶಾಮಸು ಹೊಸತಾಗಿ ತಂದ ಸೀರೆ ಕುಪ್ಪುಸಗಳ ಕಡೆಗೆ ಅವಳ ಲಕ್ಷ್ಯವು ಹೋಯಿತು. ಎಲ್ಲವೂ ಬೆಲೆಬಾಳುವ ಸಾಮಾನುಗಳು. ಒಳ್ಳೇ ಮುತ್ತಿನ ಬೆಂಡವಾಲೆಗಳನ್ನೂ ಮಾಡಿಸಿದ್ದಾನೆ. ಬೆಂಡವಾಲೆಗೆ ಮೊದಲಿಗ ಸುತ್ತಿದ್ದ ಕಲ್ಚರಿಯ ಮುತ್ತುಗಳನ್ನು ಕಲ್ಲಿನ ಮೇಲಿಟ್ಟು ಪುಡಿ ಪುಡಿಯಾಗಿ ಮಾಡಿ ನಮ್ಮ ಕಷ್ಟದ ದಿನಗಳೂ ಇನ್ನು ಇದೇ ರೀತಿಯಲ್ಲಿ ಪುಡಿಯಾದವು ಎಂದು ಹೇಳಿದ್ದ. ಕೊರಳಲ್ಲಿ ಹಾಕಿಕೊಳ್ಳಲು ಬಂಗಾರದ ಗುಂಡಿನ ಸರ ವೊಂದನ್ನು ಮಾಡಿಸಿ ತಂದಿದ್ದ. ಒಳ್ಳೇ ಚಪ್ಪಲು. ಮಾಟದ ಬ್ಯಾಗು, ಹಾಸಿಗೆ, ಇತರ ಬೇರೆ ಸಾಮಾನುಗಳು ಎಲ್ಲವನ್ನು ಹೊಸದಾಗಿ ಕೊಂಡು ತಂದಿದ್ದಾನೆ. ಸೂಸಿಗಾಗಿ ಯಾವ ಸಾಮಾನುಗಳನ್ನು ಕೊಂಡು ತಂದರೂ ಅವನಿಗೆ ತೃಪ್ತಿಯಿಲ್ಲ. ಮನೆಗೆ ಬರುವಾಗ ಏನಾದರೊಂದು ಹೊಸ ವಸ್ತು ವನ್ನು ಅವಳಿಗಾಗಿ ಕೈಯಲ್ಲಿ ತೆಗೆದುಕೊಂಡೇ ಬರುತ್ತಿದ್ದ.

ಇನ್ನು ಸೂಸಿಯ ಕೀರ್ತಿಜ್ಯೋತಿಯು ಜಗತ್ತನ್ನು ವ್ಯಾಪಿಸುವುದು. ನನ್ನ ಮುದ್ದು ಕೋಗಿಲೆಯ ಮಧುರ ಕಂಠಕ್ಕೆ ಪ್ರಪಂಚವೆ ಮೋಹಿಸುವುದು. ಅವಳ ರೂಪು ಎಲ್ಲರ ಹೃದಯವನ್ನು ಸೂರೆಗೊಳ್ಳುವುದು. ನನ್ನ ಹೃದ ಯೇಶ್ವರಿಯು, ನನ್ನ ಹೃದಯದಧಿದೇವತೆಯು ಜಗನ್ಮೋಹಿನಿ ಎಂದು ಕೀರ್ತಿ ಪಡೆಯುವಳು. ನಾನು ಧನ್ಯನಾದೆ ಎಂದು ಅನೇಕ ಸಲ ಸೂಸಿಯ ಎದುರಿನಲ್ಲಿ ಹೇಳುತ್ತಲಿದ್ದ.

ಅಲ್ಲಿಯೆ ಗೋಡೆಗೆ ತಗಲು ಹಾಕಿದ್ದ ಕನ್ನಡಿಯೊಂದನ್ನು ಸೂಸಿಯು ಕೈಯಲ್ಲಿ ತೆಗೆದುಕೊಂಡಳು. ಅದರಲ್ಲಿ ತನ್ನ ಮೋರೆಯನ್ನು ನೋಡಿ ಕೊಂಡಳು. ಈ ಕಣ್ಣುಗಳು, ಈ ಗಲ್ಲಗಳು, ಈ ತುಟಿಗಳು, ಎಂದು ಅವು ಗಳನ್ನು ಮುಟ್ಟಿ ಮುಟ್ಟಿ ನೋಡಿಕೊಂಡಳು. ಇವುಗಳಲ್ಲಿ ಅಂತಹ ಸೌಂದರ್ಯವೇನಿದೆ?

'ನಾನು ಸುಂದರಳೆ? ಹೀಗೆ ಯಾರು ಹೇಳುವರು? ಅವರು ಹೇಳು ವರು. ನನ್ನಕಿಂತಲೂ ಸಾವಿರ ಪಾಲು ಸುಂದರರಾಗಿರುವ ಅನೇಕ ಜನರನು ನಾನೆ ಕಣ್ಣಾರೆ ಕಂಡಿದ್ದೇನೆ. ನಾನು ಎಂದರೆ ಇವರಿಗೊಂದು ಹುಚ್ಚು ಇಷ್ಟೆ. ಬಾಯ್ತುಂಬ ಹೊಗಳುತ್ತಾರೆ. ಯಾವಾಗಲಾದರೂ ನನ್ನನ್ನು

ಅಟ್ಟಕ್ಕೇರಿಸಿ ಮಾತನಾಡುವುದು ಅವರ ಸ್ವಭಾವವಾಗಿದೆ. ಅದು ನನ್ನ ಮುಖಸ್ತುತಿ. ನನ್ನನ್ನು ಸಂತೋಷದಿಂದಿಡುವ ಸಾಧನ. ಇದಕ್ಕೂ ಹೆಚ್ಚಾಗಿ ಅದರಲ್ಲಿ ಅರ್ಥವಿಲ್ಲ. ಮೇಲಾಗಿ ಅವರು ನನಗೆ ಬೇಕು; ನಾನು ಅವರಿಗೆ ಬೇಕು. ನನ್ನವಳು ಎಂಬ ಅಂಜನವನ್ನು ಹಾಕಿಕೊಂಡಿರುವುದರಿಂದಲೆ ನಾನು ಅವರಿಗೆ ಇಷ್ಟು ಸುಂದರಳಾಗಿ ಕಾಣುತ್ತಿರಬೇಕು. ನಾನು ಆಡಿದುದೆ ಹಾಡು, ನೋಡಿದುದೆ ನೋಟ, ನಿಲ್ಲುವುದೆ ಭಂಗಿ, ಎಲ್ಲವೂ ಸುಂದರವಾಗಿದೆ ಎನ್ನುವರು. ಇದು ಹೀಗೆಯೆ ನಡೆದರೆ ನನಗೆ ಹುಚ್ಚು ಹಿಡಿಯುವುದು ನಿಜ. ಈ ಉಪಚಾರದ ಮಾತುಗಳು ನನಗೆ ಬೇಕಿಲ್ಲ, ನನ್ನನ್ನು ಅವರು ಹೊಗಳುವುದು ಬೇಡ. ನನಗೆ ಇದು ತಲೆಬೇಸರು ಬಂದಿದೆ. ಇಂದು ಅವರು ಬರಲಿ ಹಾಗೆಯೆ ಹೇಳಿಬಿಡುತ್ತೇನೆ.

'ಇಂದಿಲ್ಲ ನಾಳೆ ನನ್ನ ರೂಪು ನಾಶವಾಗಲೇಬೇಕು. ನನ್ನ ಈ ಸೌಂದರ್ಯಕ್ಕೆ ಹುಲ್ಲುಕಡ್ಡಿಯ ಬೆಲೆಯಿಲ್ಲವೆಂದು ನನಗೆ ತಿಳಿದುಬಂದಾಗ ನನ್ನ ಗತಿಯೇನಾಗಬಹುದು? ಜಗತ್ತನ್ನೆ ಮರುಳುಗೊಳಿಸುವ ಹೆಮ್ಮೆಯಿಂದ ನಾನು ಪ್ರಪಂಚದಲ್ಲಿ ಕಾಲಿಡಬೇಕು. ಎಲ್ಲೆಲ್ಲಿಯೂ ಅಪಮಾನದ ಹಾಗು ತಿರಸ್ಕಾರದ ಪೆಟ್ಟುಗಳನ್ನು ತಿಂದುಕೊಂಡಿರಬೇಕು ಇದು ನನ್ನಿಂದ ಸಾಧ್ಯವಿಲ್ಲ. ಇದರಿಂದ ಯಾರಿಗೂ ಹಿತವಿಲ್ಲ. ನಾನು ಸುಂದರಳಲ್ಲ, ನನ್ನ ಕಂಠದಲ್ಲಿ ಮಾಧುರ್ಯವಿಲ್ಲ, ನಾನು ಸಾಮಾನ್ಯಳು—ತೀರ ಸಾಮಾನ್ಯಳು. ನನ್ನಲ್ಲಿ ಹೆಚ್ಚಿನ ಯಾವ ಯೋಗ್ಯತೆಗಳೂ ಇಲ್ಲ. ಇನ್ನು ವರ್ಣನೆಗಳಿಂದ ನಾನು ಮೋಸಹೋಗಲಾರೆ.

'ಈ ಕಣ್ಣುಗಳು ಸ್ವಲ್ಪ ಚಿಕ್ಕವುಗಳಾಗಿದ್ದರೆ ಎಷ್ಟು ಚೆನ್ನಾಗಿತ್ತು! ತುಟಿಗಳು ಸ್ವಲ್ಪ ಕಪ್ಪಾಗಿರಬೇಕಿತ್ತು. ಗಲ್ಲವನ್ನು ಪರಚಿಕೊಂಡು ಬಿಡಲೆ? ಈ ಮೂಗು ಕೊಯ್ದು ಬಿಡಲೆ? ಯಾರಿಗೆ ಬೇಕಿದೆ ಈ ರೂಪು. ಮುಖವನ್ನು ಕರಾಳವಾಗಿ ಮಾಡಿಕೊಂಡು ಬಿಡುತ್ತೇನೆ. ಅಂದರೆ ತಾನಾಗಿಯೆ ಎಲ್ಲ ಮಾತುಗಳಿಗೂ ಉತ್ತರ ಕೊಟ್ಟಂತಾಗುವುದು. ನಾವಿಬ್ಬರೆ ಸುಖವಾಗಿರಬಹುದು. ನನಗೆ ಅವರಿದ್ದರೆ ಸಾಕು. ಅವರೊಬ್ಬರು ನನ್ನನ್ನು ಮೆಚ್ಚಿದರೆ ಸಾಕು. ಪ್ರಪಂಚವನ್ನು ಮೆಚ್ಚಿಸುವ ಭಾರವನ್ನು ನಾನು ಹೊರಲಾರೆ, ನನ್ನಿಂದಾಗದು.'

ಎರಡೂ ಕೈಗಳಿಂದ ತನ್ನ ಗಲ್ಲಗಳನ್ನು ಗಟ್ಟಿಯಾಗಿ ಹಿಡಿದು ಕೊಂಡಳು. ಅವೆರಡನ್ನು ಏಕ ಕಾಲಕ್ಕೆ ಪರಚಿಬಿಡಬೇಕೆಂದು ಅವಳ ಆಸೆ, ಕನ್ನಡಿಯಲ್ಲಿ ಹಾಗೆಯೆ ಮುಖವನ್ನು ನೋಡುತ್ತ ನಿಂತಳು. ತನ್ನ ಘೀಕರ ವಾದ ಕಣ್ಣುಗಳಿಗೆ ತಾನೆ ಬೆದರಿದಳು.

'ಎಂತಹ ಮೂರ್ಖಳು ನಾನು. ನಾನು ಹೀಗೆ ಮಾಡಿದರೆ ಅವರೇ ನನ್ನುವರು? ಇನ್ನು ಮುಂದೆಯೂ ಈಗಿನಂತೆಯೆ ನನ್ನನ್ನು ಪ್ರೀತಿಸ ಬಹುದು. ಈ ಗಲ್ಲಗಳನ್ನು ಪರಚಿಕೊಂಡ ಮೇಲೆಯೂ ಅರಗಿಳಿ ಎಂದು ನನ್ನನ್ನು ಕರೆಯಬಹುದೆ? ನನ್ನ ನಿರೂಪವನ್ನು ಕಂಡು ನೊಂದುಕೊಳ್ಳು ವರು. ಅದು ಒಂದು ಗಳಿಗಿಯ ನೋಟವಲ್ಲ; ಆ ಜನ್ಮ ಆ ನೋವಿನಲ್ಲಿಯೇ ಕೊರಗಿ ಕೊರಗಿ ಸಾಯಬೇಕಾಗುವುದು. ಅವರ ಬಾಡಿದ ಮುಖವನ್ನು ನೋಡಿ ನಾನು ಬದುಕಲಾರೆ. ಅವರು ಸಂತೋಷವಾಗಿರಬೇಕು, ನಗುತ್ತ ಲಿರಬೇಕು.

'ಈ ಗಲ್ಲಗಳ ಮೇಲ್ಭಾದಿಯ ಕೆಂಪು ಸಾದಾ ಎಂದು ಹೇಳುವರಲ್ಲನೆ! ಸ್ವಲ್ಪ ಕೆಂಪು ತಾಗಿಸಿಕೊಳ್ಳಬೇಕು ಮೇಲ್ಗಡೆಗೆ. ಗಲ್ಲಗಳ ನಡುವಿನ ತಗ್ಗು, ಅದನ್ನು ಕಂಡರೆ ಅವರಿಗೆ ಎಷ್ಟು ಪ್ರೀತಿ. ನಾನು ಯಾವಾಗಲೂ ನಗುತ್ತ ಲಿರಬೇಕು. ಆ ತಗ್ಗು ಗಲ್ಲಗಳ ಮೇಲೆ ಯಾವಾಗಲೂ ಮೂಡಿರಬೇಕು. ನಗುತ್ತಲಿರಬೇಕು. ಆದರೆ ಹೇಗೆ ನಗಲಿ?'

ಸೂಸಿಗೆ ಏನು ಮಾಡಬೇಕೊ ತಿಳಿಯಲಿಲ್ಲ. ವ್ಯಾಕುಲಳಾಗಿ ಮನೆಯ ತುಂಬ ಹರಿದಾಡಿದಳು.

ಒಮ್ಮೊಮ್ಮೆ ಶಾಮನು ಮನೆಗೆ ಬರುವವರೆಗೆ ಒಲೆಯನ್ನು ಕೂಡ ಹೊತ್ತಿಸುತ್ತಿರಲಿಲ್ಲ. ಶಾಮನಾದರೂ ಊಟಕ್ಕಾಗಿ ಅಷ್ಟೊಂದು ಆತುರ ನಾಗಿರಲಿಲ್ಲ. ತನ್ನ ಭವಿತವ್ಯದ ಲೆಕ್ಕವನ್ನೇ ಹಾಕುತ್ತಲಿರುತ್ತಿದ್ದ. ಮನೆ ಗೆಲಸಗಳಲ್ಲಿ ಅವಳು ಉದಾಸೀನಳಾದರೂ ಅವನಿಗೆ ಯಾವ ಬಗೆಯ ಅಸಮಾಧಾನವೂ ಅನ್ನಿಸುತ್ತಿರಲಿಲ್ಲ. ಮನೆಯಲ್ಲಿ ಕಸ ಹಾಗೆಯೆ ಬಿದ್ದಿರು ತ್ತಿತ್ತು; ಸಾಮಾನುಗಳು ಅಸ್ತವ್ಯಸ್ತವಾಗಿ ಎಲ್ಲ ಕಡೆಗೂ ಹರವಿರುತ್ತಿದ್ದವು. ಪಾತ್ರೆಗಳನ್ನು, ಅರಿವೆಗಳನ್ನು ಹಸನವಾಗಿರಿಸುವುದಕ್ಕೂ ಅವಳಿಂದಾಗು

ತ್ತಿರಲಿಲ್ಲ. ಅಡಿಗೆಗೆ ಉಪ್ಪಿದ್ದರೆ ಖಾರವಿರುತ್ತಿರಲಿಲ್ಲ, ಬೆಲ್ಲವಿದ್ದರೆ ಹುಳಿಯಿಲ್ಲ.

ಆದರೆ ಇದಾವುದನ್ನೂ ಶಾಮನು ಗಮನಿಸುತ್ತಿರಲಿಲ್ಲ. ಮನೆಗೆ ಬರುತ್ತಲೆ ತಾನು ಹೊಸದಾಗಿ ತಂದ ಸೀರೆಯನ್ನು ಉಡು ಎಂದು ಹೇಳುವ, ಕುಪ್ಪಸವನ್ನು ತೊಡು ಎಂದು ಹೇಳುವ, ಈ ಮಾಲೆಯನ್ನು ಮುಡಿ ಎಂದು ಹೇಳುವ, ನಾಲ್ಕಾರು ಸರಗಳನ್ನು ತಂದು ಇವುಗಳಲ್ಲಿ ನಿನಗೆ ಯಾವುದು ಇರಲಿ ಎಂದು ಕೇಳುವ, ಈ ಸಡಗರದಲ್ಲಿಯೆ ಅವನ ವೇಳೆಯು ಕಳೆದು ಹೋಗುತ್ತಿತ್ತು.

ಅವನ ದೃಷ್ಟಿಯಲ್ಲಿ ಈಗ ಸೂಸಿಗೆ ಪುನರ್ಜನ್ಮವು ಬಂದಿತ್ತು. ಈಗ ಸೂಸಿಯು ಮೊದಲಿನವಳಲ್ಲ. ಆದರೋಪಚಾರಗಳನ್ನು ಮಾಡಿ ತನ್ನ ಸುಖದುಃಖಗಳನ್ನು ವಿಚಾರಿಸಿ, ಸಂತೈಸಿಕೊಂಡಿರುವ ಸೇವಕಳೆಂದು ಅವನು ಭಾವಿಸುತ್ತಲಿರಲಿಲ್ಲ. ಆ ಸೇವಕ ವೃತ್ತಿಯ ತಿಲಾಂಶವನ್ನೂ ಅವಳಿಂದ ನಿರೀಕ್ಷಿಸುತ್ತಲಿರಲಿಲ್ಲ. ತನ್ನ ಕಲಾ ಪ್ರೌಢಮೆಯಿಂದ ಎಲ್ಲರ ಹೃದಯವನ್ನು ಸುಸಂಸ್ಕೃತಗೊಳಿಸುವ ಮಹತ್ತರವಾದ ಭಾರವನ್ನು ವಹಿಸಿಕೊಂಡು ಜನ್ಮತಾಳಿದ ಸೌಂದರ್ಯ ದೇವತೆಯಂತೆ ಕಾಣುತ್ತಲಿದ್ದಳು. ಅಂತೆಯೆ ಅವಳನ್ನು ಯಾವ ಬಗೆಯಾಗಿ ಸಿಂಗರಿಸಿದರೂ, ಯಾವ ವೇಷ ಭೂಷಣಗಳನ್ನು ತೊಡಿಸಿದರೂ ತೃಪ್ತಿಯಿಲ್ಲ. ಅವಳು ಎಷ್ಟು ಉಲ್ಲಾಸ ವಾಗಿದ್ದರೂ ಕಡಿಮೆಯೆ.

## ೯

ಆ ಕಟ್ಟಡಕ್ಕೆ ಮೂರು ಅಂತಸ್ತುಗಳು. ಕಟ್ಟಡವನ್ನು ಪ್ರವೇಶಿಸುತ್ತಲೆ ಎರಡೂ ಬದಿಗಳಲ್ಲಿ ಎರಡು ಕೋಣೆಗಳು. ಅವೆರಡೂ ಆಫೀಸುಗಳು, ಅವುಗಳ ಹಿಂದೆಯೆ ಸ್ಟೋರ್ ರೂಮು. ನಡುವೆ ದೊಡ್ಡ ಹಾಲು, ಅಲ್ಲಿ ಅತಿಥಿಗಳು ಬಂದರೆ ಕೂಡುವುದಕ್ಕೆ ನಾಲ್ಕಾರು ಕುರ್ಚಿ, ಸೋಫಾಗಳನ್ನಿಟ್ಟಿದ್ದರು. ಅದರ ಹಿಂದೆ ಭೋಜನ ಶಾಲೆ, ಅಡಿಗೆಯ ಮನೆ, ಸ್ನಾನದ ಮನೆ. ಎರಡನೆಯ ಅಂತಸ್ತಿನ ತುಂಬ ಚಿಕ್ಕ ಚಿಕ್ಕ ಕೋಣೆಗಳು. ಎಲ್ಲವೂ ಅಚ್ಚುಕಟ್ಟಾದವು. ಸಾಕಷ್ಟು ಗಾಳಿ ಹವೆಯಿದ್ದಿತು. ಒಂದು ಕೋಣೆಯಿಂದ ಮತ್ತೊಂದು ಕೋಣೆಗೆ ಹೆಚ್ಚು ಸಂಪರ್ಕವಿಲ್ಲ. ಎಲ್ಲವೂ ಪ್ರತ್ಯೇಕವಾದುವುಗಳೇ. ಆ ಎಲ್ಲ ಕೋಣೆಗಳ ಮಧ್ಯದಲ್ಲಿ ಇನ್ನೊಂದು ಹಾಲು. ಇಲ್ಲಿ ಎಲ್ಲ ನಟ ನಟಿಯರೂ ಕುಳಿತು ಮಾತನಾಡಬಹುದು, ಆಟವಾಡಬಹುದು. ಮೂರನೆಯ ಅಂತಸ್ತಿನಲ್ಲಿಯೂ ಕೆಲವು ಕೋಣೆಗಳು. ನಡುವೆ ದೊಡ್ಡ ಹಾಲು. ಕೆಳಗಿನ ಎರಡು ಹಾಲುಗಳಕಿಂತಲೂ ದೊಡ್ಡದು. ಇಲ್ಲಿಯೆ ರಿಹರ್ಸಲ್ಲು (rehearsal) ನಡೆಯುವ ಏರ್ಪಾಟು ಮಾಡಿದ್ದರು. ಹಾಲಿನ ಒಂದು ಬದಿಗೆ ಪ್ಲ್ಯಾಟಫಾರ್ಮಿ (platform)ನ ರೀತಿಯಲ್ಲಿ ಕಟ್ಟಿ ಹಾಕಿದ್ದರು. ಅದರ ಎದುರಿಗೆ ಕೆಲವು ಕುರ್ಚಿಗಳನ್ನು ಸಾಲಾಗಿಟ್ಟು ನಾಟ್ಯಗೃಹದ ರೀತಿಯಲ್ಲಿ ವ್ಯವಸ್ಥೆ ಮಾಡಿದ್ದರು.

ಎಲ್ಲ ನಟ ನಟಿಯರೂ ಈ ಕಂಪನಿ ಮನೆಯಲ್ಲಿಯೇ ಇರಬೇಕೆಂಬ ಆಗ್ರಹವೇನು ಇರಲಿಲ್ಲ. ಇದರ ಬದಿಯಲ್ಲಿ ಅದೇ ಕಂಪೌಂಡಿನಲ್ಲಿ ಕೆಲವು ಚಿಕ್ಕ ಚಿಕ್ಕ ಮನೆಗಳೂ ಇದ್ದವು. ಆದರೆ ಊಟಕ್ಕೆ ಮಾತ್ರ ಎಲ್ಲರೂ ಒಂದೆಡೆಗೇ ಸೇರುತ್ತಿದ್ದರು. ಎಲ್ಲೋ ಒಬ್ಬಿಬ್ಬರು ಮಾತ್ರ ಪ್ರತ್ಯೇಕ ಅಡಿಗೆ ಮಾಡಿಕೊಳ್ಳುತ್ತಿದ್ದರು. ಊಟದಲ್ಲಿ ಮಾಂಸಾಹಾರಿಗಳು, ಶಾಖಾಹಾರಿ

ಗಳು ಎಂದು ಸ್ಥೂಲವಾಗಿ ಎರಡು ವಿಭಾಗ. ಶಾಖಾಹಾರಿಗಳಲ್ಲಿ ಮತ್ತೆ ಬ್ರಾಹ್ಮಣರು, ಲಿಂಗಾಯತರು. ಇವರೆಲ್ಲರ ಅಡಿಗೆಗಳು ಬೇರೆ ಬೇರೆ. ಯಾರೂ ತಕರಾರು ಮಾಡುವಂತಿರಲಿಲ್ಲ. ಈ ಎಲ್ಲ ಅಡಿಗೆಮನೆ ಹಾಗು ಭೋಜನಶಾಲೆಗಳು ಒಂದೇ ಕಡೆಯಲ್ಲಿದ್ದರೂ ಪ್ರತ್ಯೇಕವಾಗಿಯೆ ಇದ್ದವು. ಆದ್ದರಿಂದ ಎಲ್ಲವೂ ಬೇರೆ ಬೇರೆ ಎಂದರೆ ಬೇರೆ ಬೇರೆ; ಒಂದೇ ಎಂದರೆ ಒಂದೇ ಈ ರೀತಿಯಲ್ಲಿತ್ತು. ಜಾತಿ ಧರ್ಮಗಳ ಮೇಲೆ ವಿಶ್ವಾಸವಿದ್ದವರಿಗೆ ತಮ್ಮ ಮನಸ್ಸಿಗೆ ಸಮಾಧಾನ ಮಾಡಿಕೊಳ್ಳಲು ಅವಕಾಶವಿತ್ತು ಸುಧಾರಕರಿಗಂತೂ ಸರಿಯೆ, ಅಸಮಾಧಾನವಾಗಲು ಏನೂ ಕಾರಣವಿರಲಿಲ್ಲ.

ಊಟ ಉಪಚಾರಗಳ ಸೌಖ್ಯಕ್ಕೇನೂ ಕಡಿಮೆ ಇರಲಿಲ್ಲ. ಊಟದಲ್ಲಿ ಪ್ರತಿ ದಿನವೂ ಒಂದಿಲ್ಲ ಒಂದು ಬದಲಾವಣೆ–ವಿಶೇಷ ಇದ್ದೇ ಇರುತ್ತಿತ್ತು. ಊಟದಲ್ಲಿ ಒಳ್ಳೆ ಸವಿಗಾರರು. ಪಕ್ವಾನ್ನಗಳ ವಿಷಯದಲ್ಲಿ ಕರ್ನಾಟಕದ ಏಕೀಕರಣ ಅಷ್ಟೆ ಅಲ್ಲ ಕರ್ನಾಟಕ, ಆಂಧ್ರ, ಮಹಾರಾಷ್ಟ್ರಗಳ ಸಮ್ಮೇಲನವಾಗಿದ್ದಿತಲ್ಲಿ. ಆ ಪಕ್ವಾನ್ನಗಳಲ್ಲಿ ತಮ್ಮ ಮಿದುಳನ್ನು ಉಪಯೋಗಿಸಿ ಅನೇಕ ಸುಧಾರಣೆಗಳನ್ನೂ ಮಾಡುತ್ತಿದ್ದರು.

ದಿನಕ್ಕೆರಡು ಊಟ; ಆ ಮೇಲೆ ಎರಡು ಉಪಹಾರ-ಚಹಾ, ಕಾಫಿ, ಒವ್ಹಲ್‌ಟಿನ್, ಹಾಲು, ಡ್ರಿಂಕ್, ಮೊದಲಾದ ಪೇಯಗಳಂತೂ ಸರಿಯೆ. ಯಾವುದನ್ನಾದರೂ ಆಯ್ದುಕೊಳ್ಳಬಹುದು. ಬೆಳಗಿನಲ್ಲಿ ಪೇಯದ ಜೊತೆಗೆ ಮೊದಲೇನಾದರೂ ಸಿಹಿ ಪದಾರ್ಥವಿರಲೇಬೇಕು. ಆ ಮೇಲೆ ಖಾರದ ತಿಂಡಿ. ಮಧ್ಯಾನ್ಹ ಹೆಚ್ಚಾಗಿ ತಿಂಡಿ ಇರುತ್ತಿರಲಿಲ್ಲ. ಬೇಕಾದವರು ಹೇಳಿ ಮಾಡಿಸಿಕೊಳ್ಳಬಹುದಿತ್ತು.

ಎಲ್ಲ ಕೆಲಸಗಳಿಗೂ ಬೇರೆ ಬೇರೆ ನೌಕರರನ್ನಿಟ್ಟಿದ್ದರು. ಎಲ್ಲವೂ ವ್ಯವಸ್ಥಿತವಾಗಿಯೆ ನಡೆದಿದ್ದಿತು. ದಿನ ಬೆಳಗಾದರೆ ಅಗಸರವ, ಕ್ಷೌರದವ ಕಾದುಕೊಂಡಿರುತ್ತಿದ್ದರು.

ಈ ಎಲ್ಲ ವೈಭವದಿಂದ ಶಾಮ, ಸೂಸಿಯರ ಮನದ ಮೇಲೆ ವಿಶೇಷ ಪರಿಣಾಮವಾಯಿತು. ಸೂಸಿಯ ಕಾತರ ಭಾವವು ಬರಬರುತ್ತ ಕಡಿಮೆ

ಯಾಗತೊಡಗಿತು. ಅದರಲ್ಲಿಯೂ ಸಿನೇಮಾ ಕಂಪನಿಗಳಲ್ಲಿ ಸುಂದರ ನಟಿಯರಿಗೆ ದೊರೆಯುವ ಮಾನ ಮರ್ಯಾದೆಗಳು ಡೈರೆಕ್ಟರರಿಗೆ—ಅದೇಕೆ ಕಂಪನಿಯ ಒಡೆಯರಿಗೂ ದೊರೆಯುವುದಿಲ್ಲ ಎಂದು ಹೇಳಬಹುದು.

ಸೂಸಿಯ ಅಪ್ಪಣೆಗಳನ್ನು ನಿರ್ವಹಿಸುವುದಕ್ಕಾಗಿ ಎಲ್ಲರೂ ಆತುರರಾಗಿರುತ್ತಿದ್ದರು. ಇವಳ ಬಾಯಿಯಿಂದ ಮಾತು ಹೊರಕ್ಕೆ ಬರುವುದರೊಳಗಾಗಿಯೆ ಅದು ಸಿದ್ಧವಾಗುತ್ತಿತ್ತು. ಯಾರಿಂದ ಕೆಲಸವಾಯಿತು ಎಂಬುದು ಕೂಡ ಅವಳಿಗೆ ಅನೇಕ ಸಲ ಗೊತ್ತಾಗುತ್ತಿರಲಿಲ್ಲ. ಅಲ್ಲದೆ ಸೂಸಿ ಕುಲೀನಳು. ಅವಳ ವಿಷಯದಲ್ಲಿ ಎಲ್ಲರೂ ಗೌರವದಿಂದ ನಡೆದುಕೊಳ್ಳಬೇಕು ಎಂದು ಈ ಮೊದಲೆ ಡೈರೆಕ್ಟರರ ಅಪ್ಪಣೆಯಾದ್ದರಿಂದ ಎಲ್ಲರೂ ಆದರ ಪೂರ್ವಕವಾಗಿಯೆ ವರ್ತಿಸುತ್ತಿದ್ದರು.

ಎಲ್ಲ ನಟ ನಟಿಯರೂ ಬಂದು ಸೇರಬೇಕಾದರೆ ಮುಂದೆ ಇನ್ನೊಂದು ವಾರ ಕಳೆಯಿತು. ಈ ಅವಧಿಯಲ್ಲಿ ಉಮಾಪತಿರಾಯರು ಶಾಮ ಸೂಸಿಯರನ್ನು ದಿನಾಲು ಕಂಡು ಕ್ಷೇಮ ಸಮಾಚಾರದ ಮಾತುಗಳನ್ನಾಡಿಕೊಂಡು ಹೋಗುತ್ತಿದ್ದರು. ಕಂಪನಿಗೆ ಬಂದ ದಿವಸವಂತೂ ಶಾಮ ಸೂಸಿಯರು ಕಂಪನಿ ಮನೆಯಲ್ಲಿಯೆ ಉಳಿದುಕೊಂಡರು. ಮರುದಿನ ಅಲ್ಲಿಯ ವ್ಯವಸ್ಥಾಪಕರು ಅವಶ್ಯವೆನಿಸಿದರೆ ಪ್ರತ್ಯೇಕ ಮನೆಯಲ್ಲಿರಬಹುದು ಎಂದು ಶಾಮ ಸೂಸಿಯರಿಗೆ ಹೇಳಿದರು.

ಶಾಮನಿಗೆ ಅಗತ್ಯವೆನಿಸಲಿಲ್ಲ. ಎಲ್ಲರೂ ಕೂಡಿಯೆ ಇರಬೇಕು, ಒಂದೆಡೆಯಲ್ಲಿಯೆ ಇರಬೇಕು ಅಂದರೆ ಯಾವಾಗಲೂ ಕಲಾಮಯ ವಾತಾವರಣದಲ್ಲಿಯೆ ಇರಲು ಅನುಕೂಲವಾಗುವುದು ಎಂದು ಯೋಚಿಸಿದ. ಯಾವಾಗಲೂ ಕಲಾವಿಷಯಕವಾದ ಮಾತು ಕತೆಗಳು; ಕಲಾವಿದರೆಲ್ಲರೂ ಒಂದೆಡೆ ಸೇರಿ ಚರ್ಚೆ ಮಾಡುವುದು; ಒಬ್ಬರ ಅಭಿನಯದ ವಿಷಯವಾಗಿ, ಗಾಯನದ ವಿಷಯವಾಗಿ, ಇನ್ನೊಬ್ಬರು ತಮ್ಮ ಅಭಿಪ್ರಾಯವನ್ನು ವ್ಯಕ್ತಗೊಳಿಸುವುದು; ಇವೆಲ್ಲವುಗಳಿಂದ ಕಲೆಯ ಬೆಳವಣಿಗೆಗೆ ಬಹಳ ಲಾಭವಾಗುವುದು ಎಂದು ಅವನು ಬಗೆದ. ಪಾಪ! ಕಂಪನಿಯ ಸ್ಥಿತಿಗತಿಗಳು ಅವನಿಗೆ ಹೇಗೆ ಗೊತ್ತಾಗಬೇಕು? ಅಲ್ಲಿಯ ಕಲಾವಿದರಲ್ಲಿರುವ ಸಿಟ್ಟು, ಸಿಡುಕು,

ಮಾತ್ಸರ್ಯ, ದುರಭಿಮಾನ, ಇವುಗಳ ಕಲ್ಪನೆಯೆ ಅವನಿಗೆ ಬರಲಿಲ್ಲ. ತನ್ನ ಕಲ್ಪನಾ ಸಾಮ್ರಾಜ್ಯದಲ್ಲಿಯೆ ಹಾರಾಡುತ್ತಲಿದ್ದ.

ಸೂಸಿಯ ಮನಸ್ಸಿನಲ್ಲಿ ಏನೋ ತಾವು ಪ್ರತ್ಯೇಕವಾದ ಮನೆಯಲ್ಲಿರ ಬೇಕೆಂದೆ ಇಚ್ಛೆಯಿತ್ತು. ಈ ಮಾತನ್ನು ಶಾಮುನಿಗೆ ಹೇಳುತ್ತಲೂ ಅವನು ಚಿಕ್ಕದೊಂದು ಉಪನ್ಯಾಸವನ್ನು ಪ್ರಾರಂಭಿಸಿದ. ಸೂಸಿ ಸುಮ್ಮನಾದಳು; ಒಂದ. ತುಟಿ ಎರಡು ಮಾಡಲಿಲ್ಲ. ಎರಡನೆಯ ಅಂತಸ್ತಿನಲ್ಲಿಯ ಬಲಭಾಗದ ಮೊದಲನೆಯ ಕೋಣೆಯನ್ನು ಇವರು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡರು.

ಇವರ ಬದಿಯ ಕೋಣೆಯಲ್ಲಿ ಕಮಲಾ ಹಾಗು ಅವಳ ತಾಯಿ ಇರುತ್ತಿದ್ದರು. ಅವರು ವೇಶ್ಯೆಯರ ವರ್ಗಕ್ಕೆ ಸೇರಿದವರು. ಕಮಲಾ ತುಂಬು ಪ್ರಾಯದ ಹುಡುಗಿ; ಸುಮಾರು ೨೦ ವರ್ಷಗಳಾಗಿರಬಹುದಷ್ಟೆ. ಸುಂದರಳು ಎಂದು ಹೆಮ್ಮೆ ಪಟ್ಟುಕೊಳ್ಳುವಂತಿರದಿದ್ದರೂ ಕುರೂಪಿಯಲ್ಲ. ಮಾತಿನಲ್ಲಿ ತುಂಬಾ ಚತುರಳು. ಅವಳ ಜೊತೆಗೆ ಮಾತನಾಡುವುದಕ್ಕೆ ಪ್ರಾರಂಭಿಸಿದರೆ ತಾಸುಗಳು ನಿಮಿಷದಂತೆ ಕಳೆದು ಹೋಗುವವು. ಅವಳ ತುಟಿಗಳ ಮೇಲೆ ಯಾವಾಗಲೂ ಮುಗುಳು ನಗೆ ಮಿನುಗುತ್ತಲಿರುತ್ತಿತ್ತು. ೪-೬ ಚಿತ್ರಗಳಲ್ಲಿ ಪಾತ್ರವಹಿಸಿ ಅನುಭವ ಪಡೆದಿದ್ದಳು. ಜನರ ಸ್ವಭಾವದ ಪರಿಚಯವನ್ನೂ ಮಾಡಿಕೊಂಡಿದ್ದಳು; ಯಾವ ರೀತಿಯಲ್ಲಿ ನಡೆದರೆ ಜನರ ಮೆಚ್ಚಿಗೆಗೆ ತಾನು ಪಾತ್ರಳಾಗಬಹುದು ಎಂಬುದನ್ನೂ ತಿಳಿದುಕೊಂಡಿದ್ದಳು. 'ನನ್ನ ಮಗಳನ್ನು ಗುಡ್ಡದ ಮೇಲೆ ಕೈಬಿಟ್ಟರೂ ಗೆದ್ದುಕೊಂಡೇ ಬರುವಳು' ಎಂದು ಕಮಲೆಯ ತಾಯಿಯು ಆಗಾಗ ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದಳು.

ಕಮಲಾ ವೇಶ್ಯೆಯರ ವರ್ಗಕ್ಕೆ ಸೇರಿದವಳಾದರೂ ಸುಶಿಕ್ಷಿತಳು, ಮೇಲಾಗಿ ಸುಧಾರಿಸಿದವಳು! ತನ್ನ ಜೀವನದ ಭವಿತವ್ಯತೆಯನ್ನು ತಾನೆ ನಿರ್ಧರಿಸಿಕೊಳ್ಳಬೇಕು. ತಾಯಿಯ ಕೈಯಲ್ಲಿ ಆ ಬಗ್ಗೆ ಯಾವ ಅಧಿಕಾರವೂ ಇಲ್ಲವೆಂಬಂತೆ ಎಲ್ಲರೊಡನೆ ಸ್ವೇಚ್ಛೆಯಿಂದ ವರ್ತಿಸುತ್ತಿದ್ದಳು. ತಾಯಿಯು ಯಾವಾಗಲೂ ತನ್ನ ರೀವಿಯಲ್ಲಿಯೆ ಜೀವನ ಕಳೆದವಳು. ತನ್ನ ಮನೆತನ, ತನ್ನ ಮರ್ಯಾದೆ, ತನ್ನ ಮಗಳ ಜಾಣ್ಮೆ ಹೇಳಿಕೊಂಡು ಜೀವನ ನಡೆಸ

ಬೇಕೆಂದಿದ್ದಳವಳು. ಮಗಳು ತೋರುತ್ತಿದ್ದ ಅನಾದರದಿಂದ ಆಗಾಗ್ಗೆ ಮುನಿಸಿಕೊಳ್ಳುತ್ತಿದ್ದಳು. ಅನೇಕ ಸಲ ಮಗಳಿಗೆ ಉಪದೇಶವನ್ನೂ ಮಾಡುತ್ತಿದ್ದಳು. 'ವೇಶ್ಯೆಯರು ಈ ರೀತಿ ವರ್ತಿಸಬಾರದು. ನಮ್ಮ ಬಿಗುವಿನಲ್ಲಿಯೆ ಇರಬೇಕು. ಹೀಗೆ ಚಿಲ್ಲರೆಯಾಗಿ ಬಿಟ್ಟು, ಬಂದವರ ಜೊತೆಗೆ ಕಿಸಿ ಕಿಸಿ ಹಲ್ಲು ತೆಗೆದರೆ ಹೇಗೆ? ಈಗ ವಯಸ್ಸಿದೆ, ರೂಪವಿದೆ, ಎಲ್ಲರೂ ನಿನ್ನನ್ನು ಮೆಚ್ಚುವರು. ಅನಂತರ ನಿನ್ನ ಬಾಳು ನಾಯಿಯ ಬಾಳು. ಗೌರವವಾಗಿರಮ್ಮ' ಎಂದು ಮೇಲಿಂದ ಮೇಲೆ ಹೇಳುತ್ತಿದ್ದಳು.

ಕಮಲೆಯು ಈಗ ತಾಯಿಯ ಮಾತುಗಳಿಗೆ ಗಮನ ಕೊಡುತ್ತಿರಲಿಲ್ಲ. ಇದೊಂದು ಮುದಿಗೂಬೆ, ನಿರ್ವಾಹವಿಲ್ಲದ ಪೀಡೆ ಎಂದೇ ಭಾವಿಸಿಕೊಂಡಿದ್ದಳು. ಇದಕ್ಕೂ ಹಿಂದಿನ ಚಿತ್ರದಲ್ಲಿಯೂ ಕಮಲೆಯು ಪಾತ್ರ ವಹಿಸಿದ್ದಳು. ಮುಖ್ಯ ಪಾತ್ರವನ್ನೆ ವಹಿಸಿದ್ದಳು. ಆಗ ಕಮಲೆಯ ತಾಯಿಗೂ ಕಂಪನಿಯವರಿಗೂ ತುಂಬಾ ವ್ಯಾಜ್ಯವಾಗಿದ್ದಿತು ಚಿಕ್ಕ ಪುಟ್ಟ ಕಾರಣಗಳು ದೀರ್ಘಕ್ಕೆ ಹೋಗಿ ಮುರಗಡೆಯಾಗುವವರೆಗೆ ವಿಷಯವು ವಿಕೋಪಕ್ಕೆ ಬಂದಿತು. ಅಂತೂ ಚಿತ್ರ ಮುಗಿಸಬೇಕಾದರೆ ಎಲ್ಲರಿಗೂ ಸಾಕುಬೇಕಾಗಿಹೋಯಿತು.

ಈಸಲ ಈ ರಗಳೆಗಾಗಿ ಬೆದರಿ ಕಮಲೆಯನ್ನು ತೆಗೆದುಕೊಳ್ಳಲು ಡೈರೆಕ್ಟರರು ಮೊದಲಿನಿಂದಲೂ ವಿರುದ್ಧವಾಗಿಯೆ ಇದ್ದರು. ಬೇಡವೇ ಬೇಡವೆಂದರು. ಆದರೆ ಕಮಲೆಯು 'ನಾನು ಈಗ ವಯಸ್ಸಿಗೆ ಬಂದಿದ್ದೇನೆ. ಯಾರ ಹಂಗೂ ನನಗಿಲ್ಲ, ನಾನು ಈಗ ತಾಯಿಯ ಅಧೀನಳಲ್ಲ. ಇನ್ನು ನಿಮಗೆ ಯಾವ ತೊಂದರೆಯೂ ಉಂಟಾಗಲಾರದು' ಎಂಬ ಆಶ್ವಾಸನವನ್ನು ಕೊಟ್ಟಿದ್ದರಿಂದ ಅವಳನ್ನು ತೆಗೆದುಕೊಳ್ಳಲಾಯಿತು. ಈಗ ಕೂಡ ಕಮಲೆಯು ಯಾರ ಸಂಗಡವಾದರೂ ಮಾತನಾಡುತ್ತ ಕುಳಿತಾಗ ಅವಳ ತಾಯಿಯು ನಡುವೆ ಬಾಯಿ ಹಾಕಿ ಅವರಿಗೆ ಥಟ್ಟನೆ ಏನಾದರೂ ಅಂದು ಬಿಡುತ್ತಿದ್ದಳು. ನಿಷ್ಠುರದ ಮಾತುಗಳನ್ನಾಡಲೂ ಅನುಮಾನಿಸುತ್ತಿರಲಿಲ್ಲ. ಆದರೆ ಅವಳ ಈ ಸ್ವಭಾವವು ಎಲ್ಲರಿಗೂ ಗೊತ್ತಿದ್ದುದರಿಂದ ಅವಳ ಮಾತಿಗೆ ಕಿವಿಗೊಡದೆ ಕಮಲೆಯ ನಗುಮುಖವನ್ನು ನೋಡಿಕೊಂಡು ಸುಮ್ಮನಾಗುತ್ತಿದ್ದರು.

ಇನ್ನೂ ೩–೪ ಜನ ವೇಶ್ಯೆಯರೂ ಪಾತ್ರವಹಿಸಲು ಬಂದಿದ್ದರು. ಅವರೂ ಅದೇ ಬದಿಯ ಕೋಣೆಗಳಲ್ಲಿ ಇದ್ದರು. ಅವರೆಲ್ಲರೂ ಸ್ವಲ್ಪ ವಯಸ್ಸಾದವರು. ತುಂಬಾ ಅನುಭವಿಕರೇ. ಆದರೆ ಅವರ ಅನುಭವ, ಅಭಿನಯ ಪೌರಾಣಿಕ ನಾಟಕಗಳಿಗೆ ತಕ್ಕ ಮಟ್ಟಿಗೆ ಒಪ್ಪುತ್ತಿತ್ತು. ಸಾಮಾಜಿಕ ನಾಟಕಗಳೆಂದರೆ ಅವರು ಮೂಗು ಮುರಿಯುತ್ತಿದ್ದರು. ಏನು ನಾಟಕ, ಏನು ಅಭಿನಯ, ಏನು ಹಾಡುಗಾರಿಕೆ ಎಂದು ಕೈತಿರುವಿ ಮಾತನಾಡುತ್ತಿದ್ದರು. ಈ ಚಿತ್ರಪಟ ಮುಗಿಯುವವರೆಗೆ ತಮಗೆ ರಜೆ ಕೊಡಬೇಕೆಂದೇ ಕೇಳಿಕೊಂಡರು. ರಜೆ ದೊರೆಯದ್ದರಿಂದ ಬರಬೇಕಾಯಿತು. ಈ ಸಾಮಾಜಿಕ ಚಿತ್ರದಲ್ಲಿ ತಮಗೆ ಮುಖ್ಯ ಪಾತ್ರಗಳು ದೊರೆಯಲು ಸಾಧ್ಯವಿಲ್ಲ ಎಂಬ ವಿಷಯವು ತಿಳಿದುಬಂದುದೆ ಪ್ರಾಯಶಃ ಅವರ ಈ ಅಸಡ್ಡೆಗೆ ಮುಖ್ಯ ಕಾರಣವಾಗಿರಬಹುದು.

ಸಾಮೂಹಿಕ ನರ್ತನವೊಂದನ್ನು ಇಟ್ಟುಕೊಳ್ಳಬೇಕೆಂದಿದ್ದರು. ಅದು ಯಾವ ರೀತಿಯಾಗಿರಬೇಕೆಂಬುವನ್ನು ಇನ್ನೂ ನಿಶ್ಚಯಿಸಿರಲಿಲ್ಲ. ಆ ನರ್ತನಕ್ಕೆ ಬೇರೆ ಆರು ಹುಡುಗಿಯರು ಬರತಕ್ಕವರಿದ್ದರು.

ಯಾವುದಾದರೂ ನಾಟಕ ಕಂಪನಿ ಅಥವಾ ಸಿನೇಮಾ ಕಂಪನಿಯ ವಿಷಯವಾಗಿ ಮಾತೆತ್ತುತ್ತಲೆ ಆ ಕಂಪನಿಯಲ್ಲಿ ಹೆಂಗಸರೆಷ್ಟು ಜನರಿದ್ದಾರೆ? ಅವರು ಯಾರು ಯಾರು ? ಹೇಗಿದ್ದಾರೆ ? ಎಂದು ಕೇಳುವುದು ಸರ್ವಸಾಧಾರಣವಾಗಿ ವಾಡಿಕೆಯಲ್ಲಿರುವುದರಿಂದ ಆ ಮೇರೆಗೆ ತಕ್ಕ ಮಟ್ಟಿಗೆ ವಿಷಯನ್ನು ಸಂಗ್ರಹಿಸಿಕೊಂಡಂತಾಯಿತು.

ನಟರು ಇರಲೇ ಇಲ್ಲವೆ ಎಂದು ಶಂಕಿಸುವುದು ಬೇಡ. ಸಾಕಷ್ಟು ಜನರಿದ್ದರು ಅವರೆಲ್ಲರ ಪರಿಚಯವೂ ನಮಗೆ ಅನಾವಶ್ಯಕ. ಈ ಸಾಮಾಜಿಕ ಚಿತ್ರದಲ್ಲಿ ಮಾಧವರಾಯರೆ ನಾಯಕನ ಪಾತ್ರವಹಿಸಬೇಕೆಂದು ತೀರ್ಮಾನವಾಗಿತ್ತು. ಅವರು ಅನೇಕ ಪೌರಾಣಿಕ ಹಾಗು ಐತಿಹಾಸಿಕ ಚಿತ್ರಗಳಲ್ಲಿ ಭಾಗವಹಿಸಿದ್ದರು. ಅವರ ಸಾಮಾಜಿಕ ಚಿತ್ರವೆಂದರೆ ಇದೇ ಮೊದಲನೆಯದು.

ಮುಖ್ಯನಾಯಕಿಯ ಪಾತ್ರವನ್ನು ಯಾರಿಗೆ ಕೊಡಬೇಕು ಎಂಬುದೆ ಉಮಾಪತಿರಾಯರಿಗೆ ದೊಡ್ಡ ಸಮಸ್ಯೆಯಾಗಿದ್ದಿತು. 'ಕಮಲಾ ಅನುಭವಿಕಳು; ಸುಂದರಳು. ತಾರಿಣಿಯಷ್ಟು ಸುಂದರಳಾಗಿರದಿದ್ದರೂ ಒಟ್ಟಿನಲ್ಲಿ ಸುಂದರಳೆಂದೇ ಹೇಳಬೇಕು. ಹಾಡಲು ಬಲ್ಲವಳು, ಕಂಠವಲ್ಲಿ ಮಾಧುರ್ಯವಿರದಿದ್ದರೂ ಹಾಡಿನಕಿಂತಲೂ ಒನಪು ಒಯ್ಯಾರಗಳನ್ನೆ ಹೆಚ್ಚಾಗಿ ಪ್ರದರ್ಶಿಸಿ ಹಾಡುಗಾರಿಕೆಯನ್ನು ಬಲ್ಲವಳು ಎಂಬ ಕೀರ್ತಿಯನ್ನು ಸಂಪಾದಿಸಿದ್ದಳು. ತಾರಿಣಿಯೂ ಕಂಪನಿಗೆ ಬಂದಂದಿನಿಂದ ಗಾಯನದ ಪಾಠಗಳನ್ನು ಹೇಳಿಸಿಕೊಳ್ಳುತ್ತಲಿದ್ದಾಳೆ. ದಿನ ದಿನಕ್ಕೂ ಪ್ರಗತಿಯನ್ನು ತೋರಿಸುತ್ತಲಿದ್ದಾಳೆ. ಬೇಗನೆ ಕಮಲೆಯನ್ನು ಮೀರ ಬಲ್ಲಳು ಎಂಬುದರಲ್ಲಿ ಸಂದೇಹವೆ ಇಲ್ಲ. ಇನ್ನು ಅಭಿನಯದ ವಿಷಯ. ತಾರಿಣಿ ತುಂಬಾ ಸಂಕೋಚ ವೃತ್ತಿಯವಳು. ಸಾಮಾಜಿಕ ಚಿತ್ರದಲ್ಲಿ ಅಭಿನಯವು ಸ್ವಾಭಾವಿಕವಾಗಿರಬೇಕು. ನಾಯಕನ ಪಾತ್ರವನ್ನು ಮಾಧವರಾಯನಿಗೆ ಕೊಡಬೇಕೆಂದಿದೆ. ಅವನ ಮನಸ್ಸಿನಲ್ಲಿ ಕಮಲೆಗೆ ನಾಯಕಿಯ ಪಾತ್ರ ಕೊಡಿಸಬೇಕು ಎಂದಿದ್ದಂತಿದೆ. ಆದರೆ ತಾರಿಣಿಯ ನಯ-ವಿನಯಗಳು ಕಮಲೆಗೆ ಎಂದಿಗೂ ಬರಲಾರವು' ಲೆಕ್ಕಹಾಕುತ್ತಲೆ ಇದ್ದರು.

ಒಂದು ಸಲ ಶಾಮನ ಸಂಗಡ ಮಾತನಾಡುವಾಗ 'ನನ್ನ ಮನಸ್ಸಿನಲ್ಲಿ ತಾರಿಣಿದೇವಿಯವರಿಗೇ ಮುಖ್ಯ ನಾಯಕಿಯ ಪಾತ್ರವನ್ನು ಕೊಡಬೇಕೆಂದಿದೆ. ಗಾಯನವನ್ನು ಮನಸ್ಸುಗೊಟ್ಟು ಕಲಿಯಲು ಅವರಿಗೆ ನನ್ನ ಪ್ರಾರ್ಥನೆಯನ್ನು ತಿಳಿಸಿರಿ. ಇನ್ನು ಅಭಿನಯದಲ್ಲಿ ಅವರು ಎಷ್ಟರ ಮಟ್ಟಿಗೆ ಸಿನೇಮಾಗಳಲ್ಲಿ ಉಪಯೋಗ ಬೀಳುವರೊ ನೋಡೋಣ. ಅವರು ಮನಸ್ಸು ಮಾಡಿದರೆ ಅಭಿನಯವನ್ನು ಕೂಡ ಚನ್ನಾಗಿಯೆ ಮಾಡಬಲ್ಲರು ಎಂಬ ಧೈರ್ಯದ ಮೇಲಿಂದಲೇ ಅವರ ಪ್ರಥಮ ಚಿತ್ರದಲ್ಲಿಯೆ ಅವರಿಗೆ ನಾಯಕಿಯ ಪಾತ್ರಕೊಡುವ ಸಾಹಸ ಮಾಡಬೇಕೆಂದಿದ್ದೇನೆ. ಮುಖ್ಯವಾಗಿ ಅವರು ಬಹಳ ಮುತವರ್ಜಿಯಿಂದ ಕೆಲಸಮಾಡಿ ತಮಗೂ ನಮಗೂ ಕೂಡಿಯೆ ಕೀರ್ತಿ ಬರುವಂತೆ ಮಾಡಬೇಕು' ಎಂದರು ರಾಯರು.

ಉಮಾಪತಿರಾಯರು ತಮ್ಮ ಬಗ್ಗೆ ಇಷ್ಟೊಂದು ಅಭಿಮಾನವನ್ನು

ತಾಳುತ್ತಿರುವುದು ತಮ್ಮ ಶುಭದ ಚಿಹ್ನವೆಂದೇ ಶಾಮನು ಭಾವಿಸಿದ. 'ನಿಮ್ಮ ಉಪಕಾರವನ್ನು ನಾನು ಹೇಗೆ ತೀರಿಸಬಲ್ಲೆನೆಂಬುದೆ ನನಗೆ ತಿಳಿಯದಾಗಿದೆ. ತಮ್ಮ ಅಪ್ಪಣೆಯಂತೆ ನಾನು ನಡೆಯಲು ಸದಾ ಸಿದ್ಧನಾಗಿದ್ದೇನೆ. ನಾಯಕಿಯ ಪಾತ್ರವನ್ನೇ ಅವಳಿಗೆ ಕೊಡುವ ನಿಶ್ಚಯವನ್ನು ತಾವು ಮಾಡಬೇಕು. ಅವಳಲ್ಲಿ ಆ ಯೋಗ್ಯತೆಯಿದೆ....' ಎಂದು ಇನ್ನೂ ಏನನ್ನೊ ಹೇಳುವವನಿದ್ದ.

'ನೀವು ನನಗೆ ಆ ವಿಷಯ ಹೇಳಬೇಕಿಲ್ಲ. ನಾನೂ ಸಾಕಷ್ಟು ವಿಚಾರ ಮಾಡಿದ್ದೇನೆ' ನಿರೀಕ್ಷಣೆಯನ್ನೂ ಮಾಡಿದ್ದೇನೆ. ಶ್ರೀಕಾಂತರ ಅಭಿಪ್ರಾಯ ಕೂಡ ಹೀಗೆಯೆ ಇದೆ. ನಾವು ಈಗ ಕೈಕೊಂಡಿರುವುದು ಸಾಮಾಜಿಕ ಚಿತ್ರ. ಅದರಲ್ಲಿ ಸ್ವಾಭಾವಿಕವಾದ ಅಭಿನಯವು ಬೇಕು. ಕಮಲೆಗೆ ನಾಯಕಿಯ ಪಾತ್ರ ಕೊಡಬೇಕೆಂದು ಅನೇಕರ ಮತವಿದೆ. ಅವಳ ಅಭಿನಯವು ಆಕರ್ಷಕವಾಗುವುದರಲ್ಲಿ ಸಂದೇಹವಿಲ್ಲ; ಆದರೆ ಅದು ವೇಶ್ಯೆಯ ಅಭಿನಯವಾಗಿ ಪರಿಣಮಿಸುವ ಭಯವಿದೆ. ತಾರಿಣಿದೇವಿಯವರಿಗೆ ನಾಯಕನ ಗೃಹಿಣಿಯ ಪಾತ್ರವನ್ನು ಕೊಡಬೇಕೆಂದಿದೆ. ಅವರು ಶುದ್ಧ ಭಾರತೀಯ ಸ್ತ್ರೀತ್ವದ ಪವಿತ್ರ ಕಲ್ಪನೆಯನ್ನು ತಂದು ಕೊಡಬಲ್ಲರು ಎಂದೇ ಅವರಿಗೆ ನಾಯಕಿಯ ಪಾತ್ರವನ್ನು ಕೊಡಬೇಕೆಂದಿದ್ದೇನೆ. ಅವರ ಮೋರೆಯನ್ನು ನೋಡಿದಾಗಲೆಲ್ಲ ನನ್ನಲ್ಲಿ ಇದೇ ಕಲ್ಪನೆಯುಂಟಾಗುತ್ತದೆ' ಎಂದು ಹೇಳಿದರು ರಾಯರು. ಈ ಬಗೆಯಾಗಿ ಮಾತನಾಡುವುದು, ತಾರಿಣಿದೇವಿಯನ್ನು ಬಾಯಿ ತುಂಬ ಹೊಗಳುವುದು ಸರಿಯಲ್ಲ ಎಂದು ಮೊದಲಿಗೆ ಸ್ವಲ್ಪ ಅನುಮಾನಿಸಿದರು. ಆದೂ ಶಾಮನ ಸರಳ ಸ್ವಭಾವವನ್ನು ನೆರೆನಂಬಿ ಹೃದಯವನ್ನೆ ಬಿಚ್ಚಿಟ್ಟುಬಿಟ್ಟರು.

'ತಾವು ಡೈರೆಕ್ಟರರು. ಈ ವಿಷಯಗಳೆಲ್ಲ ನನ್ನಕಿಂತಲೂ ತಮಗೆ ಹೆಚ್ಚು ಚೆನ್ನಾಗಿ ತಿಳಿಯುವವು. ಅವಳ ಯೋಗ್ಯತೆಯ ವಿಷಯ ನಾನೇನಾದರೂ ಹೇಳಿದರೆ ತಮ್ಮಲ್ಲಿ ತಪ್ಪುಕಲ್ಪನೆಯುಂಟಾಗಬಹುದು ಎಂದು....' ಈಗಲೂ ಶಾಮನು ಮಾತನ್ನು ಪೂರ್ತಿಗೊಳಿಸಲು ರಾಯರು ಬಿಡಲಿಲ್ಲ.

'ಸರಿ ಸರಿ. ಅದರಲ್ಲಿ ಏನೂ ತಪ್ಪಿಲ್ಲ. ಎಲ್ಲರೂ ಕೂಡಿ ಚಿತ್ರವನ್ನು ಯಶಸ್ವಿಯಾಗಿ ಮಾಡಬೇಕಾಗಿದೆ. ನಾಳೆನಿಂದ ರಿಹರ್ಸಲ್ಲು

ಪ್ರಾರಂಭವಾಗುವುದು. ಇಗೋ ಇದನ್ನು ತೆಗೆದುಕೊಳ್ಳಿ. ನಾಯಕಿಯ ಪಾತ್ರದ ಮಾತು, ಹಾಡು ಎಲ್ಲವನ್ನು ಇದರಲ್ಲಿ ಬರೆದಿದೆ. ನೋಡಿಕೊಳ್ಳುವುದಕ್ಕೆ ಹೇಳಿ.'

'ರಿಹರ್ಸಲ್ಲುಗಳು ನಡೆದ ಕಾಲಕ್ಕೆ ನನಗೆ ಬಿಡುವಾಗಿರುವಂತೆ ಸಮಕಲ್ ವಿಭಾಗದಲ್ಲಿ ಏರ್ಪಾಟು ಮಾಡಿಕೊಟ್ಟರೆ ತುಂಬಾ ಉಪಕಾರವಾಗುವುದು. ಅವಳೂ ಅಪರಿಚಿತಳು.' ಶಾಮನಂದ.

'ಆ ವಿಷಯವಾಗಿ ನಾನು ಈ ಮೊದಲೆ ವಿಚಾರಿಸಿದ್ದೇನೆ. ನಿಮ್ಮನ್ನು ಫೋಟೊಗ್ರಾಫರ ಎಂದು ನಿಯಮಿಸಿಕೊಂಡಿದೆ. ಸ್ಟಿಲ್ ಫೋಟೊ (Still Photo) ತೆಗೆಯುವುದು, ಎನ್‌ಲಾರ್ಜ ಮಾಡುವುದು ನಿಮ್ಮ ಕೆಲಸ. ಅದಕ್ಕಾಗಿ ಕಂಪನಿಯ ವಸತಿಗೃಹದಲ್ಲಿಯೆ ಒಂದು ಕೋಣೆಯನ್ನು ತೆರವು ಮಾಡಿಸಿ ಕೊಡುವೆವು. ಅದನ್ನೆ ಡಾರ್ಕ ರೂಮು ಮಾಡಿಕೊಂಡು ಬಿಡಿ....'

ಶಾಮನಿಗೆ ಕೃತಜ್ಞತೆಯಿಂದ ಕುತ್ತಿಗೆ ಶಿರಗಳು ಉಬ್ಬಿಬಂದವು.

## ೧೦

ದಿನಾಲು ಬೆಳಗಿನಲ್ಲಿ ಸೂಸಿಯ ಗಾಯನದ ಪಾಠ ನಡೆಯುತ್ತಿತ್ತು. ಸಂಗೀತ ನಿರ್ದೇಶಕರ ನೇತೃತ್ವದಲ್ಲಿ ಶಂಕರಬುವಾ ಅವರು ಬಹಳ ದಕ್ಷತೆಯಿಂದ ಪಾಠ ಹೇಳಿಕೊಡುತ್ತಿದ್ದರು. ಸೂಸಿಗಾದರೂ ಗಾಯನ ಕಲಿಯಬೇಕೆಂದರೆ ತುಂಬಾ ಆಸೆ. ಅವರು ಹೇಳಿದುದನ್ನು ಕೂಡಲೆ ಕಲಿತುಕೊಳ್ಳುತ್ತಿದ್ದಳು. ಸ್ವಭಾವತಃ ಹಾಡಿಕೆಯಲ್ಲಿ ಆಸಕ್ತಿಯಿದ್ದುದರಿಂದ ಅವಳಿಗೆ ಏನೂ ಕಷ್ಟವೆನ್ನಿಸುತ್ತಿರಲಿಲ್ಲ. ಮುಖ್ಯವಾಗಿ ಅವಳಿಗೆ ಬೇಕಾದದ್ದು ತಾಳಜ್ಞಾನ. ಬುವಾ ಸಾಹೇಬರ ವೇಳೆಯ ಬಹು ಭಾಗವು ಅವಳಿಗೆ ತಾಳಜ್ಞಾನ ಮಾಡಿಕೊಡುವುವರಲ್ಲಿಯೇ ಕಳೆಯಿತು.

ಸೂಸಿಯು ಗಾಯನದಲ್ಲಿ ಪ್ರಗತಿಯನ್ನು ಹೊಂದುತ್ತಲೂ ಬುವಾ ಸಾಹೇಬರಿಗೆ ದೊಡ್ಡದೊಂದು ಬಹುಮಾನವೂ ದೊರೆಯುವದಿತ್ತು. ಅದಕ್ಕಾಗಿ ಬುವಾ ಸಾಹೇಬರು ಯಾರ ವಿಷಯದಲ್ಲಿಯೂ ತೋರಿಸದ ದಕ್ಷತೆಯನ್ನು ಇವಳ ವಿಷಯದಲ್ಲಿ ತೋರಿಸುತ್ತಿದ್ದರು. ಪ್ರತಿನಿತ್ಯ ಬೆಳಗಿನ ಪಾಠವಂತೂ ಸರಿಯೆ, ಅದಲ್ಲದೆ ಒಂದೆರಡು ಸಲ ಸೂಸಿಯ ಕೋಣೆಯವರೆಗೆ ಬಂದು ಬೇರೆ ಯಾವುದಾದರೂ ಒಂದೆರಡು ಚೀಜುಗಳನ್ನು ಅಂದು ತೋರಿಸಿ ಅವಳಿಂದ ಅವುಗಳನ್ನು ಅನ್ನಿಸಿಕೊಂಡು ಹೋಗುತ್ತಿದ್ದರು. ಈ ಬಗೆಯ ಚಿಕ್ಕ ಪಾಠಗಳೂ ತಪ್ಪದೇ ನಡೆಯುತ್ತಿದ್ದವು.

ಡೈರೆಕ್ಟರರು ಮನಸ್ಸಿನ ಮೇಲೆ ತೆಗೆದುಕೊಂಡಿರುವಾಗ ಯಾವುದೂ ಕಷ್ಟಸಾಧ್ಯವಲ್ಲ. ಅದರಲ್ಲಿಯೂ ಉಮಾಪತಿರಾಯರು ಇತರರಿಂದ ಕೆಲಸ ಮಾಡಿಸಿಕೊಳ್ಳುವುದರಲ್ಲಿ ಒಳ್ಳೆ ಜಾಣರು. ಒಂದೆರಡು ದಿನಗಳ ಪರಿಚಯದಿಂದಲೆ ಜನರ ಮನವನ್ನು ತಿಳಿದುಕೊಂಡು ಅವರ ಬೆಲೆ ಕಟ್ಟಿಕೊಳ್ಳುವರು.

ಅದಕ್ಕೆ ಸರಿಯಾಗುವ ರೀತಿಯಲ್ಲಿ ಅವರ ಸಂಗಡ ವರ್ತನೆಯನ್ನಿಟ್ಟುಕೊಳ್ಳು ವರು. ತಮ್ಮ ಕಾರ್ಯವನ್ನು ಸಾಧಿಸಿಕೊಳ್ಳದೆ ಅವರು ಎಂದಿಗೂ ಬಿಡು ತ್ತಿರಲಿಲ್ಲವಾದರೂ ಅವರ ವಿಷಯಕ್ಕೆ ಯಾರಲ್ಲಿಯೂ ತಪ್ಪು ಕಲ್ಪನೆಯಾಗು ತ್ತಿರಲಿಲ್ಲ.

ಸಾಯಂಕಾಲ ಅಭಿನಯದ ರಿಹರ್ಸಲ್ಲು ಕಂಪನಿಯ ಮನೆಯ ಅಟ್ಟದ ಮೇಲಿನ ರಂಗಸ್ಥಳದಲ್ಲಿ ನಡೆಯುತ್ತಿತ್ತು. ಬೆಳಗಿನಿಂದ ಮಧ್ಯಾನ್ಹದ ಉಪ ಹಾರದ ವರೆಗೆ ಹಾಡಿಕೊಂಡು ಸಂತೋಷವಾಗಿಯೆ ಇರುತ್ತಿದ್ದಳು ಸೂಸಿ. ಸಾಯಂಕಾಲ ನಾಲ್ಕು ಗಂಟೆಗೆ ರಿಹರ್ಸಲ್ಲಿನ ವೇಳೆಯಾಯಿತೆಂದರೆ ಜೋಲು ಮುಖ ಹಾಕಿಕೊಂಡು ಕುಳಿತುಕೊಳ್ಳುತ್ತಿದ್ದಳು. ಎಲ್ಲರ ಎದುರಿನಲ್ಲಿ ನಿಲ್ಲ ಬೇಕೆಂದರೆ ಅವಳಿಗೆ ಸಂಕೋಚ. ಎಲ್ಲರೂ ತನ್ನನ್ನೆ ದಿಟ್ಟಿಸುತ್ತಿರುವಾಗ ಕೈಕಾಲುಗಳನ್ನು ಹೊರಳಿಸುತ್ತ ಅಭಿನಯಿಸಬೇಕೆಂದರೆ ಅವಳ ಜೀವದ ಸುತ್ತೆ ಬಂದಂತಾಗುತ್ತಿತ್ತು.

ಡೈರೆಕ್ಟರರೆ ಸ್ವತಃ ಸಿಫಾರಸುಮಾಡಿ ಕರೆದುಕೊಂಡು ಬಂದ ಹೊಸ ನಟಿಯ ಅಭಿನಯ ಚಾತುರ್ಯವನ್ನು ನೋಡಲು ರಿಹರ್ಸಲ್ಲಿಗೆ ಸಂಬಂಧ ಪಡದ ಕೆಲವರೂ ಬಂದು ಕುಳಿತುಕೊಳ್ಳುತ್ತಿದ್ದರು. ರಿಹರ್ಸಲ್ಲಿಗೆ ಸಂಬಂಧ ಪಡದವರಾದರೂ ಅವರೆಲ್ಲರೂ ಒಂದಿಲ್ಲ ಒಂದು ಬಗೆಯಿಂದ ಕಂಪನಿಗೆ ಸಂಬಂಧ ಪಟ್ಟವರೆ. ಅವರೆಲ್ಲರ ಎದುರಿನಲ್ಲಿ ಸೂಸಿ ಅಭಿನಯಿಸಬೇಕು. ಎದ್ದು ನಿಂತರೆ ಕಾಲುಗಳು ನಡುಗುತ್ತಿದ್ದವು. ತನ್ನ ಮಾತುಗಳನ್ನು ಬರೆದ ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು ಓದುವುದಕ್ಕೂ ಅವಳ ಕಡೆಯಿಂದ ಆಗುತ್ತಿರಲಿಲ್ಲ. ಒಂದು ವಾಕ್ಯಕ್ಕೆ ಆರು ಸಲ ಉಗುಳು ನುಂಗಬೇಕಾಗು ತ್ತಿತ್ತು.

ಸೂಸಿಗೆ ಈ ಪಾತ್ರ ಕೊಟ್ಟದ್ದು ಕೆಲವರ ಮನಸ್ಸಿಗೆ ಬಂದಿರಲಿಲ್ಲ. ಹೊಸಬಳಿಗೆ ಒಮ್ಮೆಲೆ ಇಷ್ಟೊಂದು ಪ್ರಾಶಸ್ತ್ಯವನ್ನು ಕೊಡುವುದು ಬೇಡ. ಯಾವುದಾದರೂ ಚಿಕ್ಕ ಪಾತ್ರ ಕೊಟ್ಟರೆ ಸಾಕು ಎಂದು ಅಭಿಪ್ರಾಯಪಟ್ಟಿ ದ್ದರು. ಅವರಿಗೆಲ್ಲರಿಗೂ ಸೂಸಿಯ ಈ ವರ್ತನವು ಇನ್ನಿಷ್ಟು ಬಲಕೊಟ್ಟಿತು. ಹಿಂದೆ ಮುಂದೆ ರಾಯರನ್ನು ಆಡಿಕೊಳ್ಳಲು ಪ್ರಾರಂಭಿಸಿದರು.

ಕಮಲೆಯ ತಾಯಿಯ ಬಾಯಿಯನ್ನಂತೂ ಯಾರೂ ಹಿಡಿಯ ದಂತಾಯಿತು. ಈ ಚಿತ್ರದಲ್ಲಿ ಕಮಲೆಗೇ ನಾಯಕಿಯ ಪಾತ್ರ ಕೊಡುವು ದೆಂದು ಮೊದಲು ನಿಷ್ಕರ್ಷೆಯಾಗಿತ್ತು. ಆದರೆ ಡೈರೆಕ್ಟರರು ತಮ್ಮ ಮೇಲೆಯೆ ಎಲ್ಲ ಭಾರವನ್ನು ವಹಿಸಿಕೊಂಡು ತಾರಿಣಿದೇವಿಗೆ ನಾಯಕಿಯ ಪಾತ್ರ ಕೊಟ್ಟಿದ್ದರು. ಕಮಲೆ ಹಾಗು ಅವಳ ತಾಯಿ ಆ ಸಿಟ್ಟಿನಿಂದ, ಆ ಅಪಮಾನದಿಂದ ಕುದಿಯುತ್ತಿದ್ದರು. ಈಗ ಅವರಿಗೆ ಹಿಡಿಸಲಾರದಷ್ಟು ಸಂತೋಷವಾಯಿತು. ರಿಹರ್ಸಲ್ಲು ನಡೆದಾಗಲೆ ಸೀರೆಯ ಮುಸುಕಿನಲ್ಲಿ ನಗುವುದಕ್ಕೆ ಪ್ರಾರಂಭಿಸಿದರು.

ಡೈರೆಕ್ಟರರು ಮಾತ್ರ ನಿರಾಶರಾಗಲಿಲ್ಲ. ಮಾತು ಇನ್ನೂ ಸರಿಯಾಗಿ ಬಾಯಿಪಾಠ ಬರುವುದಿಲ್ಲ. ಸರಿಯಾಗಿ ಬಾಯಿಗೆ ಬಂದನಂತರ ಈ ಹೆದರಿಕೆ, ನಾಚಿಕೆ ತಾನಾಗಿಯೆ ಕಡಿಮೆಯಾಗುವುದು ಎಂದೇ ಭಾವಿಸಿದರು. 'ತಾರಿಣಿ ದೇವಿಯವರೆ ಮಾತುಗಳನ್ನು ಸರಿಯಾಗಿ ನೋಡಿಕೊಂಡು ಬರಬೇಕು' ಎಂದು ರಿಹರ್ಸಲ್ಲಿನ ನಂತರ ದಿನಾಲು ಹೇಳಿಕಳಿಸುತ್ತಿದ್ದರು.

ಹೀಗೆಯೆ ಒಂದು ವಾರ ಕಳೆಯಿತು. ಸೂಸಿಯಲ್ಲಿ ಯಾವ ಬಗೆಯ ವಿಶೇಷ ಬದಲಾವಣೆಗಳೂ ಕಂಡು ಬರಲಿಲ್ಲ. ಪ್ರಾರಂಭದಿಂದ ಕೊನೆಯ ವರೆಗೆ ರಂಗಸ್ಥಳದ ಒಂದು ಮೂಲೆಯಲ್ಲಿ ಕಂಬದಂತೆ ಕೈಕಟ್ಟಿ ನಿಂತುಕೊಂಡೆ ಮಾತನಾಡುತ್ತಿದ್ದಳು. 'ಸ್ವಲ್ಪ ಮುಂದಕ್ಕೆ ಬನ್ನಿರಿ ತಾರಿಣಿದೇವಿಯವರೆ' ಎಂದು ಉಮಾಪತಿರಾಯರು ಹೇಳುತ್ತಲೂ ಎರಡು ಹೆಜ್ಜೆ ಮುಂದಕ್ಕೆ ಬರುವಳು. 'ಹಾಗೆ ಕೈ ಕಟ್ಟಿಕೊಂಡು ನಿಲ್ಲ ಬೇಕಾಗಿಲ್ಲ' ಎನ್ನುತ್ತಲೂ ಕೈಗಳನ್ನು ಕೆಳಗೆ ಬಿಡುವಳು. 'ಎಲ್ಲಿಯವರೆಗೆ ಹೀಗೆ ಪುಸ್ತಕ ಹಿಡಿದು ಕೊಂಡೆ ಮಾತನಾಡುವಿರಿ. ಆ ಪುಸ್ತಕ ಬಿಟ್ಟು ಹಾಗೆಯೆ ಮಾತನಾಡಿರಿ, ತಪ್ಪಿದಲ್ಲಿ ಹಿಂದಿನಿಂದ ಹೇಳಿಕೊಡುವರು' ಎಂದು ರಾಯರು ಹೇಳುತ್ತಲೂ ಸುಮ್ಮನೆ ತಲೆಬಾಗಿಸಿ ನಿಂತುಕೊಂಡು ಬಿಡುವಳು.

'ನೀವು ಮಾತು ಕಲಿತುಕೊಂಡು ಬರದಿದ್ದರೆ ನಾನಾದರೂ ಏನು ಮಾಡಲಿ?' ಎಂದು ಉಮಾಪತಿರಾಯರು ಬೇಸರದಿಂದ ಹೇಳಿದರು.

ಸೂಸಿ ನಿಜವಾಗಿಯೂ ಮನೆಯಲ್ಲಿ ಮಾತುಗಳನ್ನು ಚೆನ್ನಾಗಿ ಗಟ್ಟಿ ಮಾಡಿಕೊಂಡು ಬಂದಿದ್ದಳು. ರಂಗಸ್ಥಳವನ್ನೇರುತ್ತಲೂ ಎಲ್ಲ ಮಾತುಗಳೂ ಮರತೇಹೊಗುತ್ತಿದ್ದವು.

'ಶಾಮರಾವ್ ! ನೀವಾದರೂ ಹೇಳಿರಿ ಮಾತು ಕಲಿಯುವುದಕ್ಕೆ' ಎಂದರು ರಾಯರು.

'ಬೆಳಗಿನಿಂದ ಪಾಠ ಮಾಡುತ್ತಲೆ ಇದ್ದಳು' ಎನ್ನುತ್ತ ಶಾಮನು ಸೂಸಿಯು ಬಳಿಗೆ ಹೋದ.

'ಎಲ್ಲಿ, ಪುಸ್ತಕವನ್ನು ನನ್ನ ಕೈಯಲ್ಲಿ ಕೊಡು. ಧೈರ್ಯವಾಗಿ ಮಾತನಾಡು. ತಪ್ಪಿದಲ್ಲಿ ನಾನು ಹೇಳಿಕೊಡುತ್ತೇನೆ' ಎಂದು ಅವಳ ಬಳಿಯಲ್ಲಿಯೆ ನಿಂತುಕೊಂಡ. ಹರಕು ಮುರಕಾಗಿ ಅವಳಿಂದ ಕೆಲವು ಮಾತುಗಳನ್ನು ಆಡಿಸಿದ. ಅಂದಿನ ರಿಹರ್ಸಲ್ಲು ಅಷ್ಟಕ್ಕೆ ಪೂರ್ತಿಯಾಯಿತು.

ಡೈರೆಕ್ಟರರ ವರ್ತನೆಯು ಜನರಿಗೆ ಬೇಸರವಾಗತೊಡಗಿತು. ಎಲ್ಲರ ಸಂಗಡಲೂ ನಿಷ್ಠುರವಾಗಿ ವರ್ತಿಸುತ್ತಿದ್ದವರು ತಾರಿಣಿದೇವಿಗೆ ಇಷ್ಟೊಂದು ರಿಯಾಯತಿಯನ್ನು ಏಕೆ ತೋರಿಸುತ್ತಲಿದ್ದಾರೆ ಎಂಬುದು ಎಲ್ಲರಿಗೂ ಸಮಸ್ಯೆಯಾಯಿತು. ಗುಸುಗುಸು ಮಾತೂ ಕಡೆಗೆ ಪ್ರಾರಂಭವಾಯಿತು. ಕಣ್ಣು ಚಿವುಟಿ ಮಾತನಾಡತೊಡಗಿದರು. ಏನೋ ವಿಶೇಷವಿರಬೇಕು ಎಂಬ ತೀರ್ಮಾನಕ್ಕೆ ಬಂದರು

ಕಂಪನಿಯ ಒಡೆಯರ ವರೆಗೆ ಈ ವಿಷಯ ಹೋಯಿತು. ರಾಯರನ್ನು ಅವರು ಒಂದು ಸಲ ಕರೆದು ಎಲ್ಲ ಸಮಾಚಾರ ತಿಳಿದುಕೊಂಡರು 'ಹೊಸ ಬಳು, ಅನುಭವವಿಲ್ಲ; ಆದರೂ ದಿನ ದಿನಕ್ಕೆ ಪ್ರಗತಿಯಾಗುತ್ತಲಿದೆ, ನೀವೇನು ಯೋಚಿಸಬೇಕಾದ್ದಿಲ್ಲ' ಎಂದು ರಾಯರು ಯಜಮಾನರೊಡನೆ ಮೋರೆಯ ಮೇಲೆ ಕೈಯೆಳೆದಂತೆ ಮಾತನಾಡಿ ಬಂದರು.

ನಾಯಕನ ಪಾತ್ರ ವಹಿಸಿದ ಮಾಧವನಂತೂ ತಪ್ತನಾಗಿದ್ದ. ಅವನು ಮೊದಲಿಸಿಂದಲೂ ಕಮಲೆಯು ನಾಯಕಿಯಾಗಲು ಯೋಗ್ಯಳು ಎಂದು ಹೇಳುತ್ತಲಿದ್ದ. ಹಾಗೆ ಹೇಳಿದಾಗಲೆಲ್ಲ ಕಮಲೆಯು ಸಂತಸದ ಕಿರುನಗೆ

ಯನ್ನು ಬೀರುತ್ತಿದ್ದಳು. ಅವರು ತಮ್ಮ ಮನೋರಾಜ್ಯದಲ್ಲಿ ನಾಯಕ ನಾಯಕಿಯರಾಗಿ ಅದೆಷ್ಟೋ ಸಲ ವಿಹರಿಸಿದ್ದರು. ಈ ಸಾಮಾಜಿಕ ಚಿತ್ರವನ್ನು ತೆಗೆದುಕೊಳ್ಳುತ್ತಲೂ ತಮ್ಮ ಆಸೆ ಈಡೇರುವ ಕಾಲವು ಬಂದಿತು ಎಂದು ಭಾವಿಸಿದ್ದರು. ತಾರಿಣಿದೇವಿಯು ಬರದಿದ್ದರೆ ನಿಜವಾಗಿಯೂ ಅವರ ಆಸೆ ಈಡೇರುತ್ತಿದ್ದಿತು. ಇವಳು ಬಂದುದು ಅವರಿಗೆ ಕಾಲ್ತೊಡಕಾಯಿತು.

ತಾರಿಣಿದೇವಿಗೆ ನಾಯಕಿಯ ಪಾತ್ರವನ್ನು ಕೊಟ್ಟಿದೆ ಎಂಬ ಸಮಾಚಾರವು ತಿಳಿದ ದಿನ ಕಮಲೆಯು ಸರಿಯಾಗಿ ಎರಡು ತಾಸು ಒಂದೇ ಸವನೆ ಕಣ್ಣೀರು ಹಾಕಿದಳು. ಮಾಧವನಿಗೆ ಬಹಳ ಕಸವಿಸಿಯಾಯಿತು. ನಾಲ್ಕೈದು ವರ್ಷಗಳಿಂದ ಅವನಿಗೆ ಕಮಲೆಯ ಪರಿಚಯವಿದ್ದರೂ, ಒಂದೆರಡು ವರ್ಷಗಳಿಂದ ಪರಿಚಯವು ಹೆಚ್ಚು ಗಾಢವಾಗಿದ್ದರೂ ಅವಳು ಕಣ್ಣೀರು ಹಾಕಿದ್ದನ್ನು ಅವನು ಎಂದೂ ನೋಡಿರಲಿಲ್ಲ. ಒಳ್ಳೇ ಕಲ್ಲು ಮನಸ್ಸಿನವಳು ಎಂದುಕೊಂಡಿದ್ದ. ಹೀಗಿದ್ದವಳು ಹೆಣ್ಣಿಗಿಂತಲೂ ಹೆಣ್ಣಾಗಿ ಅಂದು ಕಣ್ಣೀರಿಟ್ಟಳು. ಸಿನೇಮಾ ಎಂದರೇನು, ಹಾಡುಗಾರಿಕೆ ಎಂದರೇನು, ಅಭಿನಯವೆಂದರೇನು ಎಂಬುದರ ಗಂಧವೂ ಇಲ್ಲದವಳನ್ನು ತಂದು ನಾಯಕಿಯನ್ನಾಗಿ ಮಾಡುವುದೆಂದರೆ! ಅದೂ ಸಿನೇಮಾ ಪ್ರಪಂಚದಲ್ಲಿ ನುರಿತು ಹೆಸರುವಾಸಿಯಾದ ಕಮಲೆಯಂತಹ ಹುಡುಗಿಯನ್ನು ನಿರಾಕರಿಸಿ! ಈ ಅಪಮಾನವನ್ನು ಅವಳು ಹೇಗೆ ಸಹಿಸಿಕೊಳ್ಳಬೇಕು? ಮೊದಲು ಎರಡು ದಿನ ಅವಳು ಊಟವನ್ನು ಮಾಡಲಿಲ್ಲ. ಮುಂದಿಗೆ ಮುಖ ತೋರಿಸುವುದಕ್ಕೂ ಅವಳಿಗೆ ನಾಚಿಕೆಯಾಯಿತು.

ಇದೀಗ ಅವರ ಕಂದಿದ ಆಶಾಲತೆಯು ಪುನಃ ಚಿಗುರುತ್ತಲಿತ್ತು. ಡೈರೆಕ್ಟರರು ತಾರಿಣಿದೇವಿಯ ಗುಣ ಯೋಗ್ಯತೆಗಳ ವಿಷಯ ಮಾತನಾಡುವಾಗ ಗುಡ್ಡವನ್ನೆ ತಂದಿಟ್ಟಂತೆ ವರ್ಣಿಸುತ್ತಿದ್ದರು. ಈ ಮೂರು ವಾರಗಳ ಅನುಭವದಿಂದ ಅವರ ಬಾಯಿಗೆ ಬೀಗ ಬಿದ್ದಿತು. ಅವರೂ ಸಂದೇಹಕ್ಕೀಡಾಗಿದ್ದರು.

'ತಾರಿಣಿದೇವಿಯು ಬಗ್ಗೆ ನಾನಾದರೂ ಇಷ್ಟು ಅಭಿಮಾನವನ್ನು ಏಕೆ ತಾಳಬೇಕು? ಎಲ್ಲರಿಂದಲೂ ಒಂದೊಂದು ಮಾತನ್ನು ಏಕೆ ಆಡಿಸಿಕೊಳ್ಳ

ಬೇಕು. ಅವಳಿಂದ ನನಗೇನಾಗಬೇಕಾಗಿದೆ? ಅವಳಿಗಾಗಿ ನಾನು ಇಷ್ಟು ಶ್ರಮವನ್ನಾದರೂ ಏಕೆ ವಹಿಸಬೇಕು? ಅಪಶಬ್ದ, ಅಪಮಾನಗಳನ್ನು ಸಹಿಸಿಕೊಳ್ಳಬೇಕು? ಅವಳು ಒಳ್ಳೆ ನಟಿಯಾದರೆ, ಕೀರ್ತಿಯನ್ನು ಸಂಪಾದಿಸಿದರೆ ನನಗೆ ದೊರೆಯುವ ಸಾಮ್ರಾಜ್ಯವೂ ಅಷ್ಟರಲ್ಲಿಯೆ ಇದೆ.

' ಆದರೆ ಏಕೊ ಅವಳನ್ನು ಕಂಡರೆ ನನಗೊಂದು ಅಭಿಮಾನ. ಅವಳ ಕಂಠ ಚನ್ನಾಗಿದೆ ಎಂದರೆ ನನಗೆ ಸಂತೋಷವಾಗುವುದು. ಪಾಪ, ಅವಳಿಗೆ ಅಭಿನಯವೆಂದರೇನೆಂಬುದೇ ಗೊತ್ತಿಲ್ಲವೆನ್ನುತ್ತಲೂ ನನ್ನ ಮುಖವು ಸಪ್ಪಗಾಗುವುದು. ಹೀಗೆ ಮಾತನಾಡುವವರ ಮುಖದ ಮೇಲೆ ನೀರು ಇಳಿಯುವಂತೆ ಮಾಡಬೇಕು ಎನ್ನಿಸುವುದು.

' ನಾನು ದುರಭಿಮಾನಿಯಲ್ಲ. ಇಲ್ಲದ ಯೋಗ್ಯತೆಯನ್ನು ನಾನು ಅವಳಲ್ಲಿ ಆರೋಪಿಸುತ್ತಿಲ್ಲ. ಅವಳಲ್ಲಿ ಯೋಗ್ಯತೆ ಇದೆ ಎಂದೇ ಅವಳಲ್ಲಿ ಅಭಿಮಾನ ತಾಳಿದ್ದೇನೆ. ಅವಳಿಂದ ನಮ್ಮ ಚಿತ್ರಕ್ಕೆ ಕಳೆ ಬರುವುದು ಎಂದು ನನಗೆ ಈಗಲೂ ಅನ್ನಿಸುತ್ತಲಿದೆ. ಅವಳು ಮನಸ್ಸು ಮಾಡಿದರೆ ಚನ್ನಾಗಿ ಅಭಿನಯಿಸಬಲ್ಲಳು ಕಮಲೆಯಕಿಂತಲೂ ಸಾವಿರ ಪಾಲು ಚನ್ನಾಗಿ ಅಭಿನಯಿಸಬಲ್ಲಳು. ಅವಳ ಈ ಸಂಕೋಚವೃತ್ತಿಯನ್ನು ಹೇಗೆ ತೆಗೆದು ಹಾಕುವುದು ? '

ರಾಯರು ಒಳ್ಳೇ ತೊಂದರೆಯಲ್ಲಿ ಬಿದ್ದಿದ್ದರು. ತಾರಿಣಿದೇವಿ ಬಂದಾಗಿನಿಂದ ಕಮಲೆಯ ಸಂಗಡ ಸರಿಯಾಗಿ ಒಮ್ಮೆಯೂ ಮಾತನಾಡಿರಲಿಲ್ಲ. ಈಗ ಒಮ್ಮೆಲೆ ಅವಳನ್ನು ಮಾತನಾಡಿಸಿದರೆ ಅವಳೆಲ್ಲಿ ತಪ್ಪು ತಿಳಿದುಕೊಳ್ಳುವಳೊ ಎಂದು ಸಂದೇಹ. ಉಪಚಾರದ ಮಾತುಗಳನ್ನಾದರೂ ಪ್ರಾರಂಭಿಸಬೇಕು ಎಂದುಕೊಂಡರು. ರಿಹರ್ಸಲ್ಲಿಗೆ ಬಂದ ಕಾಲಕ್ಕೆ 'ಚನ್ನಾಗಿದ್ದೀರಾ? ' 'ಕಾಫಿ ಆಯಿತೆ ? ' 'ಊಟವಾಯಿತೆ ? ' ಮೊದಲಾದ ಮಾತು ಕತೆಗಳನ್ನಾರಂಭಿಸಿದರು. ಪ್ರಸಂಗ ಹೇಗೆ ಬರುವದೊ ಹೇಳಲಿಕ್ಕಾಗುವುದಿಲ್ಲ, ನಮ್ಮ ಸಿದ್ಧತೆಯಲ್ಲಿಯೆ ನಾವು ಇರಬೇಕು ಎಂದುಕೊಂಡರು.

ಒಂದು ದಿನ ರಿಹರ್ಸಲ್ಲಿನ ನಂತರದಲ್ಲಿ ಮಾಧವನು ರಾಯರಿಗೆ 'ತಮ್ಮ ಸಂಗಡ ಸ್ವಲ್ಪ ಮಾತನಾಡುವುದಿತ್ತು' ಎಂದ.

ರಾಯರಿಗೆ ಸಂದರ್ಭ ತಿಳಿಯಿತು. 'ಆಗಬಹುದು. ಬನ್ನಿ ರಿ ತೋಟದ ಕಡೆ ಹೋಗೋಣ' ಎಂದು ತೋಟದ ಕಡೆ ಮಾಧವನನ್ನು ಕರೆದುಕೊಂಡು ಹೊರಟರು.

'ತಾವು ಏನೇನೊ ಹೇಳುವಿರಿ ಎಂದು ನಾನು ಈವರೆಗೆ ಸುಮ್ಮನಿದ್ದೆ. ವಿಷಯವು ಅಸಹನೀಯವಾದುದರಿಂದ ಎರಡು ಮಾತನಾಡಬೇಕೆನ್ನುತ್ತೇನೆ. ತಾವು ತಪ್ಪು ತಿಳಿದುಕೊಳ್ಳುವುದಿಲ್ಲವಷ್ಟೆ?' ಮಾಧವನು ಮಾತು ಪ್ರಾರಂಭಿಸಿದ.

'ತಪ್ಪು ತಿಳಿದುಕೊಳ್ಳುವುದಕ್ಕೇನೂ ಕಾರಣವಿಲ್ಲ. ತಮ್ಮ ಅಭಿಪ್ರಾಯವನ್ನು ತಾವು ಸಂಕೋಚ ಪಟ್ಟುಕೊಳ್ಳದೆ ಹೇಳಬಹುದು' ಎಂದರು ರಾಯರು.

'ರಿಹರ್ಸಲ್ಲು ಪ್ರಾರಂಭವಾಗಿ ಇಂದಿಗೆ ಮೂರು ವಾರವಾಯಿತು. ಹೀಗೆಯೆ ನಡೆದರೆ ಹೇಗೆ?' ಈ ಮೊದಲೇ ಅನೇಕ ಸಲ ಈ ವಿಷಯ ಚರ್ಚಿಸಿದ್ದರಿಂದ ಮತ್ತೆ ಅದೇ ಮಾತು ಪ್ರಾರಂಭಿಸಲು ರಾಯರೆಲ್ಲಿ ಬೇಸರ ಪಟ್ಟುಕೊಳ್ಳುವರೊ ಎಂದು ಒಮ್ಮೆಲೆ ವಿಷಯಕ್ಕೆ ಬರಲು ಅನುಮಾನಿಸಿದ.

'ನಾನೂ ಅದೇ ಯೋಚನೆಯಲ್ಲಿದ್ದೇನೆ. ತಾರಿಣಿದೇವಿಯವರು ಚನ್ನಾಗಿ ತಿಳಿದುಕೊಂಡು ಅಭಿನಯಿಸಬೇಕು. ಅವರು ಮನಸ್ಸಿನ ಮೇಲೆ ತೆಗೆದುಕೊಳ್ಳಲೊಲ್ಲರು....'

'ಅಂಥವರೊಡನೆ ನಾನು ಹೇಗೆ ಅಭಿನಯಿಸಬೇಕು? ಯಾವಾಗಲೂ ಮೋರೆಯನ್ನು ಕೆಳಗೆಮಾಡಿಕೊಂಡೇ ಮಾತನಾಡುವರು. ಅಪ್ಪಿ ತಪ್ಪಿ ಯಾವಾಗಲಾದರೂ ಮೋರೆ ಮೇಲಕ್ಕಾದರೆ ಅದು ಶಾಮರಾಯರ ಕಡೆಗೊ ಅಥವಾ ತಮ್ಮ ಕಡೆಗೊ ಹೊರಳುವುದು. ಇಷ್ಟು ದಿವಸಗಳಲ್ಲಿ ಅವರು ಒಂದು ಸಲವೂ ನನ್ನ ಕಡೆ ಮೋರೆ ಮಾಡಿರುವುದಿಲ್ಲ.'

'ಅಹುದು. ನಾನು ದಿನಾಲು ನೋಡುತ್ತಲೇ ಇದ್ದೇನೆ.'

'ನಾನು ಮತ್ತೊಮ್ಮೆ ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ. ದಯ ವಿಟ್ಟು ಕಮಲೆಗೆ ಈ ಪಾತ್ರವನ್ನು ಕೊಟ್ಟು ಬಿಡಿರಿ. ಆವಳಿಂದ ಕೀರ್ತಿ ಬರುವುದರಲ್ಲಿ ಸಂದೇಹವಿಲ್ಲ. ಸುಮ್ಮನೆ ಪ್ರಯೋಗದಲ್ಲಿ ದಿನಗಳೆಯುವುದು ಬೇಡ.'

ಇದಕ್ಕೂ ಮೊದಲಿಗೆ ರಾಯರಿಗೆ ಈ ರೀತಿಯಲ್ಲಿ ಹೇಳುವ–ಉಪದೇಶ ಮಾಡುವ ಎದೆಗಾರಿಕೆಯು ಯಾರಿಗೂ ಇರಲಿಲ್ಲ. ಮಾಧವನಿಗೆ ಅವಕಾಶ ದೊರೆತಿದ್ದಿತು. ರಾಯರು ಮೆತ್ತಗಾಗಿದ್ದರು. ಕಮಳೆಯನ್ನು ನಾಯಕಿಯ ಪಾತ್ರವಹಿಸಲು ಕೇಳಬೇಕೆಂದಿದ್ದಾರೆ, ಆದರೆ ಕಮಲೆಯು ಏನೆಂದು ಬಿಡು ವಳೊ ಎಂದು ರಾಯರು ಅನುಮಾನದಲ್ಲಿ ಬಿದ್ದಿದ್ದಾರೆ ಎಂದೆ ಮಾಧವನಿಗೆ ಮನವರಿಕೆಯಾಯಿತು. ಕಮಲೆಯ ಸಮ್ಮತಿಯನ್ನು ಪಡೆಯುವ ಕೆಲಸ ವನ್ನು ತನಗೆ ಒಪ್ಪಿಸುವರು ಎಂಬ ವಿಶ್ವಾಸದಿಂದಲೆ ಮಾತನಾಡುತ್ತಿದ್ದ.

'ಶಾಮರಾಯರ ಸಂಗಡ ಇಂದು ಮಾತನಾಡಬೇಕೆಂದಿದ್ದೇನೆ.'

'ಈಗೆಷ್ಟು ಸಲ ಹೇಳಿ ಆಗಿದೆಯೊ. ಇನ್ನೂ ಒಂದು ಸಲ ಹೇಳಿ ನೋಡಿ. ಆದರೆ ಇದೇ ಕೊನೆಯ ಸಲ. ಇನ್ನು ಮುಂದೆಯೂ ಮತ್ತೆ ಮಾತನಾಡುವ ಪ್ರಸಂಗಗಳನ್ನಿಟ್ಟುಕೊಳ್ಳುವುದು ಬೇಡ. ತಾರಿಣಿದೇವಿಯರ ಈ ಬಗೆಯ ವರ್ತನವು ಒಳ್ಳೇ ಕುಲೀನ ಹುಡುಗಿಯದು ನಿಜ. ಮನೆ ಯಲ್ಲಿದ್ದುಕೊಂಡು ಈ ರೀತಿ ವರ್ತಿಸಿದ್ದರೆ, ಒಳ್ಳೇ ಹುಡುಗಿ, ಸಾಧು ಪ್ರಾಣಿ, ತಲೆಯ ಮೇಲಿನ ಸೆರಗು ಕೆಳಗೆ ಬೀಳಗೊಡುವುದಿಲ್ಲ, ಎಂದು ಮುದುಕಿಯ ರಿಂದ ಸಿಫಾರಸುಪತ್ರಗಳನ್ನು ಪಡೆಯಬಹುದಿತ್ತು. ಆದರೆ ಇದು ಸಿನೇಮಾ, ಅಡಿಗೆಯ ಮನೆಯಲ್ಲ ಎಂಬ ಮಾತು ಅವರಿಗೆ ಮನದಟ್ಟಾಗಬೇಕು'

'ನೀವು ಹೇಳುವುದು ತಿಳಿಯಿತು'

'ಅವರು ನಮಸ್ಕಾರ ಮಾಡುವುದನ್ನು ಕಂಡರಂತೂ ನನಗೆ ಹೊಟ್ಟೆ ಹಿಡಿಸಲಾರದಷ್ಟು ನಗು ಬರುತ್ತಿದೆ. ಆಧುನಿಕ ಸಮಾಜದ ಸುಶಿಕ್ಷಿತ ಹೆಂಡತಿಯವರು. ಕೈಯಲ್ಲಿ ಕೈ ಇಡಬೇಕು; ಬಳಿಯಲ್ಲಿ ಕುಳಿತುಕೊಳ್ಳ ಬೇಕು; ಮುಗುಳುನಗೆಯೊಡನೆ ನನ್ನ ಸಂಗಡ ಸಂತೋಷವಾಗಿ ಮಾತ ನಾಡಬೇಕು. ಇದಾವುದೂ ಅವರಲ್ಲಿ ಇಲ್ಲವೇ ಇಲ್ಲ. ರಿಹರ್ಸಲ್ಲುಗಳಿಗೆ

ಬರುವಾಗ ಅದೆಷ್ಟೋ ಉತ್ಸಾಹದಿಂದ ಬರುತ್ತೇನೆ. ಆ ಮಹಾರಾಯಳ ದೀನ ಮುಖವನ್ನು ನೋಡುತ್ತಲೆ ನನ್ನ ಉತ್ಸಾಹವೆಲ್ಲ ಕುಗ್ಗುತ್ತದೆ. ನಿಂತ ಸ್ಥಳದಿಂದ ಕದಲಬಾರದೆಂದು ಅವರಿಗೆನ್ನಿಸಿದರೆ ಕುಳಿತ ಕುರ್ಚಿಯನ್ನು ಬಿಟ್ಟು ಮೇಲಕ್ಕೇಳಬಾರದೆಂದು ನನಗನ್ನಿಸುತ್ತದೆ. ಸಾಮಾಜಿಕ ಚಿತ್ರ; ಒಳ್ಳೇ ನಟಿಯನ್ನು ಆಯ್ದು ತಂದಿರುವುದಾಗಿ ಹೇಳಿದ್ದಿರಿ; ತುಂಬಾ ಆಸೆಯಿಟ್ಟುಕೊಂಡಿದ್ದೆ. ಈಗ ಎಲ್ಲವೂ ಹೊಳೆಯ ಪಾಲಾಯಿತು.

ಮಾಧವನ ಮಾತುಗಳಲ್ಲಿ ಸತ್ಯಾಂಶವಿರಲಿಲ್ಲವೆಂದಲ್ಲ, ರಾಯರೂ ಮುಂಗಾಣದವರಾಗಿದ್ದರು. 'ಆಯಿತು ನೋಡೋಣ' ಎಂದು ತಲೆ ಹಾಕಿದರು.

'ಇನ್ನು ಎಷ್ಟು ದಿನಗಳ ವರೆಗೆ ಈ ಪ್ರಯೋಗ ನಡೆಯಬೇಕೆಂದು ತಾವು ಮನಸ್ಸು ಮಾಡಿದ್ದೀರಿ?'

'ಹೆಚ್ಚಿಲ್ಲ. ಇಂದೇ ಶಾಮರಾಯರ ಸಂಗಡ ಮಾತನಾಡುತ್ತೇನೆ. ಮುಂದೆ ಒಂದು ವಾರ ಏನೂ ವ್ಯತ್ಯಾಸ ಕಂಡು ಬರದಿದ್ದರೆ ಪಾತ್ರಗಳನ್ನು ಬದಲಾಯಿಸಬಹುದು. ಅಷ್ಟರ ವರೆಗೆ ಸಮಾಧಾನ ತಾಳಿರಿ' ಎಂದರು ರಾಯರು.

## ೧೧

‘ ಸೂಸಿ ’

ಸೂಸಿ ಶಾಮುನ ಕಡೆ ಕಣ್ಣು ತಿರುಗಿಸಿದಳು.

‘ ಸಾಲಗಾರರ ಸಾಲದ ಇರುಕಿನಲ್ಲಿ ಸಿಕ್ಕು ಪೇಚಾಡಿಕೊಂಡಿದ್ದ ದಿನಗಳು ನೆನಪಿನಲ್ಲಿವೆಯೆ ಸೂಸಿ? ’

ಸೂಸಿಗೆ ಸಂದರ್ಭ ತಿಳಿಯದೆ ‘ ಏಕೆ ? ’ ಎಂದಳು.

‘ ದಿನಾಲು ಮನೆಗೆ ಬರುತ್ತಲೂ ತಲೆಯ ಮೇಲೆ ಕೈ ಹೊತ್ತುಕೊಂಡು ಕುಳಿತುಕೊಳ್ಳುತ್ತಿದ್ದೆ. ನೀನು ನನ್ನ ಬಳಿಯಲ್ಲಿಯೆ ಕುಳಿತು ಭುಜಕ್ಕೆ ಭುಜವನ್ನು ತಗಲಿಸಿರುತ್ತಿದ್ದೆ. ನಿನ್ನ ಕೈ ನನ್ನ ಬೆನ್ನ ಮೇಲೆ, ನನ್ನ ಕೈ ನಿನ್ನ ಹೆಗಲ ಮೇಲೆ. ಹೀಗೆ ಎಷ್ಟೋ ಹೊತ್ತಿನ ವರೆಗೆ ಕುಳಿತು ಜಗತ್ತಿನ ನಿಂದೆ, ತಿರಸ್ಕಾರಗಳನ್ನು ಉಸಿರಿನ ರೂಪದಲ್ಲಿ ಹಾರಿಸಿ ಬಿಡುತ್ತಿದ್ದೆವಲ್ಲವೆ ? ’

‘ ಈಗೇಕೆ ಅದೆಲ್ಲ ? ’

‘ ನೆನಪಿದೆಯೆ ಎಂದು ಕೇಳಿದೆ ’

‘ ನಾನು ಮರೆಯಬೇಕೆಂದರೂ ಅದು ಸಾಧ್ಯವಿಲ್ಲ. ’

‘ ಜೀವ ಜ್ಯೋತಿ ಚಿತ್ರದ ನಾಲ್ಕನೆಯ ದೃಶ್ಯದಲ್ಲಿರುವ ಸಂದರ್ಭವಾದರೂ ಅದೇ. ಅದೇ ಕೊರಗು, ಅದೇ ಕಷ್ಟ, ಅದೇ ದಾರಿದ್ರ್ಯ. ಆ ಸಂದರ್ಭ ನಿನಗೆ ಅರ್ಥವಾಗಿದೆಯೊ ಇಲ್ಲವೊ ? ’

ಸೂಸಿಗೆ ಈಗ ಮಾತಿನ ಎಳೆ ಸಿಕ್ಕಿತು. ‘ ಆಗಿದೆ ’ ಎಂದಳು.

ಶಾಮುನು ಸೂಸಿಯ ಗಲ್ಲವನ್ನು ಹಿಡಿದು ಅವಳ ಮುಖವನ್ನು ಮೇಲಕ್ಕೆ ಮಾಡಿ ‘ ಹಾಗಾದರೆ ತಿಳಿದೂ ತಿಳಿದೂ ಹೀಗೇಕೆ ಮಾಡುವೆ ಸೂಸಿ? ನೀನು ಜಾಣಳು. ವಿಷಯಗಳನ್ನು ಗ್ರಹಣ ಮಾಡಿಕೊಳ್ಳಬಲ್ಲೆ. ಅವುಗಳ

ನ್ನೆಲ್ಲ ಚನ್ನಾಗಿ ಅಭಿನಯಿಸಿ ಪ್ರದರ್ಶಿಸಲು ಕೂಡ ನೀನು ಸಮರ್ಥಳಾಗಿರುವೆ. ನಿನ್ನ ಅರಳಿದ ಮುಖದಲ್ಲಿ, ಹೊಳೆಯುವ ಕಣ್ಣುಗಳಲ್ಲಿ, ಅದರುವ ತುಟಿಗಳಲ್ಲಿ ಜೀವಿತದ ಆಸೆ–ನಿರಾಸೆಗಳನ್ನು, ಸುಖ–ದುಃಖಗಳನ್ನು, ಆಗುಹೋಗುಗಳನ್ನು ನಾನು ಕಂಡಿದ್ದೇನೆ. ಅಖಿಲ ಪ್ರಪಂಚವೆ ಈ ಮುದ್ದು ಮುಖದಲ್ಲಿ ಪ್ರತಿಬಿಂಬಿತವಾದುದನ್ನು ನಾನೇ ನೋಡಿದ್ದೇನೆ. ಹೀಗಿದ್ದರೂ ಈಗ ಮಾತ್ರ ಹೀಗೇಕೆ ಮಾಡುತ್ತಿರುವೆ ಸೂಸಿ?'

'ನಾನೇನು ಮಾಡುತ್ತಿದ್ದೇನೆ?'

'ನಾನು ಏನಾದರೂ ಹೇಳಿದರೆ ಸಿಟ್ಟಾಗಬೇಡ, ನೊಂದುಕೊಳ್ಳಬೇಡ. ಈ ಸಂಕೋಚವೃತ್ತಿಯನ್ನು ನೀನು ಬಿಡಲೆ ಬೇಕು. ಎಷ್ಟು ಸುಂದರವಾದ ಸನ್ನಿವೇಶಗಳು, ಎಷ್ಟು ರಸವತ್ತಾದ ಸಂಭಾಷಣೆ! ಅತ್ಯಂತ ಸ್ವಾಭಾವಿಕವಾಗಿವೆ; ನಮ್ಮ ಜೀವನದ ತುಣುಕುಗಳೇ ಎಂಬಂತಿವೆ. ನಿನಗೆ ಅದರಲ್ಲಿ ಯಾವ ವಿಷಯವು, ಯಾವ ಸಂದರ್ಭವು ಅರ್ಥವಾಗುವುದಿಲ್ಲ ಹೇಳು ನೋಡೋಣ. ಎಲ್ಲವೂ ನಮ್ಮ ಜೀವನದ ಮಾತುಗಳು. ನಾವು ಜೀವನದಲ್ಲಿ ಅನುಭವಿಸಿದೆವು, ಅವರು ಕಥಾ ರೂಪದಿಂದ ಬರೆದಿದ್ದಾರೆ. ಅಂತೆಯೆ ಹೇಳಿದೆ ನೀನು ಅವುಗಳನ್ನೆಲ್ಲ ಸುಂದರವಾಗಿ ಅಭಿನಯಿಸಬಲ್ಲೆ ಎಂದು.'

'ಏನು ಅಭಿನಯವೊ!'

'ಕಥಾ ನಾಯಕಿಯು ನಾನು ಎಂಬ ಮಾತನ್ನು ಸರಿಯಾಗಿ ಮನದಟ್ಟು ಮಾಡಿಕೊಳ್ಳಬೇಕು ನಿನ್ನ ನರನರಗಳಲ್ಲಿ 'ನಾನು ನಾಯಕಿ ನಾನು ನಾಯಕಿ' ಎಂಬ ಮಾತು ಬೆರೆತು ಹೋಗಬೇಕು. ಆ ನಾಯಕಿಯೊಡನೆ ನೀನು ಐಕ್ಯವಾಗಿ ಹೋದೆಯೆಂದರೆ ನೀನು ಮಾಡಿದುದೆಲ್ಲವೂ ನಾಯಕಿಯ ಅಭಿನಯವೆ ಆಗಿಹೋಗುವುದು.'

'ನಾನು ನಾಯಕಿ ಎಂದು ಅದು ಹೇಗೆ ತಿಳಿದುಕೊಳ್ಳಬೇಕು!'

'ಅಭಿನಯದ ಪ್ರಥಮ ಪಾಠವೆಂದರೆ ಅದು. ಹಾಗೆ ತಿಳಿದುಕೊಳ್ಳದೆ ನಿರ್ವಾಹವಿಲ್ಲ. ಆ ಕಥಾ ನಾಯಕಿಯೊಡನೆ ನೀನು ಸಮರಸವಾಗಲೆಬೇಕು. ಆಗ ಮಾತ್ರ ನಿನ್ನಲ್ಲಿಯ ನಾಚಿಕೆಯು ಮಾಯವಾಗು

ವುದು. ಚಿತ್ರದ ಸಂಸಾರದೊಳಗಿನ ಗೃಹಿಣಿ ಪದಕ್ಕೆ ಯೋಗ್ಯಳಾಗುವೆ. ಈಗ ನೀನು ನನ್ನ ಸಂಗಡ ಮಾತನಾಡುವುದಕ್ಕೆ, ನಡೆದಾಡುವುದಕ್ಕೆ ನಾಚಿಕೊಳ್ಳುತ್ತಿಯೇನು ? ಆ ಕಥಾನಕದಲ್ಲಿ ನೀನು ಸೂಸಿಯಾಗಿರುವುದಿಲ್ಲ, ಕಥಾ ನಾಯಕಿಯಾಗಿರುವೆ. ನಿನ್ನ ಜೊತೆಯಲ್ಲಿ ಅಭಿನಯಿಸುವವನು ಮಾಧವ ರಾಯನಲ್ಲ ಕಥಾ ನಾಯಕ. ನಿಮ್ಮಿಬ್ಬರಲ್ಲಿ ಅಭಿನಯಿಸಿ ತೋರಿಸಬೇಕಾದ ಸಂಬಂಧ, ಈಗ ನನ್ನ ಹಾಗು ನಿನ್ನ ನಡುವೆ ಇರುವ ಸಂಬಂಧ. ಇದೇ ಸಲಿಗೆ. ಇದೇ ಸರಳತೆ, ಇದೇ ಸ್ವಾತಂತ್ರ್ಯ, ಅಪ್ರೀಯತೆ ಅಲ್ಲಿಯೂ ಪ್ರದರ್ಶಿಸಲ್ಪಡಬೇಕು. ಅಭಿನಯ ಎಂದರೆ ಪರಕಾಯ ಪ್ರವೇಶ ಎಂದು ಹೇಳುವುದು ಇದೇ ಅರ್ಥದಲ್ಲಿಯೆ. ನಿನ್ನ ಈ ಇರುವಿಕೆಯನ್ನು ತೊರೆದು ಇನ್ನೊಂದು ಕಾಲ್ಪನಿಕ ದೇಹವನ್ನು ಪ್ರವೇಶಿಸಿ ಅದೇ ಜೀವನವನ್ನು ನಡೆಯಿಸುವುದು.'

ಚಿತ್ರದಲ್ಲಿ ಅಭಿನಯಿಸುವಾಗ ನೀನು ನನ್ನ ಹೆಂಡತಿಯಲ್ಲ, ಮಾಧವ ರಾಯನ ಹೆಂಡತಿ ಎಂದು ತಿಳಿದುಕೊ ಅಂವರಾಯಿತು ಎಂದು ಒಂದೇ ಮಾತಿನಲ್ಲಿ ವಿಷಯವನ್ನು ತಿಳಿಸಿಕೊಡಬೇಕೆಂದಿದ್ದ. ಆದರೆ ಹಾಗೆ ಹೇಳಲು ತನಗೆ ತಾನೆ ನಾಚಿಕೊಂಡ. ಹೀಗೆ ಹೇಳಬೇಕೆಂದಿದ್ದ ಮಾತನ್ನೆ ಸುತ್ತು ಸುತ್ತಾಗಿ ಹತ್ತಾರು ಮಾತುಗಳಲ್ಲಿ ಹೇಳಿ ಎಷ್ಟು ಚನ್ನಾಗಿ ವಿವರಿಸಿದೆ ಎಂದುಕೊಂಡ.

'ವಿವರಣೆ ಸುಂದರವಾಗಿದೆ....'

'ನಾನು ಈ ವಿವರಣೆ ಮಾಡುತ್ತಿರುವುದು ನಿನ್ನಿಂದ ಮೆಚ್ಚುಗೆಯನ್ನು ಪಡೆಯುವುದಕ್ಕಲ್ಲ. ನನ್ನ ಮಾತುಗಳನ್ನು ನೀನು ಗ್ರಹಿಸಿಕೊಂಡು ಅದರಂತೆ ವರ್ತಿಸಬೇಕು; ನಾಳಿನಿಂದ ಹೆಚ್ಚು ಚನ್ನಾಗಿ ಅಭಿನಯಿಸಬೇಕು'

'ನನಗೆ ಈ ಮಾತುಗಳೆಲ್ಲ ತಿಳಿಯುವುದಿಲ್ಲವೆಂದಲ್ಲ. ಮನೆಯಲ್ಲಿ ಕುಳಿತು ಮಾತುಗಳನ್ನು ಗಟ್ಟಿಮಾಡುವಾಗ ಈ ಭಾವನೆಗಳೆಲ್ಲ ತಲೆಯಲ್ಲಿ ಬಂದು ಹೋಗುತ್ತವೆ. ನಿಮಗೆ ಮಾತು ಒಪ್ಪಿಸುವಾಗಲೂ ನಾನು ಚನ್ನಾಗಿಯೆ ಅಭಿನಯಿಸುತ್ತೇನೆ ಅಲ್ಲವೆ ?'

'ಅಂತೆಯೆ, ನೀನು ರಿಹರ್ಸಲ್ಲಿನ ಕಾಲಕ್ಕೆ ಕಂಬದಂತೆ ನಿಂತು ಬಿಡಲು ನನ್ನ ಹೊಟ್ಟೆಯಲ್ಲಿ ಹೇಳ ತೀರದಷ್ಟು ಸಂಕಟವಾಗುವುದು. ಇವಳು

ಏಕೆ ಹೀಗೆ ಮಾಡುತ್ತಿದ್ದಾಳೆ ಎಂದು ಒಳಗೊಳಗೆ ಪೇಚಾಡುತ್ತೇನೆ. ನೀನು ಒಳ್ಳೇ ನಟಿಯಾಗುವೆ; ಇದರಲ್ಲಿ ಸಂದೇಹವೇ ಇಲ್ಲ. ಆದರೆ ನೀನು ಮನಸ್ಸುಮಾಡಬೇಕು. ನಿನ್ನ ಈ ನಾಚಿಕೆಯು ಈಗ ತೀರ ವಿಪರೀತವಾಗಿ ಪರಿಣಮಿಸಿದೆ. ನಮಗೆ ಬೇಡಾದವರು ಇದರ ಸಂಪೂರ್ಣ ಲಾಭ ತೆಗೆದು ಕೊಳ್ಳುತ್ತಲಿದ್ದಾರೆ. ಇದನ್ನು ಇಷ್ಟಕ್ಕೆ ಮುಗಿಸಲೇಬೇಕು, ಇಲ್ಲವಾದರೆ ತುಂಬಾ ತೊಂದರೆಗಿಟ್ಟುಕೊಳ್ಳುವುದು. ಉಮಾಪತಿರಾಯರು ನಮಗಾಗಿ ಬಹಳ ಶ್ರಮವಹಿಸಿದರು ನಮಗಾಗಿ ಅವರು ತೊಂದರೆಯಲ್ಲಿ ಸಿಕ್ಕಿದ್ದಾರೆ. ನಿನ್ನ ನಾಚಿಕೆಯೆ ಇದಕ್ಕೆಲ್ಲ ಮೂಲಕಾರಣ, ಉಮಾಪತಿರಾಯರ ಸಹ ನೆಯೂ ಮೀರಿದೆ ಈಗೀಗ ಬಹಳ ಬೇಸರ ಪಟ್ಟುಕೊಂಡಿದ್ದಾರೆ.'

'ಅದಕ್ಕೆ ನಾನೇನು ಮಾಡಲಿ?'

'ಹೀಗೆಂದರೇನು ಸೂಸಿ?'

ಸೂಸಿಯು ಕಠೋರವಾಗಿಯೆ ಮಾತನಾಡಿದ್ದಳು. ಸೂಸಿಯು ಹೀಗೆ ಮಾತನಾಡಬಹುದು ಎಂದು ಅವನು ನಿರೀಕ್ಷಿಸಿರಲಿಲ್ಲ ಉಮಾಪತಿ ರಾಯರು ಬೇಸರ ಪಟ್ಟುಕೊಂಡಿದ್ದಾರೆ ಎನ್ನುತ್ತಲೂ ಸೂಸಿಯ ಮನಸ್ಸಿನ ಮೇಲೆ ವಿಶೇಷ ಪರಿಣಾಮವಾಗಿ ಕೃತಜ್ಞತೆಯ ಭಾರದಿಂದ ತಲೆಬಾಗಿಸು ವಳು ಎಂದುಕೊಂಡಿದ್ದ. ಆದರೆ ಎಲ್ಲವೂ ವಿಪರೀತವಾದಂತೆ ತೋರಿತು.

ಇಬ್ಬರೂ ಕೆಲವು ನಿಮಿಷ ಸುಮ್ಮನೆ ಕುಳಿತರು. ಹೇಳಲೊ ಬೇಡವೊ ಎಂದು ಸೂಸಿ ಯೋಚಿಸುತ್ತಿದ್ದಳು. ಹೀಗೇಕೆ ಮಾತನಾಡುತ್ತಾಳೆ ಎಂದು ಶಾಮ ಲೆಕ್ಕಹಾಕುತ್ತಿದ್ದ.

'ಏನು ಹೇಳಲಿ? ನಿಮಗೆ ಇವುಗಳನ್ನೆಲ್ಲ ಹೇಳಬೇಕೊ ಹೇಳಬಾರದೊ ನನಗೆ ಗೊತ್ತಿಲ್ಲ. ನಿಮಗೆ ಎಲ್ಲವನ್ನೂ ಹೇಳಿಬಿಡಬೇಕು ಎಂದು ಅನೇಕ ಸಲ ಮನಸ್ಸು ಮಾಡಿದ್ದೇನೆ. ಮರುಕ್ಷಣದಲ್ಲಿಯೆ ಬೇಡ ಎಂದು ಬಿಟ್ಟು ಬಿಟ್ಟಿದ್ದೇನೆ. ನೀವು ಸಂತೋಷವಾಗಿದ್ದಿರಿ. ನಾನೇಕೆ ನಿಮ್ಮ ಸಂತೋಷಕ್ಕೆ ಭಂಗವನ್ನುಂಟುಮಾಡಲಿ. ನೀವು ಸಂತೋಷವಾಗಿದ್ದರೆ ನನಗೆ ಅಷ್ಟೇ ಸಾಕು. ಎಂದು ಈ ವರೆಗೆ ಸುಮ್ಮನಿದ್ದೆ'

ಶಾಮು ಬೆದರಿದ. ವಿಷಯವು ಗಹನವಾಗಿದೆ ಎಂದುಕೊಂಡ. ಹೇಳಿಬಿಡು ಅನ್ನಬೇಕೆ ಅಥವಾ ಸುಮ್ಮನಿರಬೇಕೆ ಎಂಬುದು ಅವನಿಗೆ ತಿಳಿಯು ದಂತಾಯಿತು. ಇಷ್ಟೊಂದು ಗಂಭೀರವಾಗಿ ಅವನೊಂದಿಗೆ ಸೂಸಿ ಎಂದೂ ಮಾತನಾಡಿರಲಿಲ್ಲ. ಏನೊ ಅತ್ಯಂತ ಮಹತ್ವದ ಸಂಗತಿಗಳು ನಡೆದು ಅವಳ ಮನಸ್ಸಿನ ಮೇಲೆ ವಿಶೇಷ ಆಘಾತವಾಗಿರಬೇಕು ಎಂದು ನಿಶ್ಚಯಿಸಿ ಕೊಂಡ. ಏನಿದ್ದರೂ ಕೇಳಿಯೆ ಬಿಡಬೇಕೆಂದು ಮನಸ್ಸೂ ಕಲ್ಲು ಮಾಡಿದ. ಅವಳನ್ನೂ ಇನ್ನು ಹತ್ತಿರಕ್ಕೆ ಸೆಳೆದುಕೊಂಡ.

ಆಗ ರಾತ್ರಿ ೧೦ ಗಂಟೆಯಾಗಿ ಹೋಗಿರಬೇಕು. ಉಪವನವೆಲ್ಲವೂ ಸ್ತಬ್ಧವಾಗಿದ್ದಿತು. ಆಕಾಶದಲ್ಲಿ ಚಂದ್ರನು ಮಿನುಗುತ್ತಲಿದ್ದನು. ಆಗಾಗ ಮೋಡಗಳು ಮರೆಯಾಗಿ ಬೆಳದಿಂಗಳು ಮಸಕು ಮಸಕಾಗುತ್ತಲಿತ್ತು. ಇವರು ಕುಳಿತ ಆಸನದ ಮೇಲೆ ಚಿಕ್ಕದೊಂದು ಗಿಡದ ನೆರಳು ಬಿದ್ದಿತು, ಸ್ವಲ್ಪ ದೂರದಲ್ಲಿದ್ದ ಕಂಪನಿಯ ಮನೆಯಲ್ಲಿ ಇನ್ನೂ ಎಲ್ಲರೂ ಮಲಗಿದಂತಿರ ಲಿಲ್ಲ. ಅವರು ಹಾಡುವುದು, ಮಾತನಾಡುವುದು, ನಗುವುದು ಆಗಾಗ ಕೇಳಿಸುತ್ತಿದ್ದಿತು.

' ನಾವು ಇಲ್ಲಿಗೆ ಬರಬಾರದಿತ್ತು ' ಸೂಸಿಯೆಂದಳು.

' ಎಲ್ಲಿಗೆ ? ' ಇಲ್ಲಿಗೆ ಅಂದರೆ ಎಲ್ಲಿಗೆ ಎಂಬುದು ಶಾಮುನಿಗೆ ಸರಿಯಾಗಿ ಅರ್ಥವಾಗಲಿಲ್ಲ.

' ಸಿನೇಮಾ ಕಂಪನಿ ನಮ್ಮಂಥವರಿಗಲ್ಲ. '

ಶಾಮು ನಿರುತ್ತರನಾದ.

' ನಾವು ಇಲ್ಲಿಗೆ ಬಂದದ್ದು ತಪ್ಪು. ನೀವೂ ನನ್ನನ್ನು ವಿಚಾರಿಸ ಲಿಲ್ಲ. ನಾನು ಏನು ಹೇಳಿದರೂ ನೀವು ಆಗ ಕೇಳುವಂತಿರಲಿಲ್ಲ. ಅಂತೆಯೆ ನಾನು ಏನನ್ನೂ ಹೇಳಲಿಲ್ಲ ' ಸೂಸಿ ನೆಲವನ್ನು ನೋಡುತ್ತ ತನ್ನಷ್ಟಕ್ಕೆ ತಾನೆ ಮಾತನಾಡಿದಂತೆ ಹೇಳಿದಳು.

' ಸೂಸಿ ಈಗ ಆದದ್ದಾದರೂ ಏನು ? '

' ಹೀಗಾಗುವುದೆಂದು ನಾನು ಮೊದಲಿನಿಂದಲೂ ನಿರೀಕ್ಷಿಸಿದ್ದೆ. ನೀವು ಗಂಡಸರು. ಹೆಂಗಸಿನ ದೃಷ್ಟಿಯಿಂದ ನೀವು ಪ್ರಪಂಚವನ್ನು ನೋಡಲಾರಿರಿ.

ನಿಮ್ಮ ಜಗತ್ತೆ ಬೇರೆ, ನಮ್ಮ ಜಗತ್ತೆ ಬೇರೆ. ನಿಮ್ಮ ಸುಖ-ದುಃಖಗಳೆ ಬೇರೆ, ನಮ್ಮ ಸುಖದುಃಖಗಳೆ ಬೇರೆ.'

ಇದೆಷ್ಟು ಮಾತನಾಡುತ್ತಿದ್ದಾಳೆ ಎನ್ನಿಸಿತು ಶಾಮನಿಗೆ. ಒಂದೇ ತಿಂಗಳಲ್ಲಿ ಎಷ್ಟು ಜಾಣಳಾಗಿದ್ದಾಳೆ ಎಂದುಕೊಂಡ. ಅವಳ ಬೆನ್ನ ಮೇಲೆ ಕೈ ಸವರುತ್ತ ಅವಳನ್ನು ಸಂತೈಸಲು ಯತ್ನಿಸಿದ. ಸೂಸಿ ಕಲ್ಲುಗೊಂಬೆಯಂತೆ ಕುಳಿತಿದ್ದಳು.

'ಈಗೇನಾಯಿತು ಸೂಸಿ ?'

'ಎಷ್ಟಾದರೂ ಗಂಡಸನ್ನು ನಂಬುವುದೆ ಸಾಧ್ಯವಿಲ್ಲ'

ತನ್ನಿಂದಲೆ ಏನೊ ಪ್ರಮಾದವಾಗಿದೆ. ಅದು ಏನೊ ! ಎಂತಹುದೊ ! ಈಗೇನು ಮಾಡಲಿ ? ಎಂದು ಶಾಮು ತಡವರಿಸಿದ. ಅದೇನು ಇದ್ದುದನ್ನು ಹೇಳಿಬಿಡು ಎಂದು ಗಟ್ಟಿಯಾಗಿ ಕೇಳುವುದಕ್ಕೂ ಅವನಿಗೆ ಧೈರ್ಯವಾಗಲಿಲ್ಲ.

ಸೂಸಿ ಮುಂದುವರೆಸಿದಳು. 'ಮಾಧವರಾಯರ ಸಂಗಡ ನಾನು ಸಲಿಗೆಯಿಂದಿರಬೇಕು ಎಂದು ಹೇಳುತ್ತಿರುವಿರಿ. ನಿಮ್ಮ ಸಂಗಡ ಸ್ನೇಹದಿಂದ, ಪ್ರೀತಿಯಿಂದ ಮಾತನಾಡಿದಂತೆ ಅವರ ಸಂಗಡಲೂ ಮಾತನಾಡಬೇಕು ಇದೇ ಅಲ್ಲವೆ ನೀವು ಹೇಳುವುದು ?'

ಶಾಮು ಉತ್ತರ ಕೊಡಲಿಲ್ಲ.

'ರಿಹರ್ಸಲ್ಲಿನ ಕಾಲಕ್ಕೆ ಕೈ ಕುಲುಕಿಸಬೇಕೆಂದು ರಾಯರು ಹೇಳಿದಾಗ ಒಂದು ಸಲ ಕೈ ಮುಂದೆ ಮಾಡಿದೆ. ಅವರು ನನ್ನ ಕೈ ಗಟ್ಟಿಯಾಗಿ ಹಿಡಿದರು. ನನ್ನ ಅಂಗೈಯನ್ನು ಉಗುರಿನಿಂದ ಕೆರೆದರು. ನನ್ನ ಕಡೆ ವಕ್ರವಾಗಿ ನೋಡಿದರು. ಮತ್ತೊಂದು ದಿನ ಬೇಕೆಂತಲೆ ನನ್ನ ಕಾಲನ್ನು ತುಳಿದು ನನ್ನನ್ನು ನೋಡಿ ನಕ್ಕರು. ಈ ವಿಷಯಗಳನ್ನೆಲ್ಲ ನಾನು ನಿಮ್ಮೆದುರಿಗೆ ಹೇಗೆ ಹೇಳಲಿ ?'

'ಹೇಳಬೇಕು. ಹೇಳದಿದ್ದರೆ ನನಗೆ ತಿಳಿಯುವುದಾದರೂ ಹೇಗೆ ? ಮುಖ್ಯವಾಗಿ ಡೈರೆಕ್ಟರರು ನಮ್ಮವರು-ನಮಗೆ ಬೇಕಾದವರು. ಅವರಿಗೆ ಈ ವಿಷಯಗಳನ್ನೆಲ್ಲ ತಿಳಿಸಿ ನಿನ್ನ ಸಂಗಡ ಅಸಭ್ಯರೀತಿಯಿಂದ ವರ್ತಿಸಿದವರಿಗೆ

ತಕ್ಕ ಶಿಕ್ಷೆಮಾಡಿಸಬಹುದು. ಶಾಮನು ಆಶ್ವಾಸನವನ್ನು ಕೊಡುವ ರೀತಿ ಯಲ್ಲಿ ಮಾತನಾಡಿದ.

' ಡೈರೆಕ್ಟರರೂ ದೊಡ್ಡ ಮನುಷ್ಯರೇ ! '

ಶಾಮನ ಎದೆಯೊಡೆದು ನೀರಾಯಿತು.

' ಮೊನ್ನೆ ಸಿನೇಮಾಕ್ಕೆ ಹೋದ ದಿನ ಮೋಟಾರಿನ ಹಿಂದಿನ ಸೀಟಿನಲ್ಲಿ ಮೂವರೂ ಕುಳಿತಾಗ ರಾಯರು ನನ್ನ ಹೆಗಲಮೇಲೆ ಕೈ ಹಾಕಿದರು. ನನ್ನ ಭುಜವನ್ನು ಒತ್ತಿದರು. ನಾನು ನಿಮ್ಮ ಕಡೆ ನೋಡಿದೆ. ನೀವು ಕಿಡಕಿಯ ಹೊರಗೆ ನೋಡುತ್ತ ಕುಳಿತಿದ್ದಿರಿ. ಅವರನ್ನು ದುರುಗುಟ್ಟಿ ನೋಡಿದೆ. ಅವರು ಮುಗುಳುನಗೆ ನಕ್ಕರು. ಸುಮ್ಮನೆ ನಿಮ್ಮ ಕಡೆ ಸರಿದು ಕುಳಿತು ಕೊಂಡೆ. ಶ್ರೀಕಾಂತರಂತೂ ಯಾವಾಗಲೂ ನನ್ನನ್ನೆ ನೋಡುತ್ತಿರುತ್ತಾರೆ. ಇಂತಹ ಚಿಕ್ಕ ಪುಟ್ಟ ಪ್ರಸಂಗಗಳು ಅದೆಷ್ಟೊ ಬಂದಿವೆ. ಅಂತೆಯೆ ಈ ಸಿನೇಮಾ, ಈ ಅಭಿನಯ, ಈ ಜನರ ಸಹವಾಸ ಎಂದರೆ ನನಗೆ ಹೇಸಿಕೆ ಯಾಗಿ ಹೋಗಿದೆ ' ಸೂಸಿಯು ತುಂಬಾ ಬೇಸರದಿಂದ ಮಾತನಾಡಿದಳು.

ಹೆಂಗಸರು ಸಿಟ್ಟಾಗುವುದಕ್ಕೆ, ಬೇಸರಪಟ್ಟುಕೊಳ್ಳುವುದಕ್ಕೆ ಗಂಡಸರ ಕಲ್ಪನೆಗೆ ಬಾರದಂತಹ ಕೆಲವು ಕಾರಣಗಳೂ ಇರುತ್ತವೆ ಎಂಬುದು ಈಗ ಶಾಮನಿಗೆ ತಿಳಿದು ಬಂದಿತು. ಇವಳು ಬೇಸರ ಪಟ್ಟುಕೊಳ್ಳುವುದಕ್ಕೆ ಕಾರಣಗಳೇನೊ ಇವೆ. ಆದರೆ ಇವೆಂಥ ಕಾರಣಗಳು ! ಎಲ್ಲರೂ ಇವ ಳೊಡನೆ ದುರುದ್ದೇಶದಿಂದಲೆ ವರ್ತಿಸುತ್ತಿದ್ದಾರೆಯೆ ?

ಇವಳು ಡೈರೆಕ್ಟರರನ್ನೂ ಆಡಿಕೊಳ್ಳುತ್ತಲಿದ್ದಾಳೆ, ಶಾಮನು ಎಂದಿಗೂ ಅದನ್ನು ನಂಬದಾದ. ಆ ಬಗೆಯ ಸರಳ ಹೃದಯದ ಮನುಷ್ಯನು ಇಂತಹ ಹೇಯವಾದ ಕೆಲಸ ಮಾಡಲು ಸಾಧ್ಯವಿಲ್ಲವೆಂದೇ ನಿಶ್ಚಯಿಸಿದ. ಮಾಧವ ರಾಯನಾದರೂ ಇಷ್ಟು ತುಂಟತನದಿಂದ ಇವಳೊಡನೆ ವರ್ತಿಸಿರಲಾರ. ಬಾಹ್ಯಪ್ರಪಂಚದ ಪರಿಚಯವಿಲ್ಲದ ಇವಳು ಎಲ್ಲರನ್ನೂ ತಪ್ಪು ತಿಳಿದು ಕೊಳ್ಳುತ್ತಲಿದ್ದಾಳೆ. ಎಲ್ಲರ ಮೇಲೆಯೂ ದೋಷಾರೋಪಣೆಯನ್ನು ಮಾಡುತ್ತಲಿದ್ದಾಳೆ ಎಂದೇ ತೀರ್ಮಾನಿಸಿದ.

' ಸೂಸಿ, ಪ್ರಪಂಚವು ಬಹಳವಾಗಿ ಮುಂದುವರೆದಿದೆ. ಧರ್ಮ, ವ್ಯವಹಾರ, ನೀತಿ ಮೊದಲಾದವುಗಳ ವ್ಯಾಖ್ಯೆಯನ್ನು ಇಂದು ಬದಲಾಯಿಸ ಬೇಕಾಗಿದೆ. ಯಾವುನಾದರೊಬ್ಬನು ಯಾವುಳನ್ನೂ ಸ್ವಲ್ಪ ಮಾತನಾಡಿಸಿ ದರೆ ಸಾಕು ಎಲ್ಲರೂ ಕಣ್ಣು ಮಿಟುಕಿಸಿ ಅವರನ್ನೇ ನೋಡುತ್ತ ನಿಲ್ಲುವ ದಿನಗಳು ಈಗ ಹೋಗಿವೆ. ಒಬ್ಬರಿಗೂ ರೀತಿಯಿಲ್ಲ ನೀತಿಯಿಲ್ಲ, ನಮ್ಮ ಸಮಾಜವೇ ಹಾಳಾಗಿಹೋಗಿದೆ ಎನ್ನುತ್ತಿದ್ದ ಕಾಲವು ಇದಲ್ಲ. ಜೀವನದ ಪ್ರತಿಯೊಂದು ವಿಭಾಗದಲ್ಲಿಯೂ ಗಂಡಸು ಹಾಗು ಹೆಂಗಸು ಕೂಡಿಯೆ ಕೆಲಸಮಾಡುತ್ತಿದ್ದುದರಿಂದ ಈ ಸಂಶಯ ಸ್ವಭಾವವು ಕಡಿಮೆಯಾಗುತ್ತ ಲಿದೆ. ಕಾಲಕ್ಕೆ ತಕ್ಕಂತೆ ನಾವೂ ಕೂಡ ಇರಲೇಬೇಕು. ನನ್ನನ್ನು ನೋಡುವವರೆಲ್ಲರೂ ಪಾಪದೃಷ್ಟಿಯಿಂದಲೆ ನನ್ನ ಕಡೆ ನೋಡುತ್ತಲಿದ್ದಾರೆ ಎಂದು ಭಾವಿಸಿ ಅವರ ಎಲ್ಲ ಕೃತಿಗಳಿಗೂ ಅಪಾರ್ಥವನ್ನೇ ಮಾಡುತ್ತ ಹೊರಡಬೇಡ....'

ಸೂಸಿಯು ನೆಲವನ್ನು ನೋಡುತ್ತಲೇ ಕುಳಿತಿದ್ದಳು. ಅವಳಿಗೆ ಏನನ್ನೂ ಹೇಳುವ ಇಚ್ಛೆಯಿರಲಿಲ್ಲ. ತಾನು ಹೇಳಬೇಕಾದುದನ್ನೆಲ್ಲ ಹೇಳಿ ಯಾಯಿತು. ಇನ್ನು ಅವನ ಅಭಿಪ್ರಾಯವೇನಿದೆ ತಿಳಿದುಕೊಳ್ಳಬೇಕು ಎಂದು ಕಾದುಕೊಂಡಿದ್ದಳು.

ಶಾಮನು ಅವಳ ಮುಖವನ್ನು ತನ್ನ ಕಡೆ ಹೊರಳಿಸಿಕೊಂಡು ಮಾತನ್ನು ಮುಂದುವರಿಸಿದ. 'ಮೇಲಕ್ಕೆ ನೋಡು ಸೂಸಿ! ಚಂದ್ರನು ಹೇಗೆ ತನ್ನ ಮೃದುವಾದ ಶೀತಲ ಕಿರಣಗಳಿಂದ ಅಖಿಲ ಪ್ರಪಂಚವನ್ನೆ ಬೆಳ ಗುತ್ತಲಿದ್ದಾನೆ. ಬೆಳದಿಂಗಳಲ್ಲಿ ವಿಹರಿಸುವ ಪ್ರಣಯಿಗಳಿಗೆ ಚಂದ್ರನನ್ನು ಕಾಣುತ್ತಲೂ ಹರ್ಷವು ಇಮ್ಮಡಿಸುವುದು. ಅಗಲುವಿಕೆಯಿಂದ ಕೊರಗುತ್ತ ಲಿರುವ ವಿರಹಿಗಳಿಗೆ ಚಂದ್ರನ ದರ್ಶನದಿಂದ ದುಃಖವು ಒತ್ತರಿಸುವುದು. ವಸ್ತುವು ಒಂದೆ, ನೋಡುವ ದೃಷ್ಟಿಗಳಲ್ಲಿ ವ್ಯತ್ಯಾಸವಾದಂತೆ ಮನದ ಮೇಲೆ ತೀರ ವಿರುದ್ಧ ರೀತಿಯ ಪರಿಣಾಮಗಳು ಉಂಟಾಗುತ್ತವೆ. ಯಾವುದೆ ಒಂದು ವ್ಯಕ್ತಿಯ ಅಥವಾ ಪ್ರಸಂಗದ ಯೋಗ್ಯಾಯೋಗ್ಯತೆಗಳನ್ನು ತೂಗಿ

ತಿಳಿದುಕೊಳ್ಳಬೇಕಾದರೆ ನಮ್ಮ ದೃಷ್ಟಿಯಲ್ಲಿಯೂ ಆ ಬಗೆಯ ಬದಲಾವಣೆಯಾಗಿರಲೆ ಬೇಕು.'

ಸೂಸಿಗೆ ಮೈತುಂಬ ಕಿವಿಗಳಾಗಿದ್ದವು.

' ಈಗ ಕೈ ಕುಲಕಿಸುವುದನ್ನೆ ತೆಗೆದುಕೊಳ್ಳೋಣ. ಅದರಲ್ಲಿ ಅಂತಹ ಮಹತ್ವವೇನಿದೆ ? ಇಂದಿನ ಸಮಾಜದಲ್ಲಿ ಅದು ತೀರ ಸಾಮಾನ್ಯವಾದುದು. ಪ್ರಥಮದಲ್ಲಿ ನಾಯಕಿಯ ಪರಿಚಯವಾಗುತ್ತಲೂ ಅವಳು ನಾಯಕನೊಡನೆ ಕೈ ಕುಲುಕಿಸಬೇಕು. ಆ ಉತ್ಸಾಹದ ಭರದಲ್ಲಿ ಕೈಗಳನ್ನು ಸ್ವಲ್ಪ ಗಟ್ಟಿಯಾಗಿ ಹಿಡಿದಿರಬಹುದು. ಉಗುರು ಕೂಡ ತಾಗಿರಬಹುದು. ನಾನಂತೂ ಇದಕ್ಕೆ ಇಷ್ಟೇ ಅರ್ಥಮಾಡುತ್ತೇನೆ. '

ಸೂಸಿ ಮೆಲ್ಲಗೆ ಉಸಿರೊಂದನ್ನು ಬಿಟ್ಟಳು.

' ಸಿನೇಮಾಕ್ಕೆ ಹೋಗುವಾಗ ಮೂವರೂ ಒಂದೇ ಸೀಟಿನಲ್ಲಿ ಕುಳಿತಿದ್ದೆವು. ಭುಜಕ್ಕೆ ಭುಜ ತಗಲಿಸಿ ಕುಳಿತಿದ್ದೆವು. ಮೋಟರು ಹೊರಳುವಾಗ ರಾಯರ ಭುಜವು ನಿನಗೆ ತಾಗಿರಬಹುದು. ಎಕ್ಸಕ್ಯೂಜ್(excuse) ಎಂಬಂತೆ ನಿನ್ನ ಕಡೆ ನೋಡಿ ಅವರು ನಕ್ಕಿರಬಹುದು. '

ಸೂಸಿ ಸುಮ್ಮನೆ ಕುಳಿತಿದ್ದಳು.

' ಎಲ್ಲರೂ ನಿನ್ನ ಕಡೆ ನೋಡುವರು. ನಾನೂ ಅದನ್ನು ಬಲ್ಲೆ. ಈಗ ಬೀದಿಯಲ್ಲಿ ಹೋಗುತ್ತಿರುವ ಎಷ್ಟು ಹೆಂಗಸರನ್ನೂ ನಾನು ನೋಡುವುದಿಲ್ಲ. ಅವರ ಮೋರೆ; ಅವರ ಮೈಕಟ್ಟು. ಕೂದಲುಗಳನ್ನು ಎಷ್ಟು ಚನ್ನಾಗಿ ಬಾಚಿದ್ದಾಳೆ; ಸೀರೆಯನ್ನು ಎಷ್ಟು ತಿದ್ದಿ ತೀಡಿ ಉಟ್ಟಿದ್ದಾಳೆ. ಎಂದು ಎಷ್ಟೋ ಹೆಂಗಸರ ವರ್ಣನೆಯನ್ನು ನಿನ್ನೆದುರಿನಲ್ಲಿಯೇ ನಾನು ಮಾಡಿಲ್ಲವೆ ? ನೀನೇನಾದರೂ ಅನ್ನು, ನನ್ನ ದೃಷ್ಟಿಯಿಂದ ಇದರಲ್ಲಿ ಏನೂ ತಪ್ಪಿಲ್ಲ. ಹತ್ತು ಜನ ಹೆಂಗಸರು ನಡೆಯುವುದನ್ನು ನಿಲ್ಲುವುದನ್ನು ನಾನು ಗಮನಿಸದಿದ್ದರೆ ಒಳ್ಳೆ ಚಿತ್ರಗಳನ್ನು ಬರೆಯುವುದು ನನಗೆ ಸಾಧ್ಯವೆ? ನಿನಗೆ ಈ ಸೀರೆ, ಆ ಕುಪ್ಪಸ, ಚೆನ್ನಾಗಿ ಒಪ್ಪುತ್ತದೆ; ಅವುಗಳನ್ನು ಹೀಗೆ ಉಡು ಹಾಗೆ ತೊಡು ಎಂದು ಹೇಳಿಕೊಡುವುದಕ್ಕಾದರೂ ನನಗೆ ಹೇಗೆ

ಬರಬೇಕು ? ಇಷ್ಟೇ ಅಲ್ಲ, ನನ್ನ ಮುದ್ದು ಅರಗಿಳಿಗೆ ಎಲ್ಲರನ್ನೂ ಬೆರಗು ಗೊಳಿಸುವಂತಹ ರೂಪವಿದೆ ಎಂದೇ ಎಲ್ಲರೂ ಹುಚ್ಚರಾಗಿ ನಿನ್ನ ಕಡೆ ನೋಡುವರು.'

ಸೂಸಿಯ ಮೊಗದ ಮೇಲೆ ಮುಗುಳು ನಗೆ ನೋಡಬೇಕು ಎಂದು ಪರಿಹಾಸ ಮಾಡಲೆಳಸಿದ. ಆದರೆ ಅವನ ಶ್ರಮವು ಸಾರ್ಥಕವಾಗಲಿಲ್ಲ. ಸೂಸಿಯಿಂದ ಉತ್ತರವೇನೂ ದೊರೆಯಲಿಲ್ಲ.

'ನಾನು ಹೇಳುವುದು ಸರಿಯಾಗಿದೆಯೊ ಇಲ್ಲವೊ ವಿಚಾರಿಸು. ನಾಲ್ಕು ಜನರೊಡನೆ ಕೂಡಿ ಇರುವಾಗ ಇಂತಹ ಸಂದರ್ಭಗಳು ಬಂದೇ ಬರುವವು. ಅವುಗಳನ್ನು ಮನಸ್ಸಿಗೆ ಹಚ್ಚಿಕೊಂಡು ಕೊರಗಿದರೆ ಹೇಗೆ ? ನಿನ್ನ ಮಟ್ಟಿಗೆ ನೀನು ಧೈರ್ಯವಾಗಿರು. ಈ ಹೆದರಿಕೆಯನ್ನು, ಈ ನಾಚಿಕೆ ಯನ್ನು ಸಂಪೂರ್ಣವಾಗಿ ಬಿಟ್ಟು ಬಿಡು. ಯಾರೂ ನಿನ್ನ ಗೊಡವೆಗೆ ಬರುವುದಿಲ್ಲ. ನೀನು ಹಾಗೆಯೆ ಎಲ್ಲರನ್ನು ತಪ್ಪು ತಿಳಿದುಕೊಳ್ಳುತ್ತ ನಡೆದರೆ ನಾವು ಬದುಕುವುದೆ ಕಠಿಣವಾಗಬಹುದು. ನಿನಗೆ ಬಂದ ಕಷ್ಟ ನಿಷ್ಠುರಗಳಿಗೆ ಮಾನಾಪಮಾನಗಳಿಗೆ ಎಲ್ಲವುಗಳಿಗೂ ನಾನು ಹೊಣೆಯಾ ಗಿದ್ದೇನೆ. ನನ್ನ ಸಂಗಡ ಮನಬಿಚ್ಚಿ ಮಾತನಾಡು, ಎಷ್ಟೂ ಸಂಕೋಚ ಮಾಡಿಕೊಳ್ಳಬೇಡ. ಸುಂದರ ಮಂದಿರವೊಂದನ್ನು ಕಟ್ಟಲು ಹೊರಟಿರುವಾಗ ಇಟ್ಟಂಗಿಯೊಂದು ಕಾಲಮೇಲೆ ಬಿದ್ದಿತೆಂದು ಮಂದಿರದ ಗೋಡೆಗಳನ್ನೇ ಕೆಡಹುವ ಹುಚ್ಚು ಕೆಲಸವನ್ನು ಮಾಡಬೇಡ. ಈ ಎಲ್ಲ ವಿಷಯಗಳನ್ನು ವಿಶಾಲ ದೃಷ್ಟಿಯಿಂದ ನೋಡು; ಅಂದರೆ ಮಾತ್ರ ಇಬ್ಬರಿಗೂ ಹಿತವಾಗು ವುದು.'

ಸೂಸಿಯು ಈಗಲೂ ಮೌನವಾಗಿಯೇ ಇದ್ದಳು.

## ೧೨

ಮಾಧವ ಕಮಲೆಯರು ತಮ್ಮ ಬಯಕೆ ಇಡೇರಿತು ಎಂದುಕೊಂಡಿದ್ದರು. ಡೈರೆಕ್ಟರರು ತನಗೆ ಕೊಟ್ಟ ಕೊನೆಯ ಆಶ್ವಾಸನವನ್ನು ಮಾಧವನು ತಿಳಿಸಿದಾಗ ಕಮಲೆಗೆ ಹಿಡಿಸಲಾರದಷ್ಟು ಸಂತೋಷವಾಯಿತು. ಈ ನಡುವೆ ಸೂಸಿಯು ನಾಲ್ಕು ದಿವಸದ ರಜೆ ತೆಗೆದುಕೊಂಡಿದ್ದರಿಂದ ರಿಹರ್ಸಲ್ಲಿಗೆ ಬರಲೇ ಇಲ್ಲ. ನಾಯಕಿಯ ಪಾತ್ರ ಅವಳು ಕೈ ಬಿಟ್ಟಂತೆಯೆ ಎಂದು ಇವರು ನಿಶ್ಚಯಿಸಿದರು. ಕಮಲೆಯು ಒಂದೆರಡು ದೃಶ್ಯಗಳಲ್ಲಿಯ ನಾಯಕಿಯ ಮಾತುಗಳನ್ನು ಬರೆದುಕೊಂಡು ಗಟ್ಟಿಮಾಡಿದಳು. ನಾಯಕಿಯ ಹಾಡುಗಳನ್ನೇ ಗುಣುಗುಟ್ಟುತ್ತಲಿರುತ್ತಿದ್ದಳು. ಸೂಸಿಯು ಬಾರದ್ದರಿಂದ ಅವಳ ಮಾತಿನ ಹಾಳೆಯನ್ನು ತೆಗೆದುಕೊಂಡು ಕಮಲೆಯು ಅತ್ಯಂತ ಆಸಕ್ತಿಯಿಂದ ರಿಹರ್ಸಲ್ಲಿನ ಕಾಲಕ್ಕೆ ತಾನೆ ಓದುತ್ತಿದ್ದಳು. ಆಗ ಮಾಧವನು ಉಮಾಪತಿರಾಯರ ಕಡೆ ನೋಡಿ ಸಂತೋಷವನ್ನು ಸೂಚಿಸುವ ನಗೆ ನಗುತ್ತಲಿದ್ದ.

ಸೂಸಿಯ ನಾಲ್ಕು ದಿನಗಳ ರಜೆ ಪೂರ್ತಿಯಾಯಿತು. ಇಂದು ಅವಳು ರಿಹರ್ಸಲ್ಲಿಗೆ ಬರುವಳು. ಮೊದಲಿನಂತೆ ಮಂಕ ಬಡೆದಂತೆ ನಿಂತುಕೊಳ್ಳುವಳು. ಡೈರೆಕ್ಟರರು ಮೋರೆಯ ಮೇಲೆ ಹೊಡೆದಂತೆ ಮಾತನಾಡಿ ಅವಳ ಮಾತಿನ ಹಾಳೆಗಳನ್ನು ಕಮಲೆಯ ಕೈಯಲ್ಲಿ ಇಡುವರು. ಮಾಧವನು, ನಾಯಕನು; ಅವನ ಮನೋಹಾರಿಣಿಯಾದ ಕಮಲೆಯು ನಾಯಕಿ. ಇನ್ನು ಅವರ ಪ್ರಣಯವು ನಿರಾತಂಕವಾಗಿ ಸಾಗಬಲ್ಲದು. ಈಗ ಅವರಿಬ್ಬರು ಸಂತೋಷವಾಗಿರುವದನ್ನು ಕಂಡು ಅನೇಕರಿಗೆ ಸಹನವಾಗುತ್ತಿರಲಿಲ್ಲ. ಚಿತ್ರದಲ್ಲಿ ಇವರೇ ನಾಯಕ–ನಾಯಕಿಯ

ರಾದರೆ ಅವರೆಲ್ಲರಿಗೂ ಸರಿಯಾದ ಉತ್ತರವನ್ನು ಕೊಟ್ಟಂತಾಗುವುದು ಎಂದು ಮಾಧವ ಕಮಲೆಯರು ಲೆಕ್ಕಹಾಕುತ್ತಲೇ ಇದ್ದರು.

ಮಾಧವ ಕಮಲೆಯರು ಎಲ್ಲರಕಿಂತಲೂ ಮೊದಲೇ ರಿಹರ್ಸಲ್ಲಿಗೆ ಬಂದು ಮುಂದಿನ ಆಸನಗಳಲ್ಲಿ ಕುಳಿತುಕೊಂಡಿದ್ದರು. ಕಮಲೆಯು ಇಂದು ವಿಶೇಷ ಶೃಂಗಾರ ಮಾಡಿಕೊಂಡು ಬಂದಿದ್ದಳು. ಸಾದಾ ವಸ್ತ್ರಗಳು, ಸಾದಾ ಒಡವೆಗಳು ಅವಳಿಗೆ ಸೇರಿಕೆಯಾಗುತ್ತಿರಲಿಲ್ಲ. ಅವು ಥಾಳಾಗಿ ಕಣ್ಣಿಗೆ ಎದ್ದು ತಾಗುವಂತಿದ್ದರೆಯೇ ಅವಳಿಗೆ ಸಂತೋಷವಾಗುವುದು. ಇಂದು ಗೇಣಗಲ ಜರಿಯ ಅಂಚುಳ್ಳ ಬಂಗಾರ ವರ್ಣದ ಪತ್ತಲವನ್ನುಟ್ಟಿದ್ದಳು. ಅದಕ್ಕೆ ಒಪ್ಪುವ ಪೋಲಕವನ್ನು ತೊಟ್ಟಿದ್ದಳು. ಮಾಧವನ ಪ್ರತಿಯೊಂದು ಮಾತಿಗೂ ಕರವಸ್ತ್ರವನ್ನು ಬಾಯಿಗೆ ಅಡ್ಡ ಹಿಡಿದು ಕುಲುಕುಲು ನಗುತ್ತಿದ್ದಳು.

ಸೂಸಿ ಬಂದಳು. ಇತರರೂ ಬಂದರು. ರಿಹರ್ಸಲ್ಲು ಪ್ರಾರಂಭವಾಯಿತು. ಸೂಸಿ ಇಂದು ಧೈರ್ಯವಾಗಿ ಮಾತನಾಡುತ್ತಿದ್ದಳು. ಹಿಂದಿನ ಸಂಕೋಚವೃತ್ತಿಯಿರಲಿಲ್ಲ. ಕಮಲೆಗೆ ತಳಮಳವಾಯಿತು, ಮಾಧವನ ಮೈ ಬೆವರಿತು, ಉಮಾಪತಿರಾಯರಿಗೆ ಉತ್ಸಾಹವಾಯಿತು, ಶಾಮನ ಸಂತೋಷಕ್ಕೆ ಪಾರವಿಲ್ಲದಂತಾಯಿತು.

ಇಂದು ಸೂಸಿ ತಾನಾಗಿಯೆ ಮಾಧವನ ಕೈಗಳನ್ನು ಹಿಡಿದು ಕುಲುಕಿಸಿದಳು; ಮಾಧವನು ಬೆರಗಾದ. ಭುಜದ ಮೇಲೆ ಕೈ ಇರಿಸಿದಳು; ಮಾಧವನ ಮೈ ಬೆವೆತಿತು. ಮುಂದರೆದು ದರ್ಪದಿಂದ ಅಭಿನಯಿಸುತ್ತಿದ್ದವನಿಗೆ ಇಂದು ಮಾತುಗಳೇ ಮರೆತು ಹೋಗತೊಡಗಿದವು.

ಕಮಲೆಯ ಕಸವಿಸಿ ಹೇಳತೀರದು. ಇವಳು ತಾರಿಣಿಯು ಅಹುದೋ ಅಲ್ಲವೊ ಅವಳಿಗೆ ತಿಳಿಯದಂತಾಯಿತು. ದಿನಾಲು ತಲೆಯ ಮೇಲೆ ಸೆರಗು ಹಾಕಿ ಮುದುಡಿಕೊಂಡು ನಿಲ್ಲುತ್ತಿದ್ದವಳು ಇಂದು ಇಷ್ಟು ಸ್ವಾಭಾವಿಕವಾಗಿ ಅಭಿನಯಿಸಿದರೆ ಅವಳು ಹೇಗೆ ನಂಬಬೇಕು ? ಅಸೂಯೆಯಿಂದ ಮೈಯೆಲ್ಲವೂ ಕುದಿಯತೊಡಗಿತು. ಕಟಕಟನೆ ಹಲ್ಲು ಕಡಿದಳು. ಅವ

ಳನ್ನು ದುರುಗುಟ್ಟಿ ನೋಡಿದಳು. ತನ್ನ ಸುಂದರ ಭವಿಷ್ಯಕ್ಕೆ ಅರೆದಾಳ ಹಚ್ಚಿದ ಆ ಮಾರಿಯನ್ನು ಶಪಿಸಿದಳು. ಅಲ್ಲಿಯೆ ಅವಳ ಕೂದಲುಗಳನ್ನು ಕಿತ್ತು ಕತ್ತನ್ನು ಹಿಚುಕಿ ಬಿಸುಟಿ ಬಿಡಲೇ ಎಂದೆನಿಸಿತು ಅವಳಿಗೆ.

ಏನಾದರೂ ಮಾಟಮಾಡಿಸಿದ್ದಾರೆಯೆ ಇವಳಿಗೆ ಎಂದು ಅವಳು ಯೋಚಿಸಿದಳು. ರಾಯರ ಕಡೆ ನೋಡಿದಳು. ಅವರೂ ಆಶ್ಚರ್ಯಾ ನಂದಗಳಿಂದ ತಾರಿಣಿಯನ್ನು ದಿಟ್ಟಿಸುತ್ತಲಿದ್ದರು.

ರಿಹರ್ಸಲ್ಲು ಮುಗಿಯಿತು. ಎಲ್ಲರೂ ಹಸನ್ಮುಖಿಗಳಾಗಿದ್ದರು. ಕಮ ಲೆಯು ಮಾತ್ರ ಗಲ್ಲಕ್ಕೆ ಕೈಕೊಟ್ಟು ಸೋಫಾದ ಮೇಲೆ ಕುಳಿತವಳು ಮಿಸು ಗಲಿಲ್ಲ. ಬಿರುಗಣ್ಣಿನಿಂದ ಒಂದೇಸವನೆ ತಾರಿಣಿಯನ್ನು ನೋಡುತ್ತಿದ್ದಳು ಮಾತ್ರ.

ಉಮಾಪತಿರಾಯರು ಸಂತೋಷದ ಭರದಲ್ಲಿ ಕುಳಿತ ಸ್ಥಳದಿಂದ ಧಾವಿಸಿ ಬಂದು 'Splendid!' ಎನ್ನುತ್ತ ತಾರಿಣಿಯ ಕೈಗಳನ್ನು ಕುಲು ಕಿಸಿದರು. ತಾರಿಣಿಯೂ ನಗಲು ಯತ್ನಿಸಿದಳು ಆದರೆ ಅವಳಿಂದ ಸಾಧ್ಯ ವಾಗಲಿಲ್ಲ. ತುಂಬಾ ಆಯಾಸಗೊಂಡಿದ್ದಳು. ಅವಳನ್ನು ಅಭಿನಂದಿಸಲು ಶ್ರೀಕಾಂತರೂ ಕೈಗಳನ್ನು ಮುಂದಕ್ಕೆ ಮಾಡಿದರು. ಅವರ ಹಿಂದೆಯೆ ಗಿರಿಧರಪಂತರೂ ಅಭಿನಂದಿಸಲು ಕಾದುಕೊಂಡಿದ್ದರು. ತಾರಿಣಿಗೆ ಕಣ್ಣಿಗೆ ಕತ್ತಲು ಬಂದಂತಾಯಿತು. ಇನ್ನೇನು ಹೀಗೆಯೆ ಹಿಂದಕ್ಕೆ ಬಿದ್ದು ಬಿಡು ವವಳೇ–ಇದನ್ನು ನೋಡಿ ಅವಳನ್ನು ಹಿಡಿಯಲು ಶಾಮುನು ಕೈಚಾಚಿದ. ತಾರಿಣಿಯು ಕುಸಿಕೂತಳು.

ನೆತ್ತಿಗೆ ನೀರು ತಟ್ಟುವುದು, ಗಾಳಿಹಾಕುವುದು ಮೊದಲಾದ ಉಪ ಚಾರಗಳು ನಡೆದವು. ಮುಂದೆ ಸ್ವಲ್ಪ ಹೊತ್ತಿನ ನಂತರ ಕಣ್ಣು ತೆಗೆದು ಸುತ್ತಲೂ ನೋಡಿದಳು. ದೀರ್ಘವಾದ ಉಸಿರೊಂದನ್ನು ಬಿಟ್ಟಳು.

ಮಾಧವನು ಕರವಸ್ತ್ರದಿಂದ ಮುಖವನ್ನೊರೆಸಿಕೊಳ್ಳುತ್ತ ಒಂದು ಬದಿಗೆ ನಿಂತುಕೊಂಡಿದ್ದ. ತಾರಿಣಿಯು ಕುಸಿಕೂಡುತ್ತಲೆ ಅವಳ ಕಡೆ ಬರಬೇಕೆಂದು ಎಣಿಸಿದ. ಅವಳ ಸುತ್ತಲೂ ಜನರು ಮುಕುರಿದ್ದರು. ಅದ

ರಲ್ಲಿಯೆ ಇಣಿಕಿ ನೋಡಿದ. ಶಾಮನು ತನ್ನ ತೊಡೆಯ ಮೇಲೆ ಅವಳ ತಲೆಯನ್ನಿಟ್ಟುಕೊಂಡು ಮೆಲ್ಲಗೆ ನೀರು ತಟ್ಟುತ್ತಲಿದ್ದ. ಮಾಧವನು ಅದನ್ನೇ ನೋಡುತ್ತ ನಿಂತುಕೊಂಡ. ತಾರಿಣಿಯು ಕಣ್ಣು ತೆರೆಯುತ್ತಲೂ ಇವನಿಗೆ ಸಮಾಧಾನವಾಯಿತು. ಒಮ್ಮೆಲೆ ಏನು ಹೊಳೆಯಿತೊ! ಮುಖವನ್ನು ತಿರುಗಿಸಿ ಹೊರಗೆ ಹೊರಟ. 'ಮಾಧವರಾವ್' ಎಂದು ಕಮಲೆ ಕರೆದದ್ದು ಕೇಳಿದರೂ ಅತ್ತ ಗಮನ ಕೊಡಲಿಲ್ಲ.

ಮುಂದೆ ೨-೩ ದಿನಗಳ ವರೆಗೆ ಸೂಸಿಯು ಅಶಕ್ತಳಾಗಿಯೆ ಇದ್ದಳು. ಅಂದು ಅವಳು ತನ್ನ ಶಕ್ತಿಮೀರಿ ಮನೋನಿಗ್ರಹವನ್ನು ಮಾಡಿಕೊಂಡು ಅಭಿನಯಿಸಿದ್ದರಿಂದ ಅವಳಿಗೆ ವಿಶೇಷ ದಣುವಾಗಿತ್ತು. ತಾರಿಣಿದೇವಿಯು ನಾಯಕಿಯ ಪಾತ್ರವನ್ನು ಚನ್ನಾಗಿ ಅಭಿನಯಿಸಬಲ್ಲಳು ಎಂದು ಡೈರೆಕ್ಟರ, ಮಾಧವರಾವ ಮೊದಲಾದವರನ್ನೊಳಗೊಂಡು ಎಲ್ಲರಿಗೂ ಮನದಟ್ಟಾದ್ದರಿಂದ ರಿಹರ್ಸಲ್ಲಿಗೆ ಬರಲೇಬೇಕೆಂದು ಅವಳಿಗೆ ಯಾರೂ ಒತ್ತಾಯವನ್ನು ಮಾಡಲಿಲ್ಲ.

ಒಂದು ವಾರದ ನಂತರ ಶೂಟಿಂಗ ಪ್ರಾರಂಭವಾಯಿತು. ಬೆಳಿಗ್ಗೆ ಎಂಟು ಗಂಟೆಗೆ ಸ್ಟೂಡಿಯೊಕ್ಕೆ ಹೋದರೆ ಸಾಯಂಕಾಲ ೬ ಗಂಟೆಯ ವರೆಗೆ ಅಲ್ಲಿಯೆ ಇರುವುದು. ಸಾಯಂಕಾಲ ಮನೆಗೆ ಮರಳುವಾಗ ಕೈಕಾಲುಗಳು ತನ್ನವು ಅಹುದೊ ಅಲ್ಲವೊ ಎಂದೆನಿಸುತ್ತಿತ್ತು ಸೂಸಿಗೆ. ಮನೆಗೆ ಬರುತ್ತಲೂ ಸ್ನಾನಮಾಡಿ ಸ್ವಲ್ಪ ಉಪಹಾರವನ್ನು ತೀರಿಸಿಕೊಂಡು ಉಪವನದಲ್ಲಿ ತಿರುಗಾಡುವುದು. ಶೂಟಾದ ಹಾಗು ಶೂಟಾಗಲಿರುವ ಚಿತ್ರದ ವಿಷಯ ಮಾತನಾಡುತ್ತಿರುವುದರೊಳಗಾಗಿಯೆ ಊಟದ ಹೊತ್ತಾಗುತ್ತಿತ್ತು. ಊಟವಾಗುತ್ತಲೂ ವಿಶ್ರಾಂತಿ. ಬೆಳಗಾಗುತ್ತಲೂ ನಿತ್ಯದ ಕಾರ್ಯಕ್ರಮ ಪ್ರಾರಂಭವಾಗುತ್ತಿತ್ತು. ಮುಖ್ಯ ನಾಯಕಿಯ ಪಾತ್ರವನ್ನೇ ವಹಿಸಿದ್ದರಿಂದ ಸಾಮಾನ್ಯವಾಗಿ ಪ್ರತಿನಿತ್ಯವೂ ಇವಳು ಸ್ಟೂಡಿಯೊಕ್ಕೆ ಹೋಗಲೆಬೇಕಾಗುತ್ತಿತ್ತು. ಒಳ್ಳೇ ಸಿನೇಮಾ ಏನಾದರೂ ಬಂದಿದ್ದರೆ ನೋಡಲು ಹೋಗುತ್ತಿದ್ದರು. ಅಂದು ಮಾತ್ರ ಕಾರ್ಯಕ್ರಮದಲ್ಲಿ ಸ್ವಲ್ಪ ವ್ಯತ್ಯಾಸ

ವಾಗುತ್ತಿತ್ತು. ತಡಮಾಡಿ ಮಲಗುವುದು–ಏಳುವುದು ಮಾತ್ರ ಪ್ರತಿನಿತ್ಯ ದಂತೆಯೆ.

ಇದೇ ರೀತಿಯಲ್ಲಿ ಒಂದರ ಹಿಂದೊಂದು ದಿನಗಳು ಶಾಮು ಸೂಸಿ ಯರಿಗೆ ತಿಳಿಯದಂತೆ ಕಳೆದು ಹೋಗತೊಡಗಿದವು. ಬೆಳಗಿನಲ್ಲಿ ಇಬ್ಬರೂ ಉಪಹಾರ ತೀರಿಸಿಕೊಂಡು ಕೂಡಿಯೆ ಸ್ಟೂಡಿಯೊಕ್ಕೆ ಹೋಗುತ್ತಿದ್ದರು. ಸೂಸಿ ಗ್ರೀನ್ ರೂಮನ್ನು ಪ್ರವೇಶಿಸಿದ ನಂತರ ಶಾಮನು ತನ್ನ ಕೆಲಸಕ್ಕೆ ಹೋಗುತ್ತಲಿದ್ದ.

ಫೋಟೊ ತೆಗೆಯುವುದರ ಜೊತೆಗೆ ಸುಳುವು ಹಾಕುವುದು, ಬಣ್ಣದ ಚಿತ್ರಗಳನ್ನು ಬರೆಯುವುದು. ಕೆಲವು ಸಲ ಎನ್‌ಲಾರ್ಜಮೆಂಟ ಮಾಡುವ ಕೆಲಸವು ಕೂಡ ಶಾಮನ ಪಾಲಿಗೆ ಬರುತ್ತಿತ್ತು. ಕಂಪನಿಯ ಇತರ ಕೆಲಸಗಾರರಂತೆ ತನ್ನ ಪಾಲಿಗೆ ಬಂದ ಕೆಲಸವನ್ನು ಹೇಗಾದರೂ ಪೂರ್ತಿ ಗೊಳಿಸಿ ದಿನದ ಹಾಜರಿ ತುಂಬಿದರಾಯಿತು ಎಂದು ಬಿಟ್ಟಿ ಬೇಸರಿಕೆಯಿಂದ ಇವನು ಕೆಲಸ ಮಾಡುತ್ತಿರಲಿಲ್ಲ. ತಾನು ಕೈಕೊಂಡ ಕೆಲಸವು ಚನ್ನಾಗಿ ಆಗಬೇಕು, ಅದರಲ್ಲಿ ಒಂದಲ್ಲ ಒಂದು ಬಗೆಯ ವಿಶೇಷತೆಯಿರಬೇಕು. ಎಂದು ಮನಸ್ಸುಗೊಟ್ಟು ಕೆಲಸ ಮಾಡುತ್ತಲಿದ್ದ. ಕಂಪನಿಯ ಕಲಾವಿಭಾ ಗದ ಎಲ್ಲ ಕೆಲಸದ ಹೊರೆಯು ತನ್ನ ಮೇಲೆಯೆ ಇದೆಯೊ ಏನೋ ಎನ್ನು ವಂತೆ ಅತ್ಯಂತ ದಕ್ಷತೆಯಿಂದ ದುಡಿಯುತ್ತಲಿದ್ದ. ಇತರರು ಮಾಡುತ್ತಲಿದ್ದ ಕೆಲಸಗಳಲ್ಲಿ ತನಗೆ ತೋರಿದ ವ್ಯತ್ಯಾಸಗಳನ್ನು ನಯವಾಗಿ ಸೂಚಿಸುತ್ತ ಲಿದ್ದ. ಅವನ ಸೂಚನೆಗಳನ್ನು ಟೀಕೆಗಳೆಂದು ತಿಳಿದುಕೊಂಡು ಅವನ ವಿನಯವನ್ನು ದುರಭಿಮಾನವೆಂದು ಭಾವಿಸಿ ಅವನನ್ನು ಕೆಲವರು ಶಪಿಸು ತ್ತಲೂ ಇದ್ದರು.

ಮಧ್ಯಾನ್ಹದ ಊಟ ಸ್ಟೂಡಿಯೊಕ್ಕೇನೆ ಬರುತ್ತಿತ್ತು. ಶಾಮು ಬಿಡುವು ಮಾಡಿಕೊಂಡು ಸೂಸಿಯ ಬಳಿಗೆ ಬಂದು ಅವಳ ಜೊತೆಗೆ ಊಟ ಮಾಡಿ ಸ್ವಲ್ಪ ಹೊತ್ತು ಕುಳಿತುಕೊಂಡು ಸಂತೋಷವಾಗಿ ಮಾತನಾಡಿ ಪುನಃ ತನ್ನ ಕೆಲಸಕ್ಕೆ ಹೋಗಿಬಿಡುತ್ತಿದ್ದ. ಮೊದಲು ೪-೫ ದಿನ ಮಧ್ಯಾನ್ಹದ

ಉಪಹಾರಕ್ಕೆ ಕೂಡ ಒಂದೆಡೆಗೆ ಸೇರುತ್ತಿದ್ದರು. ಆದರೆ ಇದಕ್ಕಾಗಿ ಬಹಳ ವೇಳೆ ಹೋಗುತ್ತಿದ್ದುದರಿಂದ ಅವರು ಕೆಲಸ ಮಾಡುತ್ತಲಿದ್ದ ಸ್ಥಳಗಳಲ್ಲಿಯೇ ಉಪಹಾರವನ್ನು ತಂದು ಕೊಡುವ ಏರ್ಪಾಟಾಯಿತು. ಹೀಗಾಗಿ ಸಾಯಂಕಾಲಕ್ಕೇ ಪುನಃ ಇವರ ಭೆಟ್ಟಿಯಾಗುತ್ತಿತ್ತು.

ಸೂಸಿ ಮೊದಲು ಕೆಲವು ದಿನ ಶಾಮು ತನ್ನ ಕೆಲಸ ಬಿಟ್ಟು ಬರುವವರೆಗೆ ಊಟ ಉಪಹಾರಗಳನ್ನು ತೆಗೆದುಕೊಳ್ಳುತ್ತಿರಲಿಲ್ಲ. ಯಾರಾದರೂ ಪೇಯಗಳನ್ನು ತಂದುಕೊಟ್ಟರೆ 'ಇದನ್ನು ಯಾರು ಕಳಿಸಿದ್ದಾರೆ?' ಎಂದು ಕೇಳುವಳು. ಶಾಮರಾಯರು ಇಲ್ಲವೆ ಉಮಾಪತಿರಾಯರು ಎಂದರೆ ಮಾತ್ರ ಅವುಗಳನ್ನು ತೆಗೆದುಕೊಳ್ಳುವಳು, ಇಲ್ಲವಾದರೆ ವಾಪಸು ಕಳಿಸಿ ಬಿಡುತ್ತಿದ್ದಳು. ಈಗ ಮಾತ್ರ ಆ ನಿರ್ಬಂಧಗಳಾವನ್ನೂ ಇಟ್ಟುಕೊಂಡಿರಲಿಲ್ಲ. ಕೆಲವು ಸಲ ಶಾಮನು ಬರುವುದರೊಳಗಾಗಿಯೆ ಊಟ ಮಾಡಿರುತ್ತಿದ್ದಳು. ಶಾಮನೂ ಕೂಡ ಅನ್ಯಥಾ ಭಾವಿಸುತ್ತಿರಲಿಲ್ಲ. ಇಬ್ಬರೂ ಗಿಡದಡಿಯಲ್ಲಿ ಕುಳಿತು ಮಾತನಾಡುವರು. ಸೂಸಿ ನಾನು ಹೀಗೆ ಹಾಡು ಹೇಳಿದೆ, ಹೀಗೆ ಅಭಿನಯ ಮಾಡಿದೆ ಎಂದು ಹೇಳಿಕೊಳ್ಳುವಳು; ಶಾಮು ನಾನು ಆ ಚಿತ್ರ ಬರೆದೆ, ಈ ಫೋಟೊ ತೆಗೆದೆ ಎಂದು ಹೇಳಿಕೊಳ್ಳುವನು. ಇಬ್ಬರೂ ತಮ್ಮ ತಮ್ಮ ಕೆಲಸಗಳಿಗೆ ಹೊರಟು ಹೋಗುವರು.

೧೫ ದಿನಗಳು ಕಳೆದವು. ಶಾಮು ಹಾಗು ಉಮಾಪತಿರಾಯರು ಸ್ಟುಡಿಯೊದಲ್ಲಿ ಮಾತನಾಡುತ್ತ ಕುಳಿತಿದ್ದರು. ಸೂಸಿ ಡ್ರೆಸ್ ಮಾಡಿಕೊಂಡು ಬರಲು ಗ್ರೀನ್‌ರೂಮಿಗೆ ಹೋಗಿದ್ದಳು. ಉಮಾಪತಿರಾಯರು ತಾರಿಣಿದೇವಿಯ ಅಭಿನಯ ಹಾಗು ಹಾಡುಗಾರಿಕೆಯ ವಿಷಯವಾಗಿ ತಮ್ಮ ಸಂತೋಷವನ್ನು ವ್ಯಕ್ತಮಾಡುತ್ತಲಿದ್ದರು. 'ಮೊದಲು ನನಗೆ ಬಹಳ ಭಯವಾಗಿತ್ತು. ಆದರೆ ಈಗೇನೂ ಚಿಂತೆಯಿಲ್ಲ. ದಿನದಿನಕ್ಕೂ ಹೆಚ್ಚು ಪ್ರಗತಿಯನ್ನು ಹೊಂದುತ್ತಲಿದ್ದಾರೆ. ಅವರ ಈಗಿನ ಎರಡೂ ಹಾಡುಗಳು ಚೆನ್ನಾಗಿಯೇ ರಿಕಾರ್ಡು ಆಗಿವೆ. ಮುಂದಿನವು ಇನ್ನೂ ಚೆನ್ನಾಗಿ ರಿಕಾರ್ಡು ಆಗ ಬಹುದು ಎಂದು ನಾನು ಆಶಿಸುತ್ತೇನೆ. ಸಿನೇಮಾ ಪ್ರಪಂಚಕ್ಕೆ

ಹೊಸಬರಾದರೂ ವಿಷಯ ಗ್ರಹಣಶಕ್ತಿಯು ಚೆನ್ನಾಗಿದೆ' ರಾಯರು ಅಂದರು.

'ಎಲ್ಲವೂ ತಮ್ಮ ದಯ' ಶಾಮನಂದ.

ಇಷ್ಟರಲ್ಲಿ ಗ್ರೀನ್ ರೂಮಿನಿಂದ ಒಬ್ಬನು ಒಂದು ಕೈಯಿಂದ ತನ್ನ ಗಲ್ಲವನ್ನು ಸವರಿಕೊಳ್ಳುತ್ತ ಸಿಟ್ಟಿನಲ್ಲಿ ಏನೇನನ್ನೊ ಗೊಣಗಿಕೊಳ್ಳುತ್ತ ರಭಸದಿಂದ ರಾಯರಿದ್ದಲ್ಲಿಗೆ ಬಂದ. 'ಡೈರೆಕ್ಟರ ಸಾಹೇಬ್, ನನಗೇನೂ ಈ ಕಂಪನಿಯಲ್ಲಿ ಕೆಲಸಮಾಡುವ ಇಚ್ಛೆಯಿಲ್ಲ. ಕಂಡ ಕಂಡವರ ಕೈಯಿಂದ ಹೊಡೆತ ತಿಂದುಕೊಂಡಿರುವುದಕ್ಕಲ್ಲ ನಾನು ಇಲ್ಲಿಗೆ ಬಂದದ್ದು' ಎಂದ.

'ಏನಾಯಿತು? ಯಾರು ಹೊಡೆದರು?' ರಾಯರು ಕೇಳಿದರು.

'ತಾರಿಣಿದೇವಿಯವರು ನನ್ನನ್ನು ಹೊಡೆಯುವದಕ್ಕೆ ಏನು ಸಂಬಂಧ? ನನ್ನ ಹದಿನೆಂಟು ವರ್ಷಗಳ ಸರ್ವೀಸಿನಲ್ಲಿ ಒಬ್ಬರಿಂದ ಒಂದೂ ಮಾತನಾಡಿಸಿಕೊಳ್ಳಲಿಲ್ಲ ನಾನು. ಅಂತಹುದು ನನ್ನ ಮೈಮೇಲೆ ಏರಿ ಬಂದು ಹೊಡೆದು ಬಡೆದು ಮಾಡುವದಕ್ಕೆ ಇವರು ಯಾರು?'

'ನಾನು ವಿಚಾರಿಸುತ್ತೇನೆ.'

'ಅದೇನಾದರೂ ತೀರ್ಮಾನವಾಗಲೇಬೇಕು. ಚಿಲ್ಲರೆ! ಜನರಿಗೆ ಇಲ್ಲದ ಬೆಲೆ ಕೊಟ್ಟು ತಲೆಯ ಮೇಲೆ ಏರಿಸಿಕೊಂಡು ಕುಳಿತರೆ ಆಗುವುದೇ ಹೀಗೆ' ಕಂಪನಿಯಲ್ಲಿ ಬಹಳ ದಿನಗಳಿಂದಲೂ ಕೆಲಸಮಾಡಿಕೊಂಡಿದ್ದವ, ಎರಡು ಹೆಚ್ಚು ಮಾತನಾಡಿದರೂ ನಡೆಯುತ್ತಿತ್ತು. ಅದರ ಸಂಪೂರ್ಣ ಉಪಯೋಗವನ್ನು ಮಾಡಿಕೊಂಡೇ ಬಿಟ್ಟ.

'ವಿಚಾರಿಸುತ್ತೇನೆ ಎಂದರೆ ಆಗಲಿಲ್ಲವೇನು? ಹೋಗು ನಾನು ಈಗ ಬರುತ್ತೇನೆ' ಎಂದು ಶಾಮನ ಕಡೆ ನೋಡಿದರು ರಾಯರು.

ರಾಯರು ಗ್ರೀನ್ ರೂಮಿನ ಕಡೆ ನಡೆದರು. ಶಾಮನು ಅವರನ್ನು ಹಿಂಬಾಲಿಸಿದ. ಏನೋ ವಿಶೇಷ ನಡೆದದೆ ಎಂದು ಬದಿಯಲ್ಲಿದ್ದವರೂ ಅವರನ್ನು ಹಿಂಬಾಲಿಸಿ ನಡೆದರು.

ಸೂಸಿ ಅರ್ಧಡ್ರೆಸ್ ಮಾಡಿಕೊಂಡು ಬಿಕ್ಕಿ ಬಿಕ್ಕಿ ಅಳುತ್ತ ಒಂದು ಕುರ್ಚಿಯ ಮೇಲೆ ಕುಳಿತಿದ್ದಳು. ರಾಯರು ಅವಳನ್ನು ನೋಡುತ್ತ

ನಿಂತರು. ಹತ್ತಿರ ಹೋಗುವ ಧೈರ್ಯವಾಗಲಿಲ್ಲ. ಶಾಮನಿಗೆ ಏನು ಮಾಡಬೇಕೊ ತಿಳಿಯಲಿಲ್ಲ.

'ಶಾಮರಾಯರೆ ಸ್ವಲ್ಪ ಸಮಾಧಾನ ಮಾಡಿರಿ' ರಾಯರು ಹೇಳಿದರು.

ಶಾಮ ಸೂಸಿಯ ಬಳಿಗೆ ಹೋದ, 'ಇರಲಿ ಬಿಡು, ಅಳಬೇಡ. ಅಳುವುದಕ್ಕೇನಾಯಿತೀಗ ? ಅಂದ.

'ಹೊಡೆತ ತಿಂದವರು ನಾವು, ಅತ್ತು ಹೆದರಿಕೆ ತೋರಿಸುವವರು ಅವರು. ಹೇಗಿದೆ ನ್ಯಾಯ ? ' ಡ್ರೆಸ್ ಕೀಪರ್ ಹೇಳಿದ.

'ಅಳಬೇಡಿರಿ ತಾರಿಣಿದೇವಿಯವರೆ, ನಡೆದ ಸಮಾಚಾರವೇನು ? ' ರಾಯರು ಕೇಳಿದರು.

'ನಾಳಿನಿಂದ ನನ್ನ ಡ್ರೆಸ್ ನಾನೇ ಮಾಡಿಕೊಳ್ಳುತ್ತೇನೆ. ನನಗೆ ಯಾರ ಸಹಾಯವೂ ಬೇಕಿಲ್ಲ. ' ಸೂಸಿ ಹೇಳಿದಳು.

'ಅದೇನಾದರೂ ಮಾಡುವಾ. ಈಗ ನಡೆದ ಸಮಾಚಾರವೇನು ? ' ರಾಯರು ಪುನಃ ಕೇಳಿದರು.

ಸೂಸಿ ಉತ್ತರಕೊಡಲಿಲ್ಲ.

'ನಡೆಯುವುದೇನು, ಸಮಾಚಾರವೇನು ! ಮಾರಿಗೆ ಗೇಣು ದಪ್ಪ ಬಣ್ಣ ಬಳಿದುಕೊಂಡಿದ್ದರು, ಹೀಗೆ ಬೇಡ ಎಂದು ತೆಳ್ಳಗೆ ಮಾಡುತ್ತಿದ್ದೆ. ಕೆನ್ನೆಗೆ ಹೊಡೆದರು. ' ಡ್ರೆಸ್ ಕೀಪರ್ ಹೇಳಿದ.

'ಇಲ್ಲಿ ನೋಡಿರಿ ನೀವು ಸಿನೇಮಾಕ್ಕೆ ಹೊಸಬರು. ಬಣ್ಣಹಚ್ಚಿಕೊಳ್ಳುವುದಕ್ಕೆ ಯಾರ ಸಹಾಯವೂ ಬೇಡ, ನನಗೆ ಬಂದಂತೆ ಬಣ್ಣ ಹಚ್ಚಿಕೊಳ್ಳುತ್ತೇನೆ ಎಂದರೆ ಹೇಗೆ ? ಇವನನ್ನಿಟ್ಟಿರುವುದೇ ಆ ಕೆಲಸಕ್ಕಾಗಿ. ನೀವು ವಹಿಸುವ ಪಾತ್ರಗಳಿಗೆ ಅನುರೂಪವಾಗಿ ಅವನು ಬಣ್ಣ ಹಚ್ಚುತ್ತಾನೆ. ಇವನ ಸಹಾಯ ನೀವು ತೆಗೆದುಕೊಳ್ಳಲೇಬೇಕು. ' ರಾಯರು ಹೇಳಿದರು.

'ಇದೊಳ್ಳೆ ಆಗ್ರಹ ! ನನಗೆ ಬೇಡ ' ಸೂಸಿ ಸಿಟ್ಟಿನಲ್ಲಿಯೆ ಮಾತನಾಡಿದಳು.

'ಹೀಗೆ ನೀವು ಹಟತೊಟ್ಟರೆ ಹೇಗೆ ಮಾಡುವುದು ? ಅವನು ಅನುಭವಿಕ' ರಾಯರು ನಿರಾಶರಾಗಿ ಮಾತನಾಡಿದರು.

'ಅವನ ಅನುಭವ ನನ್ನ ಪ್ರಾಣಕ್ಕೆ ಬರುತ್ತದೆ. ಬಣ್ಣ ಹಚ್ಚುವ ನೆವದಿಂದ ಗಲ್ಲ ಹಿಡಿಯುವದಕ್ಕೆ ಬರುತ್ತಾನೆ' ಸೂಸಿಯೆಂದಳು.

ರಾಯರು ಡ್ರೆಸ್ ಕೀಪರ್‌ನ ಕಡೆ ನೋಡಿದರು.

'ಯಾರು ನಾನೆ?' ಡ್ರೆಸ್ ಕೀಪರನಿಗೆ ಮುಂದೆ ಮಾತನಾಡಲು ಬರಲಿಲ್ಲ.

ಎರಡು ನಿಮಿಷ ಎಲ್ಲರೂ ಸ್ತಬ್ಧರಾಗಿದ್ದರು. ಮನದೊಳಗೆಯೆ ಎಲ್ಲರೂ ಮುಗುಳುನಗೆ ನಗುತ್ತಲಿದ್ದರು. ರಾಯರು ಏನು ಹೇಳುವರೊ ಎಂದು ಎಲ್ಲರೂ ಕಾದುಕೊಂಡಿದ್ದರು.

'ಕತ್ತೆಗೆ ಆಗುವ ಹಾಗೆ ವಯಸ್ಸಾಯಿತಲ್ಲ. ಹೆಂಗಸರ ಜೊತೆಗೆ ಹೇಗೆ ವರ್ತಿಸಬೇಕು ತಿಳಿಯುವುದಿಲ್ಲವೇನು ನಿನಗೆ?' ರಾಯರು ಗದ್ದರಿಸಿದರು.

'ನಾನೇನೂ ಮಾಡಿಲ್ಲ....' ಡ್ರೆಸ್ ಕೀಪರ್ ತಡವರಿಸಿದ.

'ಹೋಗು ಅವರಿಗೆ ಬೇಕಾದ ಸಾಮಾನುಗಳನ್ನು ತಂದುಕೊಡು. ಏಳಿರಿ ತಾರಿಣಿದೇವಿಯವರೇ ಬೇಗ ಡ್ರೆಸ್ ಮಾಡಿಕೊಳ್ಳಿರಿ. ಇದೆಲ್ಲವನ್ನೂ ನಾನು ನಂತರ ವಿಚಾರಿಸುತ್ತೇನೆ. ಹೊತ್ತಾಯಿತು ಬೇಗ ಸಿದ್ಧರಾಗಿರಿ' ಎನ್ನುತ್ತ ಹೊರಗೆ ಹೋದರು.

ರಾಯರು ತನ್ನ ಮಾತಿಗೆ ಹೆಚ್ಚು ಬೆಲೆ ಕೊಡದೆ ಇಂತಹ ವಿಷಯವನ್ನು ಇಷ್ಟು ಹಗುರಾಗಿ ತೆಗೆದುಕೊಂಡು ಪುನಃ ಅವನಿಗೇ ಡ್ರೆಸ್ಸು ಕೊಡಲು ಹೇಳಿ ಹೊರಟು ಹೋದದ್ದು ಕಂಡು ಸೂಸಿಗೆ ಸಂಕಟವಾಯಿತು. ಇನ್ನು ಶಾಮನಿಗೆ ಹೇಳಬೇಕು. ಡ್ರೆಸ್ ಕೀಪರ ಅಂತಹ ಮನುಷ್ಯನಲ್ಲ, ತಪ್ಪು ತಿಳಿದುಕೊಳ್ಳಬೇಡ ಎಂದು ಉಪದೇಶ ಮಾಡುವ. ಸಿನೇಮಾ ಕಂಪನಿಗೆ ಬಂದ ಮೇಲೆ ಇಂತಹ ಅಪಮಾನಗಳನ್ನು ಸಹಿಸಿಕೊಳ್ಳಲೇಬೇಕು ಎಂದು ಮನಸ್ಸು ಕಲ್ಲು ಮಾಡಿ ಮೇಲಕ್ಕೆದ್ದಳು.

ಶಾಮನು ಇವಳನ್ನೇ ನೋಡುತ್ತ ನಿಂತಿದ್ದ.

# ೧೩

ತಾರಿಣಿಯು ಕಮಲೆಗೆ ಮಾಡಿದ ಅನ್ಯಾಯವು ಅಷ್ಟಿಷ್ಟಲ್ಲ. ಅವಳಿಗೆಂದು ಮೀಸಲಾಗಿದ್ದ ನಾಯಕಿಯ ಪಾತ್ರವನ್ನು ಕಸಿದುಕೊಂಡು ಅವಮಾನಗೊಳಿಸಿದ್ದಲ್ಲದೆ ಅವಳ ಹೃದಯೇಶ್ವರನನ್ನು—ಮನೋವಲ್ಲಭನನ್ನು-ಮಾಧವನನ್ನು ತನ್ನ ಕಡೆ ಸೆಳೆದುಕೊಳ್ಳುತ್ತಲಿದ್ದಾಳೆ. ತಾರಿಣಿಯ ಹೆಸರೆತ್ತುತ್ತಲೆ ಕಮಲೆಯ ಮೈಯೆಲ್ಲವೂ ಕುದಿಯುತ್ತಿತ್ತು. ದ್ವೇಷಾಸೂಯೆಗಳಿಂದ ತುಂಬಿ ತುಳುಕುತ್ತಿದ್ದಳು.

ಮಾಧವನು ತಿರುಗಾಡುವುದಕ್ಕೆ ಹೋಗುವಾಗ ಕಮಲೆಯನ್ನು ಬಿಟ್ಟು ಎಂದೂ ಹೋಗುತ್ತಿರಲಿಲ್ಲ. ಅವಳು ಬರುವುದಿಲ್ಲವೆಂದರೆ ತಾನೂ ಸತ್ಯಾಗ್ರಹ ಮಾಡಿಯಾದರೂ ಮನವೊಲಿಸಿ ಅವಳನ್ನು ಕರೆದುಕೊಂಡೇ ಹೋಗುತ್ತಿದ್ದನು. ಯಾರು ಏನೇ ಹೇಳಲಿ ಸಿನೇಮಾಕ್ಕೆ ಹೋದಾಗಲೆಲ್ಲ ಅವಳ ಬದಿಯ ಕುರ್ಚಿಯ ಮೇಲೆಯೇ ಕುಳಿತುಕೊಳ್ಳುತ್ತಿದ್ದನು. ಊಟವಾಗಲಿ, ಉಪಹಾರವಾಗಲಿ, ಪೇಯವಾಗಲಿ ಕಮಲೆಯು ಮೊದಲು ಸ್ವೀಕರಿಸಬೇಕು, ಅನಂತರವೇ ಮಾಧವನು ಅದಕ್ಕೆ ಕೈಹಚ್ಚುತ್ತಿದ್ದ.

ಈಗ ಮಾತ್ರ ಎಲ್ಲವೂ ವಿಪರೀತವಾಗಿದೆ. ಕಮಲೆಯು ತಾನಾಗಿಯೆ ಮಾತನಾಡಿಸಿದರೂ ಮಾಧವನು ಸರಿಯಾಗಿ ಎರಡು ಮಾತನಾಡುತ್ತಿರಲಿಲ್ಲ. ಇನ್ನು ಸಲಿಗೆ ಮಾಡುವುದಂತೂ ದೂರವೇ ಉಳಿಯಿತು. ಇಂದು ಸಿನೇಮಾಕ್ಕೆ ಹೋಗುವಾ ಎಂದು ಕಮಲೆಯು ಒತ್ತಾಯ ಪಡಿಸಿದರೂ ಏನಾದರೊಂದು ಕೊಂಕು ಕಾರಣವನ್ನು ಮುಂದೆ ಮಾಡಿ ಮಾಧವನು ತಪ್ಪಿಸಿಕೊಳ್ಳುತ್ತಿದ್ದ. ಅವಳ ಜೊತೆಯಲ್ಲಿ ತಿರುಗಾಡುವುದಕ್ಕೆ ಹೋಗುವುದನ್ನಂತೂ ಬಿಟ್ಟೇಬಿಟ್ಟಿದ್ದ. ಎಂದಾದರೂ ಅವಳು ತೀರ

ಒತ್ತಾಯ ಪಡಿಸಿದರೆ ಕೈನೋವು, ಕಾಲುನೋವು, ಮೈಯಲ್ಲಿ ಸರಿಯಾ ಗಿಲ್ಲ ಎಂದು ಸಾವಿರ ಕಾರಣಗಳನ್ನು ಮುಂದೆ ಮಾಡಿ ನಿರ್ವಾಹವಿಲ್ಲದೆ ಒಪ್ಪಿಕೊಳ್ಳುತ್ತಿದ್ದ. ಆಗಲೂ ಸರಿಯಾಗಿ ಅವಳೊಡನೆ ಎರಡು ಮಾತು ಗಳನ್ನೂ ಆಡುತ್ತಿರಲಿಲ್ಲ. ತನ್ನ ಬೆನ್ನ ಹಿಂದೆಯೆ ನಾಯಿಯಂತೆ ಅವನು ಅಲೆಯುತ್ತಿರುವಾಗ ಅವನ ಪ್ರೇಮದ ಬೆಲೆಯು ಅವಳಿಗೆ ತಿಳಿಯಲಿಲ್ಲ ಈಗ ಮಾತ್ರ ಅವನು ಒಂದು ದಿವಸ ತನ್ನ ಸಂಗಡ ಸಂತೋಷವಾಗಿದ್ದರೆ ಸಾಕು, ಒಂದು ಸಾವಿರ ರೂಪಾಯಿಗಳನ್ನು ಕೊಡಬಲ್ಲೆ ಎಂದು ಹುಚ್ಚಿ ಯಂತೆ ತನ್ನಷ್ಟಕ್ಕೇ ಬಡಬಡಿಸುತ್ತಿದ್ದಳು.

ತಾರಿಣಿಯ ರೂಪ, ಹಾಡು, ಅಭಿನಯ ಇಷ್ಟೆಲ್ಲ ಅನರ್ಥಕ್ಕೆ ಕಾರಣ ಎಂದು ಕಮಲೆಯು ನಿಶ್ಚಯಿಸಿದಳು. ಅವಳ ರೂಪ–ಅದರಲ್ಲಿ ಅಂತಹ ವಿಶೇಷತೆಯೇನೂ ಅವಳಿಗೆ ಕಂಡು ಬರಲಿಲ್ಲ. ತನಗಿಂತಲೂ ಅವಳು ಸುಂದರಳಲ್ಲವೆಂದೇ ಅವಳು ತೀರ್ಮಾನಿಸಿದಳು. ಆದರೆ ಈ ಗಂಡಸರ ಕಣ್ಣುಗಳನ್ನೇ ನಂಬುವುದಕ್ಕಾಗುವುದಿಲ್ಲ ಎಂದುಕೊಂಡಳು. ಇಂದು ಸುಂದರವಾಗಿ ಕಂಡವರು ನಾಳೆ ಕುರೂಪಿಯಾಗಿ ಕಾಣಬಹುದು. ತಾರಿ ಣಿಯ ಅಭಿನಯವಂತೂ ತೀರ ಸಪ್ಪೆಯಾಗಿದೆ, ಚಿತ್ರಪಟಕ್ಕೆ ಅದು ಎಷ್ಟರ ಮಟ್ಟಿಗೂ ಸಾಕಾಗಲಾರದು. ಹೀಗಿದ್ದರೂ ಡೈರೆಕ್ಟರರ ಮೇಲೆ ಮಾತ್ರ ತಾರಿಣಿಯು ಒಳ್ಳೇ ಪರಿಣಾಮ ಮಾಡಿದ್ದಾಳೆ. ಡೈರೆಕ್ಟರರೇ ಅವಳ ಈ ಹೆಚ್ಚಳಕ್ಕೆ ಮ್ಣೂಲ ಕಾರಣರು.

ಡೈರೆಕ್ಟರರ ನೆನಪಾಗುತ್ತಲೆ ಕಮಲೆಗೆ ಅನೇಕ ಮಾತುಗಳು ಸೂಚಿಸಿ ದವು. ತಾರಿಣಿಯೆಂದರೆ ಡೈರೆಕ್ಟರರಿಗೊಂದು ಹುಚ್ಚು. ಅವರನ್ನು ಮಂಕು ಮಾಡಿ ಬಿಟ್ಟಿದ್ದಾಳೆ. ಗಳಿಗೆಗೆ ಹತ್ತುಸಲ ತಾರಿಣಿಯ ಹೆಸರು ತೆಗೆದು ಕೊಳ್ಳದಿದ್ದರೆ ಅವರ ಜೀವಕ್ಕೆ ಸಮಾಧಾನವಿಲ್ಲ. ಈ ವಿಷಯ ಮಾಧವ ನಿಗೆ ತಿಳಿದಿದೆಯೋ ಇಲ್ಲವೊ! ತಿಳಿದಿದ್ದರೆ ಹೀಗೆಂದೂ ಅವಿಚಾರಿಯಂತೆ ನಡೆಯುತ್ತಿರಲಿಲ್ಲ. ಈ ಸಂಬಂಧದಲ್ಲಿ ತನಗೆ ಸುಖವಾಗುವುದಿಲ್ಲ ಎಂದು ತನಗೇ ತಿಳಿದುಬರುತ್ತಿತ್ತು. ಅವನಿಗೆ ಇದೆಲ್ಲವನ್ನು ತಿಳಿಸಬೇಕು. ಸರಿ ಯಾಗಿ ಎರಡು ಮಾತನ್ನಾದರೂ ಆಡಿದರೆ ಎಲ್ಲವನ್ನು ಹೇಳಬಹುದು.

ತಾರಿಣಿಯ ಕಂಠವು ಚೆನ್ನಾಗಿದೆ ಎಂದು ಎಲ್ಲರೂ ಮನವಾರೆ ಹೊಗಳುತ್ತಲಿದ್ದಾರೆ. ಈ ವರೆಗಿನ ಎರಡು ಹಾಡುಗಳು ಚೆನ್ನಾಗಿಯೇ ರಿಕಾರ್ಡು ಆಗಿವೆ. ಇನ್ನು ಮುಂದೆ ಹಾಗಾಗಕೂಡದು. ಅದಕ್ಕೇನು ಮಾಡಬೇಕು? ಅವಳಿಗೆ ಮತ್ತೊಂದು ವಿಚಾರವು ಹೊಳೆಯಿತು. ಸೌಂಡ ರಿಕಾರ್ಡಿಸ್ಟ (Sound recordist) ತುಂಬಾ ರಸಿಕನಾಗಿದ್ದ. ಮೊದಲಿನಿಂದಲೂ ಕಮಲೆಯ ಮೇಲೆ ಅವನ ಕಣ್ಣಿತ್ತು. ಅವನೇನೂ ಸ್ವಲ್ಪ ವಯಸ್ಸಾದವನೇ, ಆದರೂ ಹೆಣ್ಣೆಂದರೆ ಅವನಿಗೊಂದು ಹುಚ್ಚು. ವಯಸ್ಸಾಗಿದ್ದರೂ ಚಪಲತೆಯು ಹೋಗಿರಲಿಲ್ಲ. ಅನೇಕ ಸಲ ಕಮಲೆಗೆ ಅನೇಕ ಬಗೆಯ ಉಡುಗೊರೆಗಳನ್ನು ತಂದು ಕೊಟ್ಟಿದ್ದ. ಆದರೆ ಮಾಧವನಂತಹ ಹುಡುಗನು ಅವಳ ಕೈಯಲ್ಲಿರುವಾಗ ಆ ಮುದಿಗೂಬೆಯ ಕಡೆಗೆ ಹೇಗೆ ಮನಸ್ಸು ಹರಿಯಬೇಕು? ಅವನ ಹುಚ್ಚುತನಕ್ಕೆ ಮನದಲ್ಲಿಯೇ ನಗುತ್ತ ಉಡುಗೊರೆಗಳನ್ನು ಪೆಟ್ಟಿಗೆ ಕಾಣಿಸುತ್ತಿದ್ದಳು.

ಈಗ ಮಾತ್ರ ಅವನ ಹುಚ್ಚಿನ ಉಪಯೋಗವನ್ನು ತಾನು ಮಾಡಿಕೊಳ್ಳಬಹುದು ಎಂದು ಯೋಚಿಸಿದಳು. ಅವನ ಸಂಗಡ ಸಲಿಗೆ ಮಾಡಲು ಪ್ರಾರಂಭಿಸಿದಳು. ಅದೂ ಮಾಧವನ ಎದುರಿನಲ್ಲಿಯೇ. ಮಾಧವನ ಮೇಲಿನ ಸಿಟ್ಟು ತೀರಿಸಿಕೊಳ್ಳುವುದಕ್ಕೆ ಇದೊಂದು ಒಳ್ಳೇ ಉಪಾಯವೆಂದೇ ಅವಳು ಭಾವಿಸಿಕೊಂಡಳು. ಇದರಿಂದ ಮಾಧವನು ಅವಳ ವಿಷಯದಲ್ಲಿ ಇನ್ನಿಷ್ಟು ಜಿಗುಪ್ಸೆಯನ್ನು ತಾಳಬಹುದು ಎಂಬ ಯೋಚನೆಯು ಅವಳಿಗೆ ಬರಲಿಲ್ಲ.

ಅವನನ್ನು ಸಂಪೂರ್ಣವಾಗಿ ತನ್ನ ಕೈಯಲ್ಲಿ ತೆಗೆದುಕೊಂಡಳು. ಅದಕ್ಕೆ ಬಹಳ ಕಾಲವೂ ಹಿಡಿಯಲಿಲ್ಲ. ತಾರಿಣಿಯ ಹಾಡುಗಳೆಲ್ಲವನ್ನು ಕೆಡಿಸಿಬಿಡುವಂತೆ ಅವನನ್ನು ಪ್ರೇರೇಪಿಸಿದಳು. ಅವನೂ ಸಮ್ಮತಿಸಿದ. ಡೈರೆಕ್ಟರರಿಗೆ ಈ ವಿಷಯ ತಿಳಿದರೆ ತನ್ನ ಗತಿಯೇನಾಗಬಹುದು ಎಂಬ ಯೋಚನೆ ಬಂದರೂ ಅದಕ್ಕೆ ಹೆಚ್ಚು ಬೆಲೆ ಕೊಡದೆ ಅವಳ ಮಾತಿಗೆ ಒಪ್ಪಿಕೊಂಡು ಭಾಷೆಯನ್ನು ಕೊಟ್ಟ. ಅದರಂತೆ ಮಾಡಿಯೂ ಮಾಡಿದ. ತನ್ನ ಕೈವಾಡವನ್ನು ತೋರಿಸಿಯೇ ಬಿಟ್ಟ. ಡೈರೆಕ್ಟರರು ಟ್ರಾಯಲ್ಲಿನಲ್ಲಿ ಇದನ್ನು ನೋಡಿ

ದರು. ಏಕೆ ಹೀಗಾಯಿತು ಎಂಬುದು ಅವರಿಗೆ ಸರಿಯಾಗಿ ತಿಳಿಯಬರ ದಿದ್ದರೂ ನೊಂದುಕೊಂಡರು. ಆ ಭಾಗವನ್ನೇ ಸುಡಿಸಿಬಿಟ್ಟು ರಿಟೇಕ್ (Retake) ತೆಗೆದುಕೊಳ್ಳಲು ಹಚ್ಚಿದರು. ಡೈರೆಕ್ಟರರು ಇಷ್ಟರ ವರೆಗೆ ಹೋಗಬಹುದು ಎಂದುಕೊಂಡಿರಲಿಲ್ಲ ಈಗ ಮಾತ್ರ ನಮ್ಮ ರಿಕಾರ್ಡಿಸ್ಟ ಬೆದರಿದ. ಆ ನೌಕರಿಯೊಂದಿದ್ದರೆ ಕಮಲೆಯಂತಹ ಬೇರೆ ಹುಡುಗಿಯರೂ ಸಿಕ್ಕಬಹುದು ಎಂದುಕೊಂಡನೇನೋ ! ಕಮಲೆಯು ಹತಾಶಳಾದಳು.

ಶಾಮುನ ಮುಗ್ಧಸ್ವಭಾವವನ್ನು ಕಂಡು ಕಮಲೆಗೆ ಬಹಳ ಆಶ್ಚರ್ಯ ವಾಗುತ್ತಿತ್ತು. ತಾರಿಣಿಯು ಏನು ಮಾಡಿದರೂ ಅವನು ಸಿಟ್ಟಿನ್ನುತ್ತಿರಲಿಲ್ಲ. ಇತ್ತಿತ್ತಲಾಗಿ ಅವಳು ಒಬ್ಬಳೇ ಸ್ಟೂಡಿಯೊಕ್ಕೆ ಹೋಗುತ್ತಿದ್ದಳು. ಊಟ, ಉಪಚಾರ, ಅಲ್ಲದೆ ಬೇರೆ ಯಾವ ಅನಾನುಕೂಲತೆಗಳಾದರೂ ಶಾಮುನಿಗೆ ಹೇಳಿ ಪರಿಹಾರ ಮಾಡಿಕೊಳ್ಳಬೇಕೆಂದು ಕಾದುಕೊಂಡಿರುತ್ತಿರಲಿಲ್ಲ. ಈಗ ಸ್ವಯಂ ಶೂರಳು. ಅಲ್ಲಿಯ ಡೈರೆಕ್ಟರರಿಗೆ, ಪಾರ್ಟುದಾರರಿಗೆ, ಸೇವಕರಿಗೆ ಯಾರಿಗಾದರೂ ಹೇಳಿ ತನ್ನ ಕೆಲಸಗಳನ್ನು ಮಾಡಿಸಿಕೊಂಡು ಬಿಡುತ್ತಿ ದ್ದಳು. ಒಂದೊಂದು ದಿನ ಸ್ಟೂಡಿಯೊದಿಂದ ಹಾಗೆ ಸಿನೇಮಾಕ್ಕೆ ಡೈರೆಕ್ಟ ರರ ಜೊತೆಗೆ ಇಲ್ಲವೆ ಮಾಧವನ ಜೊತೆಗೆ ಹೋದರೂ ಹೋಗಿ ಬಿಡುತ್ತಿ ದ್ದಳು. ಇಂದಿನ ಸಿನೇಮಾದಲ್ಲಿ ಆ ಅಭಿನಯವು ಹೀಗಿದೆ, ಈ ಹಾಡು ಹಾಗಿದೆ ಎಂದು ಅವಳ ಬಾಯಿಯಲ್ಲಿ ನೀರು ಬಿಡುವಂತೆ ವರ್ಣಿಸಿ ಅವಳ ಮನವೊಲಿಸುವ ಕಲೆಯನ್ನು ಅವರಿಬ್ಬರೂ ಚೆನ್ನಾಗಿ ಸಾಧಿಸಿಕೊಂಡಿದ್ದರು.

ಶಾಮುನಿಗೆ ಇವನ್ನೆಲ್ಲ ಹೇಗೆ ಹೇಳುವುದು ! ಅವನಿಗೆ ಇದಾವುದೂ ಗೊತ್ತಿಲ್ಲ–ಗೊತ್ತುಮಾಡಿಕೊಳ್ಳುವ ಇಚ್ಛೆಯನ್ನೂ ಅವನು ತೋರಿಸುತ್ತಿರ ಲಿಲ್ಲ. ಒಂದು ಸಲವಾದರೂ ಅವನು ಕಮಲೆಯ ಸಂಗಡ ಚೆನ್ನಾಗಿ ಮಾತನಾಡಿರಲಿಲ್ಲ. ಇವಳಾಗಿಯೇ ಎಂದಾದರೂ ಮಾತನಾಡಿಸಿದಾಗ ಸರಿಯಾಗಿ ಉತ್ತರವನ್ನು ಕೊಡದೆ ತಲೆಬಾಗಿಸಿಕೊಂಡು ಹೋಗಿ ಬಿಡು ತ್ತಿದ್ದ. ಅಂಥವನಿಗೆ 'ನಿನ್ನ ಹೆಂಡತಿಯ ನಡತೆ ಸರಿಯಾಗಿಲ್ಲ, ಎಚ್ಚರ ವಾಗಿರು' ಎಂದು ಹೇಗೆ ಹೇಳುವುದು ? ಒಂದು ವೇಳೆ ಕಮಲೆಯು ಕಲ್ಲು ಮನಸ್ಸುಮಾಡಿ ಹೇಳಿದರೂ ಅವನು ಅದನ್ನು ನಂಬುವನೇ ?

ಅಂತೂ ಶಾಮನಿಗೆ ಈ ವಿಷಯ ತಿಳಿಸಬೇಕೆಂದು ಕಮಲೆಯು ನಿರ್ಧರಿಸಿದಳು. ಅದನ್ನು ಬಿಟ್ಟರೆ ಬೇರೆ ಮಾರ್ಗವೇ ಅವಳಿಗೆ ತೋಚಲಿಲ್ಲ. ಅದಕ್ಕೆ ಸಾಕಷ್ಟು ವಿಷಯ ಸಂಗ್ರಹ ಮಾಡಿಕೊಳ್ಳುವ ಸಿದ್ಧತೆ ನಡೆಸಿದಳು. ತನ್ನ ಪಾತ್ರವಿರಲಿ, ಇಲ್ಲದಿರಲಿ ಎಲ್ಲರ ಜೊತೆಗೆ ನಿತ್ಯದಲ್ಲಿಯೂ ತಪ್ಪದೆ ಸ್ಟೂಡಿಯೊಕ್ಕೆ ಹೋಗುತ್ತಿದ್ದಳು. ಮಾಧವ, ತಾರಿಣಿಯರ ಪ್ರತಿಯೊಂದು ಕೃತಿಯನ್ನೂ ಹಾವಭಾವವನ್ನೂ ಕಣ್ಣಲ್ಲಿ ಎಣ್ಣೆ ಹಾಕಿಕೊಂಡು ನೋಡುತ್ತ ಕುಳಿತುಕೊಳ್ಳುತ್ತಿದ್ದಳು.

ಮಾಧವನು ಶೂಟಿಂಗ ನಡೆದಾಗ ವಿಶ್ರಾಂತಿಯ ಕಾಲಕ್ಕೆ ಡ್ರಿಂಕ್ಸ್ ತೆಗೆದುಕೊಳ್ಳುವಾಗಲೆಲ್ಲ ತಾರಿಣಿಗಾಗಿ ಒಂದು ಡ್ರಿಂಕ್ಸನ್ನು ಹೆಚ್ಚಾಗಿಯೇ ಹೇಳುತ್ತಿದ್ದ. ಮೊದಲು ಒಂದೆರಡು ದಿನ ತಾರಿಣಿ ಸಂಕೋಚ ಪಟ್ಟುಕೊಂಡರೂ ಈಗ ಏನೂ ಅನುಮಾನ ಮಾಡದೆ ಅವನ್ನು ಸ್ವೀಕರಿಸುತ್ತಿದ್ದಳು. ಕಮಲೆಯನ್ನು ಬಿಟ್ಟು ಒಂದು ನೀರನ್ನು ಕೂಡ ಕುಡಿಯದಿದ್ದವನು ಈಗ ಅವಳ ಎದುರಿನಲ್ಲಿಯೇ ಅವಳು ತನ್ನನ್ನೇ ದಿಟ್ಟಿಸುತ್ತಿದ್ದರೂ ಅವಳ ಕಡೆ ಕಣ್ಣೆತ್ತಿ ಕೂಡ ನೋಡದೆ ಡ್ರಿಂಕ್ಸ್ ಕುಡಿಯುತ್ತಿದ್ದ. ಆಗಾಗ ತಾರಿಣಿಯ ಕಡೆ ನೋಡಿ ಮುಗುಳು ನಗೆ ನಗುತ್ತಲಿದ್ದ. ಕಮಲೆಯು ತನ್ನ ಕಡೆ ನೋಡುತ್ತಲಿದ್ದಾಳೆ ಎಂಬ ಅರಿವು ಉಂಟಾಗುತ್ತಲೂ ದೃಷ್ಟಿಯನ್ನು ಬದಲಾಯಿಸುತ್ತಿದ್ದ.

ಮಾಧವನೆಂದರೆ ತಾರಿಣಿಗೆ ಒಂದು ಬಗೆಯ ಅಭಿಮಾನವು ಜಾಗೃತವಾಗುತ್ತಲಿತ್ತು. ಅದು ಕೇವಲ ಅಭಿಮಾನವು ಮಾತ್ರ. ಅವನ ಎತ್ತರವಾದ ದೇಹ, ಹರವಾದ ಎದೆ, ಬೀಸಾದ ಕೈಗಳು, ಅಗಲವಾದ ಮುಖ ಎಲ್ಲವೂ ಒಂದಕ್ಕೊಂದು ಒಪ್ಪುವಂತಿದ್ದವು. ಕಂಠದಲ್ಲಿ ತುಂಬಾ ಪೆಡಸಿದ್ದಿತು. ದಪ್ಪವಾದ ದನಿಯಲ್ಲಿ ಹಾಡತೊಡಗಿದರೆ ಮೈ ಮೇಲೆ ಮುಳ್ಳು ಬರುತ್ತಿದ್ದಿತು. ಮಾತುಗಳಲ್ಲಿ ಕೂಡ ಶಕ್ತಿಯು ತುಂಬಿರುತ್ತಿತ್ತು. ದೊಡ್ಡ ಮೂಗು, ದಪ್ಪನ್ನ ಹುಬ್ಬುಗಳು ಬಿರುಸಾಗಿ ಕಂಡರೂ ಅವುಗಳಲ್ಲಿ ಒಂದು ಬಗೆಯ ಮಾರ್ದವವಿತ್ತು. ಅಂತೆಯೆ ತಾರಿಣಿಯು ಅವನನ್ನು ಆಗಾಗ

ನೋಡುತ್ತಿದ್ದಳು. ಆ ನೋಟದಲ್ಲಿ ಯಾವ ಭಾವವೂ ಇರಲಿಲ್ಲ. ಆದರೂ ಕಮಲೆಯ ಹೊಟ್ಟೆಯಲ್ಲಿ ಅಲುಗಿಟ್ಟಂತಾಗುತ್ತಿತ್ತು.

ಕಥಾನಾಯಕಿಯ ಮನೆಯ ಡ್ರಾಯಿಂಗ ರೂಮಿನಲ್ಲಿಯ ಸಂದರ್ಭ ವೊಂದು ಶೂಟಾಗುತ್ತಲಿತ್ತು. ನಾಯಕಿಯು ಶ್ರೀಮಂತರ ಮಗಳು. ಶ್ರೀಮಂತರ ಡ್ರಾಯಿಂಗ ರೂಮಿಗೆ ಒಪ್ಪುವ ರೀತಿಯಲ್ಲಿ ಕೋಣೆಯನ್ನು ಮೇಜು, ಕುರ್ಚಿ, ಆಸನ, ಕಪಾಟು ಮೊದಲಾದವುಗಳಿಂದ ಶೃಂಗರಿಸಿ ದ್ದರು. ಎರಡು ನಿಲುವುಗನ್ನಡಿಗಳನ್ನೂ ಇಟ್ಟಿದ್ದರು.

ಚಿಕ್ಕ ದೃಶ್ಯವೊಂದು ಶೂಟಾಯಿತು. ಅಷ್ಟರಲ್ಲಿಯೇ ಊಟದ ವೇಳೆ ಯಾದ್ದರಿಂದ ಎಲ್ಲರೂ ಊಟಕ್ಕೆ ಹೋದರು. ಎಲ್ಲರಿಗೂ ಬಿಡುವಾದಾಗ ಕಮಲೆಗೆ ಇನ್ನೂ ಹೆಚ್ಚಿನ ಕೆಲಸವಿರುತ್ತಿತ್ತು. ಇನ್ನೂ ಹೆಚ್ಚು ಜಾಗರೂಕತೆ ಯಿಂದ ಮಾಧವ ತಾರಿಣಿಯರನ್ನೇ ನೋಡುತ್ತ ಕುಳಿತುಕೊಳ್ಳುತ್ತಿದ್ದಳು.

ಒಂದು ನಿಲುವುಗನ್ನಡಿಯ ಎದುರು ಮಾಧವನು ಕುಳಿತಿದ್ದನು; ಇನ್ನೊಂದರ ಎದುರು ತಾರಿಣಿಯು ಕುಳಿತಿದ್ದಳು. ತಾರಿಣಿಯು ಒಂದು ಬದಿಗೆ ಕುಳಿತಿದ್ದರಿಂದ ಅವಳು ಇತರರಿಗೆ ಕಾಣುವಂತಿರಲಿಲ್ಲ. ಒಬ್ಬರ ಪ್ರತಿಬಿಂಬವು ಮತ್ತೊಬ್ಬರಿಗೆ ಕನ್ನಡಿಯಲ್ಲಿ ಕಾಣಿಸುತ್ತಿತ್ತು. ಮಾಧವನು ತನ್ನೆದುರಿನ ಕನ್ನಡಿಯಲ್ಲಿ ಕಾಣಿಸುತ್ತಿದ್ದ, ತಾರಿಣಿಯು ಮೋರೆಯನ್ನು ನೋಡಿ ನಕ್ಕನು; ತಾರಿಣಿಯೂ ನಕ್ಕಳು. ಮಾಧವನು ನಗುತ್ತಿದ್ದುದನ್ನು ನೋಡಿ ಕಮಲೆಯು ಮೆಲ್ಲಗೆ ಬದಿಗೆ ಸರಿದು ಮೂಲೆಯಲ್ಲಿ ಅವಿತು ಅವನೆ ದುರಿಗಿನ ಕನ್ನಡಿಯಲ್ಲಿ ಇಣಿಕಿದಳು. ತನ್ನ ಮುಖವು ಕನ್ನಡಿಯಲ್ಲಿ ಕಾಣದ ರೀತಿಯಲ್ಲಿ ನಿಂತಿದ್ದಳು. ಮಾಧವ ತಾರಿಣಿಯರ ಮುಖಗಳು ನಗೆ ಯಾಡುತ್ತಿರುವುದನ್ನು ಕಂಡು ಅವಳಿಗೆ ಚೇಳು ಕಡಿದಂತಾಯಿತು. ಅವರ ಮುಗುಳು ನಗೆ-ಚೇಷ್ಟೆಗಳು ಹಾಗೆಯೆ ಮುಂದುವರೆದವು. ಅವಳಿಗೆ ಅಸ ಹನೀಯವಾಯಿತು. ತಟ್ಟನೆ ಶಾಮನಿದ್ದಲ್ಲಿಗೆ ಓಡಿದಳು.

ಶಾಮನು ಅದೇ ಆಗ ಎನ್‌ಲಾರ್ಜಮೆಂಟೊಂದನ್ನು ಪೂರೈಸಿ ಊಟಕ್ಕೆ ಹೊರಡುವ ಸಿದ್ಧತೆಯಲ್ಲಿದ್ದ. ಕಮಲೆ ಬಂದವಳೇ 'ಶಾಮರಾವ ಸ್ವಲ್ಪ ಬೇಗ ಬನ್ನಿರಿ' ಎಂದಳು.

ಶಾಮುನಿಗೆ ದಿಗಿಲಾಯಿತು. 'ಏನು?' ಎಂದ.

'ಬನ್ನಿರಿ ಹೇಳುತ್ತೇನೆ' ಎಂದಳು.

ಶಾಮು ತಡವರಿಸಿ ಮೇಲಕ್ಕೆದ್ದ.

ಕಮಲೆ ಲಗುಬಗೆಯಿಂದ ಓಡಿದಳು. ಶಾಮು ಅವಳನ್ನು ಹಿಂಬಾಲಿಸಿದ. 'ಏನು? ಎಲಾ?' ಎಂದು ಎರಡು ಮೂರು ಸಲ ಕೇಳಿದರೂ 'ಹೇಳುತ್ತೇನೆ ಬನ್ನಿರಿ' ಎಂದಿಷ್ಟೇ ಅವಳು ಉತ್ತರ ಕೊಟ್ಟಳು.

ಮಾಧವನು ಸಿಗರೇಟು ಸೇದುತ್ತ ಆರಾಮಾಸನದ ಮೇಲೆ ಕುಳಿತು ಕನ್ನಡಿಯಲ್ಲಿ ಕಾಣುತ್ತಿದ್ದ ತಾರಿಣಿಗೆ ಬಗೆಬಗೆಯ ಹಾವಭಾವಗಳನ್ನು ಮಾಡುತ್ತಲಿದ್ದಾನೆ. ತಾರಿಣಿಯು ಕೆಲವು ಸಲ ಸುಮ್ಮನಿರುವಳು, ಕೆಲವು ಸಲ ಗಂಟುಮೋರೆ ಹಾಕುವಳು, ಒಮ್ಮೊಮ್ಮೆ ಮುಗುಳುನಗೆಯೊಡನೆ ಹಾವಭಾವದಿಂದಲೇ ಅವನಿಗೆ ಉತ್ತರ ಕೊಡುವಳು.

ಶಾಮು ಇದನ್ನೇ ನೋಡುತ್ತ ನಿಂತ—ಕಲ್ಲಿನಂತೆ ನಿಂತುಕೊಂಡ. ತನ್ನ ಕಣ್ಣುಗಳನ್ನು ತಾನೇ ನಂಬದಾದ.

ಅವನ ಎದೆಯ ಮೇಲೆ ಮಂಜಿನ ಗಡ್ಡೆಯನ್ನಿಟ್ಟಂತಾಯಿತು!

೧೪

ದೃಶ್ಯವು ಒಳ್ಳೇ ಪರಿಣಾಮಕಾರಿಯಾಗಿತ್ತು. ನಾಯಕನು ಕೆಲವು ದುಷ್ಟಮಿತ್ರರ ಸಹವಾಸದ ಫಲವಾಗಿ ಒಬ್ಬ ವೇಶ್ಯೆಯಲ್ಲಿ ಅನುರಕ್ತನಾಗಿರುತ್ತಾನೆ. ಅವಳಿಂದ ಮದ್ಯಪಾನವನ್ನೂ ಕಲಿತುಕೊಳ್ಳುತ್ತಾನೆ. ಮದ್ಯವು ಕೆಲವು ದಿನಗಳಲ್ಲಿಯೇ ಇವನ ಮನವನ್ನು ಸಂಪೂರ್ಣವಾಗಿ ಆಕರ್ಷಿಸುತ್ತದೆ. ಮದ್ಯ ಹಾಗು ವೇಶ್ಯೆ ಇವು ಆವನ ನಿತ್ಯಕ್ರಮಗಳಾಗುತ್ತವೆ. ನಾಯಕಿಯು ಪತಿಯ ಈ ದುಷ್ಟಚಟಗಳನ್ನು ಬಿಡಿಸುವುದಕ್ಕಾಗಿ ಇನ್ನಿಲ್ಲದಷ್ಟು ಪ್ರಯತ್ನಮಾಡುವಳು. ಮದ್ಯದ ನೆನಪಾಗುತ್ತಲೆ ಯಾವುದನ್ನೂ ಗಮನಕ್ಕೆ ತಾರದೆ ನೆಟ್ಟಗೆ ವೇಶ್ಯೆಯ ಮನೆಗೆ ಹೊರಟು ಬಿಡುವನು.

ಒಂದು ದಿನ ಅವನು ಡ್ರೆಸ್ ಮಾಡಿಕೊಂಡು ಅವನು ಹೊರಗೆ ಹೊರಟಿದ್ದಾನೆ. ರಾತ್ರಿ ೧೦ ಗಂಟೆಯಾಗಿದೆ. ಅವನು ಎಲ್ಲಿಗೆ ಹೊರಟಿದ್ದಾನೆಂಬುದನ್ನು ನಾಯಕಿ ಬಲ್ಲಳು. ಇಂದು ಏನಾದರೂ ಸರಿಯೆ; ಅವನನ್ನು ಹೊರಗೆ ಹೋಗಗೊಡಬಾರದು ಎಂಬ ದೃಢನಿಶ್ಚಯದಿಂದ ಅವನೆದುರು ಬಂದಳು. ಕಾಲುಗಳನ್ನು ಹಿಡಿದಳು—ಅವನು ದೂಡಿದ—ಹೊಡೆದ–ಬಡೆದ, ಬಾಗಿಲನ್ನೂ ಹಾಕಿಬಿಟ್ಟಳು. ಅವನನ್ನು ಹೊರಗೆ ಬಿಡಲಿಲ್ಲ. ಪ್ರತಿನಿತ್ಯದ ಎಲ್ಲ ವಿಧಾನಗಳೂ ತೀರಿದವು. ನಾಯಕನು ಗದ್ದರಿಸಿದ–ಬೆದರಿಸಿದ. ನಾಯಕಿಯು ಹೆದರಲಿಲ್ಲ. ನಾಯಕನು ಹತಾಶನಾದ.

ಕೊನೆಗೆ ಒಂದು ಕುರ್ಚಿಯ ಮೇಲೆ ಕುಳಿತ. ನಾಯಕಿಯನ್ನು ಕರೆದ. 'ಇದು ನೋಡು ನನ್ನ ಕೈಯಲ್ಲಿ ಸುಮ್ಮನೆ ಜೀವವನ್ನು ಕೊಡಬೇಡ. ನಾನು ಹೊರಗೆ ಹೋಗಬೇಕು' ಎಂದ.

'ಕಾಲು ಹಿಡಿದು ಬೇಡಿಕೊಳ್ಳುತ್ತೇನೆ ದಯಮಾಡಿ ಇಲ್ಲಿಯೇ ಮಲಗಿಕೊಳ್ಳಿರಿ' ನಾಯಕಿಯು ಹೇಳಿದಳು.

ನಾಯಕನು ಜೇಬಿನಿಂದ ಮದ್ಯದ ಸೀಸೆಯೊಂದನ್ನು ಹೊರಕ್ಕೆ ತೆಗೆದು 'ಇದೋ ಈ ಮದ್ಯವನ್ನು ನಾನು ಕುಡಿಯಬೇಕಾಗಿದೆ. ಮನೆಯಲ್ಲಿ ಅದನ್ನು ಕುಡಿಯುವ ಇಚ್ಛೆ ನನಗಿಲ್ಲ. ಅವಳ ಕೈಯಿಂದಲೆ ನಾನು ಇದನ್ನು ಕುಡಿಯ ಬೇಕು. ಸುಮ್ಮನೆ ಬಿಡು, ನಾನು ಹೋಗುತ್ತೇನೆ' ಎಂದು ಗದ್ದರಿಸಿದ. ಮುಚ್ಚಿದ ಬಾಗಿಲುಗಳಿಗೆ ಗಟ್ಟಿಯಾಗಿ ಆತುಕೊಂಡು ನಾಯಕಿಯು ನಿಂತಿದ್ದಳು. ನಾಯಕನು ಅವಳ ಹತ್ತಿರ ಬಂದು ಅವಳ ಕೈಯನ್ನು ಬಲವಾಗಿ ಹಿಡಿದು 'ನೀನು ಅವಳಕಿಂತಲೂ ಎಷ್ಟೋ ಪಾಲು ಸುಂದರಳಾಗಿರುವೆ. ಆದರೆ ನಿನಗೆ ವಿಲಾಸವೆಂದರೆ ಗೊತ್ತಿಲ್ಲ' ಎಂದು ಅವಳ ಕಣ್ಣಲ್ಲಿ ಕಣ್ಣಿಟ್ಟು ನೋಡಿದ. ನಾಯಕಿ ನಕ್ಕಳು. ಅವಳ ನಗೆ ಇವನ ಹೃದಯವನ್ನು ಸೂರೆಗೊಂಡಿತು.

'ಇನ್ನು ನಾನು ಅವಳ ಮನೆಗೆ ಹೋಗುವುದಿಲ್ಲ'

'ನಿಶ್ಚಯವಾಗಿಯೂ ?'

ನಾಯಕನನ್ನು ಗಟ್ಟಿಯಾಗಿ ತಬ್ಬಿಕೊಂಡಳು.

'ಆದರೆ ನೀನು ಮಾತ್ರ ನಾನು ಹೇಳಿದಂತೆ ಕೇಳಬೇಕು'

'ಆಗಲಿ'

'ನೀನೇ ನನಗೆ ಮದ್ಯ ಕುಡಿಸಬೇಕು'

ಈಗ ಅವನ ಕರಾಳವಾದ ನಗೆಯ ಅರ್ಥವು ಅವಳಿಗಾಯಿತು. ಮುಂದೆ ಅದೆಷ್ಟೋ ಚರ್ಚೆ, ವಾಗ್ವಾದ, ರಗಳೆ ನಡೆದು ನಾಯಕಿ ಮದ್ಯವನ್ನು ಕುಡಿಸುವಳು. ನಾಯಕನು ಉನ್ಮಾದದಿಂದ ಮೈಮರೆಯುವನು. ನಾಯಕಿಗೂ ಮದ್ಯವನ್ನು ಕುಡಿಸಲು ಬರುವನು. ಅವಳು ನಿರಾಕರಿಸುವಳು. ಒತ್ತಾಯಮಾಡಿ ಬಲುಮೆಯಿಂದ ಅವಳಿಗೂ ಕುಡಿಸುವನು.

ಅವರ ಈ ಗೊಂದಲಕ್ಕೆ ಮಗು ಎಚ್ಚರಗೊಳ್ಳುವುದು. ಇವರು ಹುಚ್ಚರಂತೆ ಕುಣಿಯುವುದನ್ನು ನೋಡಿ ಅದು ಬೆದರಿ ಚೀರಿಕೊಳ್ಳುವುದು. ನಾಯಕನು ಅದು ಚೀರಿಕೊಳ್ಳದಂತೆ ಅದರ ಬಾಯನ್ನು ಗಟ್ಟಿಯಾಗಿ ಹಿಡಿಯುವನು. ಅದಕ್ಕೆ ಉಸಿರುಗಟ್ಟುವುದು. ಅದನ್ನು ಬಿಡಿಸಲು ಬಂದ ನಾಯಕಿಯು ಅದರ ಮೇಲೆಯೇ ಬೀಳುವಳು.

ಅಮಲಿನಿಂದ ಎಚ್ಚತ್ತನಂತರ ಮನೆಯಲ್ಲಿ ತಾನೊಂದು ನರಕವನ್ನೇ ನಿರ್ಮಿಸಿದಂತೆ ನಾಯಕನಿಗೆ ಭಾಸವಾಗುವುದು. ಮಗುವಿಗೆ ವಿಶೇಷ ಪೆಟ್ಟು ತಗಲಿರುವುದು. ಹೆಂಡತಿಯೂ ನೋವಿನಿಂದ ನರಳುತ್ತಿರುವಳು. ಆ ದೃಶ್ಯದಿಂದ ಅವನ ಜೀವನದಲ್ಲಿಯೇ ಪರಿವರ್ತನೆಯಾಗುವುದು ಇತ್ಯಾದಿ........ಇತ್ಯಾದಿ.

ಈ ದೃಶ್ಯವನ್ನು ಓದಿದಾಗ ಶ್ರೀಕಾಂತರ ಕಲಾ ಪ್ರೌಢಿಮೆಯನ್ನು ಶಾಮನು ವಿಶೇಷವಾಗಿ ಹೊಗಳಿದ್ದ. ಒಮ್ಮೆ ದುರ್ಮಾರ್ಗಿಯಾದನೆಂದರೆ ಮುಂದೆ ಅವನು ಯಾವ ಪಾಪವನ್ನು ಮಾಡಲೂ ಅನುಮಾನಿಸುವುದಿಲ್ಲ ವೆಂಬುದನ್ನು ಸರಿಯಾಗಿ ಚಿತ್ರಿಸಿದ್ದಾರೆ; ಅದರ ಜೊತೆಗೆ ಪತಿಪರಾಯಣೆ ಯಾದ ಹೆಂಡತಿಯು, ಪತಿಯು ತನ್ನವನಾಗಿದ್ದರೆ ಸಾಕು; ಅವನಿಗಾಗಿ ಏನು ಬೇಕಾದರೂ ಮಾಡಬಲ್ಲಳು, ಎಂಬುದನ್ನು ಚೆನ್ನಾಗಿ ಸೂಚಿಸಿದ್ದಾರೆ ಎಂದು ತನ್ನ ಅಭಿಪ್ರಾಯವನ್ನು ವ್ಯಕ್ತಮಾಡಿದ್ದ. ಒಟ್ಟಿನ ಮೇಲೆ ದೃಶ್ಯವು ಭಾವನಾತ್ಮಕವಾಗಿದೆ ಎಂದು ಹೇಳಿದ್ದ.

ಸೂಸಿ ಮೊದಲಿನಂತೆಯೇ ಇದ್ದಿದ್ದರೆ ಆ ದೃಶ್ಯವು ಇದ್ದಂತೆ ಇರಲಿ—ಚೆನ್ನಾಗಿದೆ ಎಂದೇ ಶಾಮನು ಹೇಳುತ್ತಿದ್ದ. ಆದರೆ ಅವನ ಅಭಿಪ್ರಾಯದ ಮೇರೆಗೆ ಸೂಸಿಯ ಮನವು ಚಂಚಲವಾಗಿತ್ತು. ಮೊದಲಿನ ಸ್ಥಿರತೆಯಿರಲಿಲ್ಲ. ಮಾಧವನ ಸಂಗಡ ಸೂಸಿ ಮಾತನಾಡುವುದೂ ಅವನಿಗೆ ಸಹನವಾಗದಿರು ವಾಗ—ಚಿತ್ರದಲ್ಲಿಯೇ ಆಗಲಿ—ಮನಸ್ವೇಚ್ಛೆಯಾಗಿ ಕುಡಿದು, ಮೈಮೇಲಿನ ಬಟ್ಟೆಗಳ ಪರಿವೆಯೂ ಇಲ್ಲದೆ ಮಾಧವನ ಮೈಮೇಲೆ ಬಿದ್ದು ಸೂಸಿಯು ಶೃಂಗಾರ ವಿಲಾಸಗಳನ್ನು ತೋರಿಸುವುದನ್ನು ನೋಡಿ ಅವನು ಹೇಗೆ ಸಹಿಸಿ ಕೊಂಡಿರಬಲ್ಲನು! ಆ ದೃಶ್ಯವನ್ನು ನೆನೆದಾಗಲೆಲ್ಲ ಇವನಿಗೆ ಹೇಸಿಗೆ ಬರ ತೊಡಗಿತು.

ಆ ದೃಶ್ಯವನ್ನು ತೆಗೆಸಿಬಿಡಬೇಕು. ಇದು ಹೇಗೆ ಸಾಧ್ಯ? ಈ ಪ್ರಶ್ನೆಗೆ ಅವನಿಗೆ ಉತ್ತರ ದೊರೆಯಲಿಲ್ಲ. ಈ ಪ್ರಶ್ನೆಯು ಅಭೇದ್ಯವಾದ ಬಂಡೆಗಲ್ಲಿನಂತೆ ಎದುರಿಗೆ ಬಂದು ನಿಲ್ಲುತ್ತಿತ್ತು. ಏನು ಮಾಡಬೇಕೆಂಬುದು ತಿಳಿಯದೆ ಸುಮ್ಮನೆ ಕುಳಿತುಕೊಳ್ಳುತ್ತಲಿದ್ದ.

ಶಾಮನ ಕಲೋತ್ಸಾಹವು ಕುಗ್ಗಿತು. ತನ್ನ ಕೆಲಸದಲ್ಲಿ ತೋರುತ್ತಿದ್ದ ಆಸಕ್ತಿಯೂ ದಿನದಿನಕ್ಕೆ ಕಡಿಮೆಯಾಗುತ್ತ ನಡೆಯಿತು. ನಿರ್ವಾಹವಿಲ್ಲದೆ ತನ್ನ ಪಾಲಿಗೆ ಬಂದ ಕೆಲಸವನ್ನಷ್ಟು ಮಾಡಿ ಪಾರಾಗಿ ಬಂದು ಬಿಡುತ್ತಿದ್ದ. ಸೂಸಿಗೆ ಕಲೆಯ ವಿಷಯ ತಾಸು ತಾಸು ಲೆಕ್ಚರ ಹೊಡೆಯುತ್ತಿದ್ದವನು ಈಗ ಅವಳಾಗಿಯೆ ಕಲೆಯ ವಿಚಾರವಾಗಿ ಏನನ್ನಾದರೂ ಕೇಳಿದರೆ ಉತ್ತರಕೊಡುವುದಕ್ಕೂ ಮನಸ್ಸಿಲ್ಲದೆ ವಿಷಯವನ್ನು ಬದಲಾಯಿಸಿ ಮಾತು ಪೂರೈಸಿ ಬಿಡುತ್ತಿದ್ದ.

ಡೈರೆಕ್ಟರರು ಹಾಗು ಶ್ರೀಕಾಂತರು ಇವರೊಡನೆ ಮಾತನಾಡುತ್ತ ಕುಳಿತಾಗ ಮೆಲ್ಲಗೆ ಮೆಲ್ಲಗೆ ಶಾಮು ಈ ಪ್ರಸ್ತಾಪವನ್ನೆತ್ತಿದ. ಒಬ್ಬ ಪತಿಯಿಂದ ಮದ್ಯಪಾನ ಮಾಡಿಸುವುದು ಸಮಂಜಸವಾಗುವುದಿಲ್ಲವೆಂದು ಹೇಳಿದ. ನಾಯಕನು ಕುಡಿದು ಬಂದು ಹೆಂಡತಿಯನ್ನು ಹೊಡೆಯಬೇಕು, ಅವಳ ತಲೆಯೊಡೆದು ರಕ್ತ ಸೋರಬೇಕು, ಇದನ್ನು ಕಂಡು ಅವನ ಹೃದಯವು ಕರಗಬೇಕು ಇಷ್ಟಾದರೆ ಸಾಕು ಎಂದು ವಾದಿಸಿದ. ಇದು ಅಷ್ಟೊಂದು ಚೆನ್ನಾಗಿರಲಾರದು ಎಂದು ಅವನಿಗೂ ತಿಳಿದಿತ್ತು. ಚಿತ್ರವು ಯಶಸ್ವಿಯಾಗುವುದರಕ್ಕಿಂತಲೂ ತನ್ನ ಮತ್ತು ತನ್ನ ಹೆಂಡತಿಯ ಮಾನ ಕಾಯ್ದುಕೊಳ್ಳುವುದು ಹೆಚ್ಚಿನದು ಎಂದು ಅವನು ಭಾವಿಸಿದ.

ಶ್ರೀಕಾಂತರಿಗಾಗಲಿ, ಡೈರೆಕ್ಟರರಿಗಾಗಲಿ ಈ ಸೂಚನೆಯು ಸರಿದೋರಲಿಲ್ಲ. ಆ ದೃಶ್ಯವು ಈಗ ಇದ್ದಂತೆಯೇ ಇರಬೇಕು, ಅಂದರೆ ಮಾತ್ರ ಅದರಲ್ಲಿ ನಾವೀನ್ಯತೆ ತೋರಿಸಿದಂತಾಗುವುದು; ಇಲ್ಲವಾದರೆ ಈ ಮೊದಲೇ ನೂರಾರು ನಾಟಕಗಳಲ್ಲಿ ಹೇಳಿದುದನ್ನೆ ಪುನಃ ಇವರೂ ಹೇಳಿದಂತಾಗುವುದು. ನಾಯಕಿಯು ಆ ಪರಿಸ್ಥಿತಿಯಲ್ಲಿ ಒಂದು ಸಲ ಮದ್ಯಪಾನ ಮಾಡಿದರೆ ಯಾವ ಬಗೆಯಲ್ಲಿಯೂ ಅವಳ ಸತೀತ್ವಕ್ಕೆ ಭಂಗವುಂಟಾಗಲಾರದು ಎಂದು ಅಭಿಪ್ರಾಯಪಟ್ಟರು.

ಡೈರೆಕ್ಟರರು ಒಬ್ಬರೇ ಸಿಕ್ಕಿದಾಗ ಶಾಮನು ತನ್ನ ಹೃದಯವನ್ನೇ ಬಿಚ್ಚಿದ. ತನ್ನ ಹೆಂಡತಿಯು ಆ ರೀತಿಯಲ್ಲಿ ಆ ದೃಶ್ಯದಲ್ಲಿ ಅಭಿನಯಿಸುವುದು ತನಗೆ ಇಷ್ಟವಿಲ್ಲವೆಂದೂ, ಯಾವ ಕುಲೀನ ಸ್ತ್ರೀಯಳೂ ಆ ರೀತಿ

ಅಭಿನಯಿಸಲಾರಳು ಎಂದೂ ಹೇಳಿದ. ಡೈರೆಕ್ಟರರಿಗೆ ಆಶ್ಚರ್ಯವಾಯಿತು. ' ಇದೇನು ಶಾಮರಾಯರೇ, ನೀವೇ ಆ ದೃಶ್ಯವು ತುಂಬಾ ಕಲಾಪೂರ್ಣ ವಾಗಿದೆ ಎಂದು ಹೇಳುತ್ತಿದ್ದಿರಿ. ಈಗ ಹೇಗೆ ಹೇಳುವಿರಲ್ಲ!' ಎಂದು ಕೇಳಿದರು.

ಶಾಮನಿಗೆ ಹೆಚ್ಚು ಮಾತನಾಡುವ ಇಚ್ಛೆಯಿರಲಿಲ್ಲ. 'ನನಗೆ ಏಕೊ ಸರಿ ಕಾಣುವುದಿಲ್ಲ' ಎಂದು ಹೇಳಿದ.

' ನಿಮಗೆ ಸರಿ ಕಾಣದಿದ್ದರೆ ಒಳ್ಳೇ ದೃಶ್ಯವನ್ನು ಬಿಟ್ಟು ಬಿಡಲಿಕ್ಕೆ ಹೇಗೆ ಆದೀತು? ಸರಿಕಾಣುವುದಿಲ್ಲ ಎಂಬುದಕ್ಕೆ ಪ್ರಬಲವಾದ ಕಾರಣಗಳಾದರೂ ಇದ್ದಿದ್ದರೆ....'

ಶಾಮನಿಗೆ ಏನು ಹೇಳುವುದಕ್ಕೂ ತೋಚಲಿಲ್ಲ ' ಏನಾದರೂ ಆಗಲಿ ದಯಮಾಡಿ ಆ ದೃಶ್ಯ ಬಿಟ್ಟುಬಿಡಿ....ಇಲ್ಲವೆ ನಾನು ಹೇಳಿದಂತೆ ವ್ಯತ್ಯಾಸ ವನ್ನಾದರೂ ಮಾಡಿರಿ' ಎಂದು ದೈನಾಸಬಟ್ಟು ಕೇಳಿದ.

' ಇಲ್ಲಿ ನೋಡಿರಿ ಶಾಮರಾಯರೇ, ಚಿತ್ರವು ಒಳ್ಳೇದಾಗಬೇಕು ಎಂದು ನಿಮ್ಮ ಇಚ್ಛೆಯಿದೆಯಲ್ಲವೇ ? ಆ ಚಿತ್ರದಲ್ಲಿ ಇದು ಮುಖ್ಯವಾದ ಸನ್ನಿವೇಶ. ಅಭಿನಯಕ್ಕೆ ತುಂಬಾ ಅವಕಾಶವಿದೆ. ದೃಶ್ಯವು ಕಲಾಮಯ ವಾಗಿದೆ. ನಿಮ್ಮ ಮನಸ್ಸಿಗೆ ಬರುವುದಿಲ್ಲ ಎನ್ನುವಿರಿ. ಅದು ಏಕೆ ಎಂಬುದೇ ನನಗೆ ತಿಳಿಯದಂತಾಗಿದೆ.'

' ಯಾವ ಗಂಡನೂ ತನ್ನ ಹೆಂಡತಿಯು ಆ ರೀತಿ ಅಭಿನಯಿಸುವು ದನ್ನು ನೋಡಿ ಸಹಿಸಿಕೊಂಡಿರಲಾರ'

ಡೈರೆಕ್ಟರರು ಶಾಮನನ್ನು ನೋಡಿದರು. ಒಂದು ಮುಗುಳುನಗೆ ನಕ್ಕರು. 'ಈಗ ಕೆಲವು ದಿವಸಗಳಿಂದ ನಿಮ್ಮ ವೃತ್ತಿಯಲ್ಲಿ ಬದಲಾವಣೆಯಾ ಗಿದೆ. ಸಿನೇಮಾದಲ್ಲಿ ಕೆಲಸ ಮಾಡುವಾಗ ನೀವು ಆ ಭಾವನೆಗಳನ್ನಿಟ್ಟು ಕೊಂಡಿದ್ದರೆ ಆಗದು. ನಿಮ್ಮ ದೃಷ್ಟಿ ವಿಶಾಲವಾಗಬೇಕು.'

'ದೃಷ್ಟಿ ವಿಶಾಲವಾಗಬೇಕು! ' ಶಾಮನು ಸೂಸಿಗೆ ಇದೇ ಮಾತನ್ನು ಹೇಳಿದ್ದ. ಅವಳು ಅವನ ಮಾತನ್ನು ಅಕ್ಷರಶಃ ಪಾಲಿಸುತ್ತಿದ್ದಾಳೆ. ಅವಳ ದೃಷ್ಟಿ ಸಂಕುಚಿತವಾಗಿರುವಾಗ ಇವನ ದೃಷ್ಟಿ ವಿಶಾಲವಾಗಿತ್ತು. ಈಗ

ಅವಳ ದೃಷ್ಟಿ ವಿಶಾಲವಾಗಿದೆ. ಇವನ ದೃಷ್ಟಿ ಮಾತ್ರ ಸಂಕುಚಿತ ವಾಗಿತ್ತು.

'ನಾನು ಆ ಬಗ್ಗೆ ಸಾಕಷ್ಟು ವಿಚಾರಮಾಡಿದ್ದೇನೆ ರಾಯರೇ! ನಮ್ಮ ಮಾನಮರ್ಯಾದೆಗಳಿಗೆ ಕುಂದು ಬಾರದಂತೆ ನಡೆದುಕೊಳ್ಳುವುದಾಗಿ ಮಾತು ಕೊಟ್ಟಿದ್ದಿರಲ್ಲವೇ?'

'ಈಗಲೂ ಹೇಳುತ್ತೇನೆ. ತಾರಿಣಿದೇವಿಯವರ ಕೂದಲು ಕಲುಕದಂತೆ ನೋಡಿಕೊಳ್ಳಬೇಕಾದುದು ನನ್ನ ಕರ್ತವ್ಯ. ಆದರೆ ಈಗ ಅಂತಹ ಪ್ರಸಂಗವೇನು ಬಂದಿದೆ? ತಾರಿಣಿದೇವಿಯವರು ಆ ದೃಶ್ಯದಲ್ಲಿ ಅಭಿನಯಿಸುವುದರಿಂದ ಅಪೂರ್ವ ಕೀರ್ತಿಯನ್ನು ಗಳಿಸುವರು. ಚಿತ್ರವೂ ಕೂಡ ಯಶಸ್ವಿಯಾಗುವುದು. ನೀವು ದಯಮಾಡಿ ಈ ವಿಷಯವಾಗಿ ತಲೆ ಕೆಡಿಸಿಕೊಳ್ಳಬೇಡಿ. ನಾನು ಬರುತ್ತೇನೆ' ಎಂದವರೇ ರಾಯರು ಹೊರಟೇಬಿಟ್ಟರು. ತಾರಿಣಿದೇವಿಯು ಈಗ ಪರಾಧೀನಳಲ್ಲ. ಯಾವ ಕೆಲಸ ಮಾಡಬೇಕಾದರೂ ಶಾಮನ ಸಮ್ಮತಿಯನ್ನು ಪಡೆದುಕೊಳ್ಳಬೇಕೆಂಬ ಅಗತ್ಯವಿಲ್ಲ. ಶಾಮನು ಬೇಡವೆಂದರೂ ಆ ದೃಶ್ಯದಲ್ಲಿ ಅಭಿನಯಿಸಲು ತಾರಿಣಿದೇವಿಯ ಮನವನ್ನು ಒಲಿಸಬಹುದು ಎಂಬ ಧೈರ್ಯವಿದ್ದುದರಿಂದಲೇ ಹೀಗೆ ಮಾತನಾಡಿರಬೇಕು ರಾಯರು.

ಡೈರೆಕ್ಟರರು ಇಷ್ಟು ನಿಷ್ಠುರವಾಗಿ ಉತ್ತರ ಕೊಡುವರೆಂದು ಅವನು ಭಾವಿಸಿರಲಿಲ್ಲ. ಇನ್ನೂ ಆ ದೃಶ್ಯದಲ್ಲಿ ಅಭಿನಯಿಸಬೇಡ ಎಂದು ಸೂಸಿಗೆ ಹೇಳಬೇಕು. ಅವಳು ದಿನದಿನಕ್ಕೆ ಹೆಚ್ಚು ಉತ್ಸಾಹದಿಂದ ಅಭಿನಯಿಸುತ್ತಲಿದ್ದಾಳೆ. ಈಗ ಉಳಿದಿರುವ ಈ ಒಂದು ಕೊನೆಯ ದೃಶ್ಯದಲ್ಲಿ ತನ್ನ ಕೌಶಲ್ಯವನ್ನೆಲ್ಲ ಪ್ರದರ್ಶಿಸಬೇಕೆಂದಿದ್ದಾಳೆ. ಹೇಗೆ ಅವಳ ಮನವೊಲಿಸಲಿ? ಎಂದು ಅನುಮಾನಿಸಿದ. ಸೂಸಿಯ ಸಂಗಡ ಈ ಮಾತು ಪ್ರಾರಂಭಿಸಿದ.

ಸೂಸಿಗೆ ಅದರಲ್ಲಿ ಯಾವ ಮಹತ್ವವೂ ಕಾಣಿಸಲಿಲ್ಲ. 'ಹೇಳಿ ಕೇಳಿ ಅಭಿನಯ, ಅದಕ್ಕೇಕೆ ಇಷ್ಟು ನೊಂದುಕೊಳ್ಳಬೇಕು; ಅಭಿನಯಿಸು

ವಾಗ ನಿಜವಾಗಿಯೆ ಮದ್ಯವನ್ನು ಕುಡಿಯುವುದಿಲ್ಲ; ಯಾವುದಾದರೂ ಡ್ರಿಂಕ್ಸ ಕುಡಿಯುವುದಿಷ್ಟೇ. ಮೇಲಾಗಿ ಡೈರೆಕ್ಟರರು ಆ ದೃಶ್ಯವು ಅತ್ಯಾವಶ್ಯಕವಾದುದು ಎಂದು ಹೇಳಿದ್ದಾರೆ. ಈಗ ನಾನು ಒಲ್ಲೆ ಎಂದರೆ ಅವರೇನೆಂದುಕೊಳ್ಳುವರು ?' ಎಂದು ಶಾಮನನ್ನು ಕೇಳಿದಳು ಸೂಸಿ.

ಶಾಮನು ನಿರುತ್ತರನಾದ. ತನ್ನ ಹೃದಯದ ಕಳವಳವನ್ನು ತಿಳಿಸಲು ಅಸಮರ್ಥನಾದ. ಒಂದೇ ಮಾತಿನಲ್ಲಿ ಎಲ್ಲವನ್ನೂ ಮುಗಿಸಿಬಿಡಬೇಕೆಂದು 'ನಾನು ಹೆಚ್ಚಿಗೆ ಏನನ್ನೂ ಹೇಳಬಯಸುವುದಿಲ್ಲ. ನೀನು ಆ ದೃಶ್ಯದಲ್ಲಿ ಅಭಿನಯಿಸಲು ಒಲ್ಲೆನೆನ್ನು ಇಷ್ಟೆ.' ಎಂದ.

ಶಾಮನು ಹೀಗೇಕೆ ಹೇಳುತ್ತಾನೆಂಬುದು ಸೂಸಿಗೆ ತಿಳಿಯಲಿಲ್ಲ. 'ಒಲ್ಲೆನೆಂದು ಹೇಳುವುದಿದ್ದರೆ ಮೊದಲಿಗೇ ಹೇಳಬೇಕಿತ್ತು. ಇನ್ನು ಒಂದೆರಡು ದಿನಗಳಲ್ಲಿ ಅದು ಶೂಟ್ ಆಗಬೇಕು. ಈಗ ನಾನು ಒಲ್ಲೆ ಎಂದರೆ! ಮೊದಲು ಕಥೆ ಓದಿದಾಗ ಇದು ಬೇಡ ಎಂದಿದ್ದರೆ ವ್ಯತ್ಯಾಸವನ್ನಾದರೂ ಮಾಡಬಹುದಿತ್ತು. ನನಗೂ ಕೂಡ ಆ ದೃಶ್ಯವನ್ನು ಅತ್ಯಂತ ಸುಂದರವಾಗಿ ಅಭಿನಯಿಸಬಲ್ಲೆ ಎಂದೆನಿಸುತ್ತಿದೆ. ಅದರಲ್ಲಿಯು ಎರಡು ಹಾಡುಗಳಂತೂ ಬಹಳ ಚೆನ್ನಾಗಿವೆ. ಗಿರಿಧರಪಂತರನ್ನು ಬೇಡಿ ಕಾಡಿ ನನಗೆ ಬೇಕಾದ ಹಾಡುಗಳನ್ನು ಹಾಕಿಸಿಕೊಂಡಿದ್ದೇನೆ. ಈಗ ಅದನ್ನು ಬಿಟ್ಟುಬಿಡಬೇಕೆಂದರೆ........'

'ಸಧ್ಯಕ್ಕೆ ಒಲ್ಲೆ ಎನ್ನು, ಆಮೇಲೆ ಅದರಲ್ಲಿ ವ್ಯತ್ಯಾಸಗಳನ್ನಾದರೂ ಮಾಡುವರು. ಕುಡಿದು ಆ ರೀತಿ ಅಭಿನಯಿಸುವುದನ್ನು ನಾನು ನೋಡಲಾರೆ.'

ಶಾಮನು ನಿಷ್ಕಾರಣ ಹಟಕ್ಕೆ ಬಿದ್ದಿದ್ದಾನೆ ಎಂದುಕೊಂಡಳು ಸೂಸಿ. ಈಗ ಅವನ ಜೊತೆಗೆ ಹೆಚ್ಚಿನ ಚರ್ಚೆ ಮಾಡುವುದರಲ್ಲಿ ಅರ್ಥವಿಲ್ಲ ಎಂದು ಸುಮ್ಮನಾದಳು. ಅವಳ ಮೌನವನ್ನು ಸಮ್ಮತಿ ಎಂದು ಶಾಮನು ಭಾವಿಸಿಕೊಂಡ.

ಚಿತ್ರವು ಪೂರೈಸುತ್ತ ಬಂದುದರಿಂದ ಶಾಮನಿಗೂ ಮೈತುಂಬ ಕೆಲಸವಿರುತ್ತಿತ್ತು. ಹಗಲು ರಾತ್ರಿ ಎನ್ನದೆ ದುಡಿಯಬೇಕಾಗುತ್ತಿತ್ತು. ಸೂಸಿಯು

ಸ್ಟುಡಿಯೊದಿಂದ ವಾಪಸು ಬರುತ್ತಲೆ 'ಆ ದೃಶ್ಯದ ವಿಷಯ ಏನಾಯಿತು?' ಎಂದು ಕೇಳುತ್ತಿದ್ದ. 'ಏನಾಗುವುವೋ ನೋಡಬೇಕು' ಎಂದಿಷ್ಟೆ ಅವಳು ಉತ್ತರ ಕೊಡುತ್ತಿದ್ದಳು.

೫–೬ ದಿನಗಳು ಹೀಗೆಯೆ ಕಳೆದವು. ಸೂಸಿಯು ದಿನಾಲು ಹೀಗೆಯೆ ಹೇಳುತ್ತಿದ್ದಳು. ಶಾಮನಿಗೆ ಏಕೊ ಸಂದೇಹವಾಯಿತು. ಸ್ಟುಡಿಯೊದಲ್ಲಿ ಏನು ನಡೆಯುತ್ತಿದೆ ನೋಡಿಬರುವಾ ಎಂದು ಸ್ಟುಡಿಯೊದ ಕಡೆಗೆ ನಡೆದ.

'ಯಾರನ್ನೂ ಒಳಗೆ ಬಿಡಬೇಡವೆಂದಿದ್ದಾರೆ' ಎಂದು ಬಾಗಿಲು ಕಾಯುವವನು ಹೇಳಿದ.

'ನನ್ನನ್ನೂ !' ಶಾಮು ಕೇಳಿದ.

'ಯಾರನ್ನೂ ಬಿಡಬೇಡವೆಂದಿದ್ದಾರೆ.'

'ಯಾರು?'

'ಡೈರೆಕ್ಟರ ಸಾಹೇಬರು'

ಶಾಮನಿಗೆ ಅದೆಂತಹ ಅಪಮಾನ!

ಅಂದೇ ಸಾಯಂಕಾಲ ಕುಡಿಯುವ ದೃಶ್ಯವು ಪೂರ್ತಿ ಶೂಟಾಯಿತು ಎಂದು ಕಮಲೆಯಿಂದ ತಿಳಿಯಿತು.

## ೧೫

ಈ ಆರು ತಿಂಗಳುಗಳಲ್ಲಿ ಶಾಮು ಸೂಸಿಯರ ಜೀವನದಲ್ಲಿ ಅದೆಂತಹ ಕ್ರಾಂತಿಯಾಗಿದ್ದಿತು ! ಅಂದಿನ ಹಾಗು ಇಂದಿನ ಚಿತ್ರಗಳೆರಡನ್ನೂ ಒಂದರ ಬದಿಗೊಂದಿರಿಸಿ ನೋಡಿದರೆ ಈ ಬಗೆಯ ಜೀವನವನ್ನು ಅನುಭವಿಸಿದವರು ಮಾತ್ರ ಅವರೇ ಎಂಬ ಸಾದೃಶ್ಯದ ವಿನಃ ಅವುಗಳಲ್ಲಿ ಮಿಕ್ಕ ಯಾವ ಸಾಮ್ಯವೂ ಕಂಡುಬರುತ್ತಿರಲಿಲ್ಲ ಅಂದು ಇವರು ಎದುರಿಗೆ ಬಂದು ನಿಂತರೂ ಇವರನ್ನು ಕಣ್ಣೆತ್ತಿ ಮಾತನಾಡಿಸುವವರಿರಲಿಲ್ಲ. ಇಂದು ಜನರ ಕಣ್ಣು ತಪ್ಪಿಸುವುದು ಹೇಗೆ ಎಂಬುದೊಂದು ಇವರಿಗೆ ಸಮಸ್ಯೆಯಾಗಿದೆ. ಇವರು ಬೀದಿಯಲ್ಲಿ ಹೊರಟರೆಂದರೆ ಎಲ್ಲರೂ ಇವರ ಕಡೆ ಬೆರಳುಮಾಡಿ ತೋರಿಸುವವರೇ. ಬೀದಿಯ ಎರಡೂ ಬದಿಯ ಕಟ್ಟೆಯಮೇಲೆ, ಕಿಡಕಿಯ ಸಂದಿಯೊಳಗಿಂದ, ಬಾಗಿಲ ಹಿಂದಿನಿಂದ ನೂರಾರು ಕಣ್ಣುಗಳು ಇವರನ್ನು ಪಿಳುಕಿಸುತ್ತಿದ್ದವು.

ಅಂತೆಯೆ ಶಾಮನು ಮನೆಯಿಂದ ಹೊರಗೆ ಹೊರಡುವುದಕ್ಕೇ ನಾಚಿಕೊಳ್ಳುತ್ತಿದ್ದ. ಸೂಸಿಯನ್ನು ಜೊತೆಯಲ್ಲಿ ಕರೆದುಕೊಂಡು ಹೋಗಬೇಕೆಂದರಂತೂ ಇವನ ಜೀವದ ಸುತ್ತೇ ಬಂದಂತಾಗುತ್ತಿತ್ತು. ಈ ಮೊದಲು ಹೊರಗೆ ಹೋಗುವಾ ಎಂದು ಇವನು ಸೂಸಿಯನ್ನು ಕರೆದಾಗಲೆಲ್ಲ ಅವಳು ನಾಚಿಕೊಳ್ಳುತ್ತಿದ್ದಳು. ಆದರೆ ಅದು ಇಂದು ಶಾಮನು ಅನುಭವಿಸುತ್ತಿದ್ದ ನಾಚಿಕೆಯ ನೂರರಲ್ಲೊಂದು ಪಾಲು ಮಾತ್ರ. ಅವಳನ್ನು ಹೊರಗೆ ಕರೆದುಕೊಂಡೂ ಹೋಗಲಾರ--ಮನೆಯಲ್ಲಿಯೂ ಬಿಡಲಾರ. ಈ ಸಂಕಟಕ್ಕಾಗಿ ಮನೆಯಿಂದ ಹೊರಬೀಳುವ ಪ್ರಸಂಗಗಳನ್ನೆ ಬಹುಮಟ್ಟಿಗೆ ತಂದುಕೊಳ್ಳುತ್ತಿರಲಿಲ್ಲ.

'ಜೀವಜ್ಯೋತಿ'ಯು ಪ್ರಾರಂಭೋತ್ಸವದ ಚಲಚ್ಚಿತ್ರವೆಂದು ಹೆಚ್ಚಾಗಿ ಜಾಹೀರಾತು ಮಾಡಿದ್ದರು. ನ್ಯೂಥೀಟರಿನ ಚಿತ್ರಗಳಿಗೆ ತಮ್ಮ ಚಿತ್ರವು ಯಾವ ದೃಷ್ಟಿಯಲ್ಲಿಯೂ ಕಡಿಮೆಯಾದುದಲ್ಲ ಎಂದು ಡೈರೆಕ್ಟರರು ತಾವೇ ಹೇಳಿಕೊಳ್ಳುತ್ತಿದ್ದರು. ತಾರಿಣಿದೇವಿಯು ಮೊದಲನೆಯ ಸಲ ಪಾತ್ರವಹಿಸಿದ್ದರೂ ನುರಿತ ನಟಿಯಂತೆ ಅಭಿನಯಿಸಿದ್ದಾಳೆ; ಅವಳ ಹಾಡುಗಳಂತೂ ಜನರಿಗೆ ಹುಚ್ಚು ಹಿಡಿಸುವವು ಎಂದು ಮನಸ್ವೇಚ್ಛೆಯಾಗಿ ತಮ್ಮ ಚಿತ್ರವನ್ನು ಹೊಗಳಿಕೊಳ್ಳುತ್ತಿದ್ದರು. 'ಜೀವಜ್ಯೋತಿ'ಯ ಮಾತೆತ್ತಿದರೆ ಸಾಕು ಅವರ ಮೈಮೇಲೆ ಪ್ರಜ್ಞೆಯೇ ಉಳಿಯುತ್ತಿರಲಿಲ್ಲ. ಇಷ್ಟೊಂದು ಡೈರೆಕ್ಟರರ ಬೆಂಬಲ ಸಿಗುತ್ತಿರುವಾಗ ಇನ್ನು ಶ್ರೀಕಾಂತರ ವಿಷಯ ಹೇಳಬೇಕೇ? ಜನರ ಉತ್ಸುಕತೆಯನ್ನು ಉದ್ರೇಕಗೊಳಿಸಿ ನಂತರ ಅವರಿಗೆ ತಲೆಬೇಸರು ಬಂದು ಎದ್ದು ಹೋಗುವ ವರೆಗೆ ಅವರು ಚಿತ್ರದ ವಿಷಯ ಬಡಬಡಿಸುತ್ತಿದ್ದರು.

ಪ್ರಾರಂಭದ ದಿನವು ಬಂದಿತು. ಅಂದು ಸೂಸಿಯ ಉತ್ಸಾಹ ಹೇಳತೀರದು. 'ಯಾವ ಕುಪ್ಪಸವನ್ನು ತೊಡಲಿ? ನನ್ನ ಬಂಗಾರ ವರ್ಣದ ದೇಹಕ್ಕೆ ಒಪ್ಪಬೇಕಾದರೆ ಕರಿ ಸೀರೆಯನ್ನೇ ಉಡಬೇಕು. ಕುಪ್ಪಸ, ಕಾಲಲ್ಲಿಯ ಚಪ್ಪಲಿ ಕೂಡ ಅದೇ ಬಣ್ಣದವಿರಬೇಕು. ಕರಿಯದೆಂದರೆ ಕರಾಳವಾಗಿ ಕಾಣುವುದೋ ಏನೋ! ಗುಲಾಬಿ ವರ್ಣದ್ದಾದರೆ ಇಲ್ಲವೆ ಆಕಾಶವರ್ಣದ್ದಾದರೆ-ನನಗೆ ಯಾವುದು ಒಪ್ಪುವುದು ಎಂದು ಶಾಮುನನ್ನು ಕೇಳಬೇಕು. ಬಣ್ಣಗಳ ಮಿಶ್ರಣದಲ್ಲಿ ಶಾಮುನು ಕುಶಲನೆಂದು ಎಲ್ಲರೂ ಹೊಗಳುತ್ತಾರೆ' ಎಂದು ಅವನ ಅಭಿಪ್ರಾಯ ತೆಗೆದುಕೊಳ್ಳಲು ಅವನ ಕೋಣೆಗೆ ಬಂದಳು.

ಶಾಮುನು ಹಣೆಗೆ ಕೈಕೊಟ್ಟು ಕುಳಿತುಕೊಂಡಿದ್ದ. ಸೂಸಿ ಬಂದುದು ಅವನಿಗೆ ತಿಳಿಯಲಿಲ್ಲ. ಸೂಸಿ ಒಂದೆರಡು ನಿಮಿಷ ಅವನ ಬಳಿಯಲ್ಲಿ ನಿಂತಳು. ಶಾಮುನು ತನ್ನ ಗುಂಗಿನಿಂದ ಬೇಗನೆ ಎಚ್ಚರವಾಗುವ ಲಕ್ಷಣ ತೋರಲಿಲ್ಲ. ಅವನ ಗಲ್ಲವನ್ನು ಹಿಡಿದು ತನ್ನ ಕಡೆ ತಿರುಗಿಸಿಕೊಂಡು ಬಲವಾದ ಮುತ್ತುಕೊಟ್ಟು 'ಹೇಗಾಯಿತು?' ಎಂದಳು.

ಶಾಮ ಒತ್ತಾಯದ ನಗೆಯನ್ನು ನಗುತ್ತ 'ಕುಳಿತುಕೋ ಸೂಸಿ' ಎಂದ. ಬದಿಯ ಕುರ್ಚಿಯೊಂದರ ಮೇಲೆ ಸೂಸಿ ಕೂತಳು.

ಮೋರೆ ಸಪ್ಪಗೆ ಮಾಡಿಕೊಂಡು ಹೀಗೇಕೆ ಕುಳಿತಿದ್ದೀರಿ?' ಸೂಸಿ ಕೇಳಿದಳು.

'ಏಕಿಲ್ಲ'

'ಏಕೆ? ನನ್ನ ಸಂಗಡ ಮಾತನ್ನು ಕೂಡ ಸರಿಯಾಗಿ ಆಡುವುದಿಲ್ಲ!'

'ಇನ್ನು ಹೇಗೆ ಮಾತನಾಡಬೇಕು ಸೂಸಿ?'

'ಮೊದಲಿನಂತೆ ನೀವು ಸಂತೋಷವಾಗಿಲ್ಲ!'

'ಸಂತೋಷವಾಗಿರದೆ ನನಗೇನಾಗಿದೆ?'

'ಊಟವನ್ನು ಕೂಡ ಸರಿಯಾಗಿ ಮಾಡುವುದಿಲ್ಲ. ಸೊರಗಿ ಸೊರಗಿ ಕಡ್ಡಿಯಾಗಿದ್ದೀರಿ. ನೀವು ಹೀಗೆಲ್ಲ ಮಾಡಬಾರದು'

'ಇಲ್ಲ ಇನ್ನು ಮೇಲೆ ಮಾಡುವುದಿಲ್ಲ.'

'ಎಲ್ಲಿ, ಒಂದು ಸಲ ನಗರಿ ನೋಡುವಾ'

'ನಗು ಎನ್ನುತ್ತಲೂ ಹೇಗೆ ನಗೆ ಬರಬೇಕು? ಸೂಸಿ! ನೀನು ನಟಿ, ನನಗೆ ಹೇಳಿಕೊಡಬೇಕು.'

'ನಾನು ಈಗ ಸಂತೋಷವಾಗಿದ್ದೇನೆ ಎಂದು ಭಾವಿಸಿಕೊಂಡು ಬಿಡಿ, ನಗುವು ತಾನಾಗಿಯೆ ಬರುವುದು'

ಶಾಮನ ಪಾಠ ಶಾಮನಿಗೆ ಒಪ್ಪಿಸಿದಳು. ಅವನು ಕಲಿಸಿದುದನ್ನು ಅವನಿಗೇ ಸಲ್ಲಿಸಿದಳು. ತಾನು ಹಿಂದೆ ಹೇಳಿದ ಮಾತು ನೆನಪಾಗಿ ಶಾಮ ತನ್ನಲ್ಲಿಯೇ ನಕ್ಕ. ಆ ನಗೆಯ ಛಾಯೆ ಮುಖದ ಮೇಲೆಯೂ ಮೂಡಿತು.

'ಸರಿ, ಈಗ ಮುಖದ ಮೇಲೆ ಸರಿಯಾದ ಭಾವವಿದೆ. ಇನ್ನು ಹೀಗೆ ನಗಬೇಕು....' ಎಂದು ಕಿಲಿ ಕಿಲಿ ನಕ್ಕಳು. ಶಾಮನಿಗೂ ನಗೆ ಬಂದಿತು.

'ಈಗ, ಕಲಾವಿದರಿಂದ ಒಂದು ವಿಷಯದ ಬಗ್ಗೆ ಅಭಿಪ್ರಾಯ ತೆಗೆದುಕೊಳ್ಳಲು ನಾನು ಇಲ್ಲಿಗೆ ಬಂದಿದ್ದೇನೆ.'

ಶಾಮ ಯಾವ ಕಡೆಗೋ ನೋಡುತ್ತಲಿದ್ದ.

'ನಾನು ಈಗ ಕೇಳುವ ಪ್ರಶ್ನೆಗೆ ನೀವು ಉತ್ತರ ಕೊಡಬೇಕಾದರೆ ನೀವು ನನ್ನ ಮುಖವನ್ನು ನೋಡದೆ ನಿರ್ವಾಹವಿಲ್ಲ. ಕಾರಣ ಹೀಗೆ ಮುಖವನ್ನು ತಿರುಗಿಸಿರಿ' ಎಂದು ಅವನ ಮುಖವನ್ನು ತನ್ನ ಕಡೆ ತಿರುಗಿಸಿಕೊಂಡಳು.

'ಏನು ?'

'ನಾನು ಇಂದು ಯಾವ ಸೀರೆಯನ್ನು ಉಟ್ಟುಕೊಳ್ಳಲಿ ? ನಾನು, ನನ್ನ ಮೈಬಣ್ಣ, ದೇಹದ ಕಟ್ಟು, ವಯಸ್ಸು ನಾವು ಹೋಗಬೇಕಾಗಿರುವ ಕಾರ್ಯ, ಅಲ್ಲಿಯ ವಾತಾವರಣ ಮೊದಲಾದ ದೇಶ, ಕಾಲಮಾನ, ಪರಿಸ್ಥಿತಿಗಳನ್ನು ವಿಚಾರಿಸಿಕೊಂಡು ಸರಿಯಾದ ಉತ್ತರವನ್ನು ಕೊಡಿ.'

'ಕೆಂಪದು'

'ಕೆಂಪದು ! ನಾನು ನಿಮ್ಮ ಕಣ್ಣಿಗೆ ಹೇಗೆ ಕಂಡೆ?'

'ಅಲ್ಲ, ಕರಿದು'

'ಕರಿದು ಬೇಡವೆಂದೆ ನಿಮ್ಮನ್ನು ಕೇಳಲು ಬಂದೆ. ಆಯಿತು ಕಲಾವಿದರ ಬಣ್ಣ ತಿಳಿದಂತಾಯಿತಲ್ಲ. ನಾನೇ ಡ್ರೆಸ್ಸು ಮಾಡಿಕೊಂಡು ಬರುತ್ತೇನೆ, ನೋಡಿ ಹೇಗಿರುತ್ತದೆಯೋ ? ನೀವು ಮಾತ್ರ ಚೆನ್ನಾಗಿ ಡ್ರೆಸ್ಸು ಮಾಡಿಕೊಳ್ಳಿರಿ. ಸೂಟನ್ನಾದರೂ ಹಾಕಿಕೊಳ್ಳಿರಿ ಇಲ್ಲವೆ ಸಾದಾ ಶರ್ಟು, ಧೋತರ, ಶಲ್ಲೆ ಸಾಕು. ತಾಲೂಕಕಚೇರಿ ಕಾರಕೂನರ ಹಾಗೆ ಇಪ್ಪತ್ತು ಜೇಬಿನ ಕೋಟು ಹಾಕಿಕೊಳ್ಳಬೇಡಿ.'

'ನಾನು ಇಂದು ಎಲ್ಲಿಯೂ ಬರುವುದಿಲ್ಲ. ನನ್ನ ಮೈಯಲ್ಲಿ ಸ್ವಸ್ಥವಾಗಿಲ್ಲ.'

'ಈಗ ಆ ಎಲ್ಲ ಮಾತುಗಳಿಗೆ ಅವಕಾಶವಿಲ್ಲ. ಡೈರೆಕ್ಟರರು ಬರುವ ವೇಳೆಯಾಯಿತು; ಬೇಗ ಸಿದ್ಧವಾಗಿರಿ. ಸಿನೇಮಾದಿಂದ ಬಂದನಂತರ ಮೈಯಲ್ಲಿ ಸ್ವಸ್ಥವಾಗಿದೆಯೊ ಇಲ್ಲವೊ ಎಂಬುದನ್ನು ಡಾಕ್ಟರರ ಮೂಲಕ ಪರಿಷ್ಕಾರವಾಗಿ ಪರಿಶೀಲಿಸಬಹುದು. ಈಗ ಹೇಳುವುದಕ್ಕೂ ಕೇಳುವುದಕ್ಕೂ ಸಮಯವಿಲ್ಲ' ಎಂದು ಗಾಂಭೀರ್ಯದ ಸೋಗಿನಲ್ಲಿ ಮಾತನಾಡುತ್ತ ಚಿಗರೆಯ ಓಟದಿಂದ ಒಳಗೆ ನಡೆದಳು ಸೂಸಿ.

ಇಂತಹ ಸಂಭಾಷಣೆಗಳನಂತರದಲ್ಲಿ ಶಾಮನು ತೀರ ಹಣ್ಣಾಗುತ್ತಿದ್ದ. ಅಶಕ್ತರಾಗಿದ್ದವರಿಗೆ ಏನಾದರೂ ಟಾನಿಕ್ ಕೊಟ್ಟ ಹಾಗೆ–ಟಾನಿಕ್ ಕೆಲಸ ಮಾಡುವವರೆಗೆ ಚಟುವಟಿಕೆಯಿಂದಿರುವುದು ಅನಂತರ ಮೊದಲಿನ ಕಿಂತಲೂ ಸಾವಿರಪಾಲು ಸುಸ್ತಾಗಿ ಬಿದ್ದುಕೊಳ್ಳುವುದು— ಹೀಗಾಗಿತ್ತು ಅವನ ಸ್ಥಿತಿ. ನನ್ನ ಸಂಸಾರವು ಎತ್ತ ಸಾಗಿದೆ ? ನಾನು ಈಗ ಏನು ಮಾಡುತ್ತಲಿದ್ದೇನೆ? ಇದರಿಂದ ಮುಂದೇನಾಗಬಹುದು ? ಯಾವುದೂ ಅವನಿಗೆ ತೋಚುತ್ತಿರಲಿಲ್ಲ. ಯಾವುದೋ ಒಂದು ಅದ್ಭುತವಾದ ಸೆಳವಿಗೆ ಸಿಕ್ಕು ಅವನು ಪೇಚಾಡುತ್ತಲಿದ್ದ-ಸೆಳವಿನಗುಂಟ ತೇಲಿಹೋಗುವುದಕ್ಕೆ ಮನಸ್ಸಿಲ್ಲ, ಸೆಳವಿಗೆ ಎದುರುಮುಖವಾಗಿ ಈಸಿ ಪಾರಾಗಬಹುದೆಂಬ ಧೈರ್ಯವಿಲ್ಲ.

ಡೈರೆಕ್ಟರರು, ಮಾಧವರಾಯರು, ಶ್ರೀಕಾಂತರು ವೇಳೆಗೆ ಸರಿಯಾಗಿ ಕಾರು ತೆಗೆದುಕೊಂಡು ಬಂದರು. ಸೂಸಿ ಸಿದ್ಧವಾಗಿದ್ದಳು, ಶಾಮನ ಶೃಂಗಾರವೂ ಆಯಿತು. ಎಲ್ಲರೂ ಹೊರಟರು.

ಮಂಗಲವಾದ್ಯಗಳು ಮೊಳಗುತ್ತಲಿದ್ದವು. ಥೇಟರಿನ ಸುತ್ತಲೂ ಜನರು ಕಿಕ್ಕಿರಿದಿದ್ದರು. ಪ್ರಥಮ ಪ್ರದರ್ಶನಕ್ಕೆ ಟಿಕೀಟಿನ ದರಗಳನ್ನು ಇಮ್ಮಡಿಸಿದ್ದರೂ ಜನ ಸಂದಣಿಯು ವಿಶೇಷವಾಗಿತ್ತು. ಎಲ್ಲ ನಟ ನಟಿಯರನ್ನೂ ರಂಗಸ್ಥಳದ ಮೇಲೆ ಕೂಡ್ರಿಸಿ ಪ್ರೇಕ್ಷಕರಿಗೆ ಅವರ ಪರಿಚಯ ಮಾಡಿ ಅವರ ಕಲೆಯ ವಿಷಯ ಎರಡು ಮಾತುಗಳನ್ನು ಹೇಳುವ ಕಾರ್ಯಕ್ರಮವನ್ನು ಸೇರಿಸಿದ್ದರಿಂದ ಅಂದಿನ ಪ್ರದರ್ಶನಕ್ಕೆ ಹೆಚ್ಚಿನ ಬೆಲೆ ಬಂದಿತ್ತು.

ಥೇಟರಿನ ಪ್ರವೇಶದ್ವಾರದಲ್ಲಿಯೇ ೧೦ ಅಡಿ ಎತ್ತರದ ಸೂಸಿಯ ಚಿತ್ರವೊಂದನ್ನು ನಿಲ್ಲಿಸಿದ್ದರು. ಅದನ್ನು ನೋಡುತ್ತಲೆ ಸೂಸಿ ಶಾಮನಿಗೆ ಭುಜವನ್ನು ತಾಗಿಸಿ ಸನ್ನೆ ಮಾಡಿದಳು.

ಥೇಟರಿನ ಆಟ್ಟವನ್ನು ಪೂರ್ತಿಯಾಗಿ ಮಾಲಕರಿಗೂ, ನಟ ನಟಿಯರಿಗೂ, ಕಂಪನಿಯ ಪ್ರಮುಖ ಕೆಲಸಗಾರರಿಗೂ ಕಾದಿರಿಸಿದ್ದರು. ಡೈರೆಕ್ಟರರು ಬರುತ್ತಲೂ ಎಲ್ಲರೂ ಎದ್ದು ನಿಂತರು. ಡೈರೆಕ್ಟರರು ಕುಳಿತರು, ಅವರ ಬದಿಯಲ್ಲಿ ತಾರಿಣಿ ಕುಳಿತಳು, ಆವಳ ಬದಿಯಲ್ಲಿ ಶಾಮರಾಯರು ಕುಳಿತುಕೊಳ್ಳಬಹುದು ಎಂದು ಮಾಧವನು ಅರೆನಿಮಿಷ ನೋಡಿದ.

ಆದರೆ ಅವರು ಎಲ್ಲಿಯೋ ನೋಡುತ್ತ ನಿಂತಿದ್ದರು. ತಾರಿಣಿಯ ಬದಿಗೆ ಮಾಧವನೇ ಕುಳಿತ. ಶಾಮುನ ಹಿಂದೆ ನಿಂತಿದ್ದ ಕಮಲೆ ತಾರಿಣಿಯ ಬದಿಯಲ್ಲಿಯೆ ಕುಳಿತುಕೊಳ್ಳುವುದಕ್ಕೆ ಸನ್ನೆ ಮಾಡಿದಳು; ಆದರೆ ಅಷ್ಟರಲ್ಲಿಯೆ ಮಾಧವನು ಕುಳಿತಿದ್ದ. ಮಾಧವನ ಬದಿಗೆ ಶಾಮು ಕುಳಿತ; ಅವನ ಬದಿಗೆ ಕಮಲೆ ಕುಳಿತಳು. ಮಿಕ್ಕವರೆಲ್ಲರೂ ಕುಳಿತರು; ಕರತಾಡನದೊಂದಿಗೆ ಚಿತ್ರವು ಪ್ರಾರಂಭವಾಯಿತು.

ಶಾಮುನಿಗೆ ಯಾವುದರಲ್ಲಿಯೂ ಆಸಕ್ತಿಯಿರಲಿಲ್ಲ. ಕಮಲೆಯು ಆಗಾಗ ವಕ್ರವಾಗಿ ಮಾಧವ-ತಾರಿಣಿಯರನ್ನು ನೋಡುತ್ತಲಿದ್ದಳು. ಅವಳು ಹಾಗೆ ನೋಡುತ್ತಲೂ ಶಾಮುನು ಆ ಕಡೆ ಕಣ್ಣು ಹೊರಳಿಸುತ್ತಿದ್ದ. ಆಗ ಯಾವ ದೃಶ್ಯವು ತನ್ನ ಕಣ್ಣಿಗೆ ಬೀಳುವುದೊ ಎಂದು ಅವನಿಗೆ ಭಯವಾಗುತ್ತಿತ್ತು. ಸೂಸಿಯ ಕೈಗಳು ಮಾಧವನ ಕೈಗಳಲ್ಲಿರಬಹುದು. ಇಲ್ಲವೆ ಅವನ ಭುಜವನ್ನಲಂಕರಿಸಿರಬಹುದು. ಅಥವಾ ಕೊರಳಿಗೆ ಹಾರವಾಗಿರಬಹುದು. ಇಲ್ಲವೆ ಭುಜದ ಮೇಲೆ ತಲೆಯನ್ನೊರಗಿಸಿರಬಹುದು-ಎಂದು ಏನೇನನ್ನೋ ಭಾವಿಸಿಕೊಳ್ಳುತ್ತಿದ್ದ. ಆದರೆ ಆ ಬಗೆಯ ದೃಶ್ಯವಾವುದೂ ಅವನಿಗೆ ಕಾಣಿಸಲಿಲ್ಲ.

ಸೂಸಿಯ ಅಭಿನಯವಿರುವಾಗ ಮಾತ್ರ ಶಾಮುನು ಚಿತ್ರದ ಕಡೆ ನೋಡುತ್ತಲಿರುತ್ತಿದ್ದ. ಮಿಕ್ಕ ವೇಳೆ ಅವನ ಬುದ್ಧಿಯೆಲ್ಲಿಯೋ-ಚಿತ್ತವೆಲ್ಲಿಯೋ! ಚಿತ್ರವು ಹೇಗಾಗಿದೆ, ಕಲೆಯ ದೃಷ್ಟಿಯಿಂದ ಆದರಲ್ಲಿ ನ್ಯೂನತೆಗಳೇನು, ಹೆಚ್ಚಳವು ಏತರಲ್ಲಿದೆ ಎಂಬುದರ ಬಗ್ಗೆ ಅವನ ಲಕ್ಷ್ಯವಿರಲಿಲ್ಲ. ಸೂಸಿ ತನ್ನ ಹೆಂಡತಿ-ತನ್ನ ಧರ್ಮಪತ್ನಿ ಚಿತ್ರದಲ್ಲಿ ನಾಯಕಿಯ ಪಾತ್ರ ವಹಿಸಿದ್ದಾಳೆ, ಯಾವ ರೀತಿ ಅಭಿನಯಿಸುವಳೋ! ಪರಪುರುಷನಾದ ಮಾಧವನೊಡನೆ ಅತಿಯಾಗಿ ಸಲಿಗೆ ತೋರಿಸಿ ಎಲ್ಲಿ ಮರ್ಯಾದೆಗೆ ಭಂಗವಾಗುವಂತೆ ವರ್ತಿಸುವಳೋ! ಜನರೆದುರಿಗೆ ಮುಖವೆತ್ತದಂತಾಗಿ ತಾನೆಲ್ಲಿ ನಗೆಗೀಡಾಗುವನೋ ಎಂಬ ವಿಚಾರವೊಂದೇ ಅವನ ತಲೆಯಲ್ಲಿ ತಾಂಡವವಾಡುತ್ತಿತ್ತು.

ಅರ್ಧ ಚಿತ್ರವಾಯಿತು. ವಿರಾಮದ ಕಾಲಕ್ಕೆ ಉಪಹಾರವಾಯಿತು,

ತಾಂಬೂಲ ಸಮಾರಂಭವಾಯಿತು. ಆನಂತರ ರಂಗಸ್ಥಳದ ಮೇಲೆ ಮಾಲಕರೂ, ಎಲ್ಲ ನಟ-ನಟಿಯರೂ, ಡೈರೆಕ್ಟರರೂ, ಶ್ರೀಕಾಂತರೂ, ಗಿರಿಧರ ಪಂತರೂ ವಿರಾಜಮಾನರಾದರು ಕಲಾವಿಮರ್ಶಕರೆಂದು ಹೆಸರಾದ ಪ್ರಮುಖ ಪತ್ರಿಕೆಯ ಸಂಪಾದಕರೊಬ್ಬರೂ ಚಿತ್ರದ ಹೆಚ್ಚಳವನ್ನು ಮನ ವಾರೆ ಹೊಗಳಿ ಎಲ್ಲರಿಗೂ ಮಾಲೆ ಸಮರ್ಪಣ ಮಾಡಿದರು. ಮಾಲಕರು, ಡೈರೆಕ್ಟರರು, ಶ್ರೀಕಾಂತರು, ಗಿರಿಧರಪಂತರು ನಂತರ ತಾರಿಣಿದೇವಿ, ಮಾಧವರಾಯರು-ಡೈರೆಕ್ಟರರು ಸನ್ನೆ ಮಾಡದಿದ್ದರೆ ಇಷ್ಟಕ್ಕೇ ಮುಗಿಯುತ್ತಿತ್ತು-ಶಾಮರಾಯರಿಗೂ ಒಂದು ಮಾಲೆಯನ್ನರ್ಪಿಸಿದರು. ಅದು ಹೂವಿನ ಮಾಲೆಯಲ್ಲ- ಮುಳ್ಳಿನಮಾಲೆ ಎಂದೆನ್ನಿಸಿತು ಶಾಮನಿಗೆ.

ಪುನಃ ಚಿತ್ರವು ಪ್ರಾರಂಭವಾಯಿತು. ಈ ಸಲವೂ ಮೊದಲಿನಂತೆಯೇ ಕುಳಿತರು. ಸೂಸಿಯು ಬಳಿ ಕುಳಿತುಕೊಳ್ಳಬೇಕೆಂದು ಶಾಮನು ಆಸಕ್ತಿಯನ್ನೂ ತೋರಿಸಲಿಲ್ಲ. ಸೂಸಿ ಮಾಧವನ ಸಂಗಡ, ಡೈರೆಕ್ಟರರ ಸಂಗಡ ಒಂದೇ ಸವನೆ ಮಾತನಾಡುತ್ತಲೇ ಇದ್ದಳು. ಈ ಹಾಡು ಚೆನ್ನಾಗಿ ಬಂದದೆ, ಆ ಮಾತಿಗೆ ಜೋರು ಸಾಲದು, ಫೋಟೋ ಕೆಟ್ಟದೆ, ಈ ದೃಶ್ಯ ಹೀಗಿದೆ- ಆ ಅಭಿನಯ ಹೀಗಿದೆ ಎಂದು ಮಾತನಾಡುತ್ತಲೆ ಇದ್ದಳು. ಮುಖ ಒಂದು ಸಲ ಈ ಕಡೆ ಒಂದು ಸಲ ಆ ಕಡೆ ಹೊರಳುತ್ತಲೇ ಇತ್ತು.

ಚಿತ್ರ ನಡೆದಾಗ ಕಮಲೆ ಶಾಮನನ್ನು ಚಿವುಟ ಎಚ್ಚರಗೊಳಿಸಿದಳು. ಶಾಮ ಚಟ್ಟನೆ ಹಾರಿಬಿದ್ದು ಸೂಸಿಯ ಕಡೆ ನೋಡಿದ. ಕುಡಿಯುವ ದೃಶ್ಯ ಬಂದಿತು ಎಂದಳು. ಶಾಮ ನಿದ್ದೆಯಿಂದೆಚ್ಚತ್ತವನಂತೆ ಸೆಟೆದು ಕುಳಿತ.

ಆ ದೃಶ್ಯವು ಬಂದಿತು. ಚಪ್ಪಾಳೆಯ ಮೇಲೆ ಚಪ್ಪಾಳೆ. ಡೈರೆಕ್ಟರರೂ, ಮಾಧವರಾಯರೂ ಕುರ್ಚಿಯ ಮೇಲೆಯೇ ಕುಣಿದರು. ಶ್ರೀಕಾಂತರು ದೃಶ್ಯ ನಡೆದಿರುವಾಗಲೆ ಎದ್ದು ಬಂದು ತಾರಿಣಿಗೆ 'ಥ್ಯಾಂಕ್ಸ್' ಕೊಟ್ಟರು. ತಾರಿಣಿಯು ಶಾಮನ ಕಡೆ ನೋಡುತ್ತ 'ಥ್ಯಾಂಕ್ಸ್ ಅವರಿಗೆ ಕೊಡಿ' ಎಂದಳು.

ಶಾಮನ ಕಣ್ಣುಗಳು ಚಿತ್ರದಲ್ಲಿ ನೆಟ್ಟಿದ್ದವು. ಆವನು ಕಲ್ಪಿಸಿದ್ದರ ಕಿಂತಲೂ ಹೆಚ್ಚು ಮೈಮರೆತು ಅವಳು ಅಭಿನಯಿಸಿದ್ದಳು. ಮಾಧವನ ಕೊರಳಲ್ಲಿ ಜೋತು ಬಿದ್ದಳು; ತೊಡೆಯ ಮೇಲೆ ಒರಗಿದಳು; ಕುಡಿದ ಗುಂಗಿನಲ್ಲಿ ಮಾಧವನನ್ನು ಗಟ್ಟಿಯಾಗಿ ತಬ್ಬಿಕೊಂಡಳು. ಅವನ ಗಲ್ಲ ಗಳಿಗೆ ಎರಡು ಸಲ ರಭಸದಿಂದ ಮುತ್ತು ಕೊಟ್ಟಳು; ಆಗ ಮೈ ಮೇಲಿನ ಸೆರಗು ಕೂಡ ಕೆಳಗೆ ಬಿದ್ದಿತ್ತು.

ಶಾಮನಿಗೆ ತೀರ ತಡೆಯದಂತಾಯಿತು. ಕಣ್ಣುಗಳನ್ನು ಗಟ್ಟಿಯಾಗಿ ಮುಚ್ಚಿಕೊಂಡ.

## ೧೬

ಕುಂಚ, ಬಣ್ಣ ಮೊದಲಾದ ಶಾಮನ ಚಿತ್ರದ ಸಾಮಗ್ರಿಗಳು ಕಪಾಟಿನಿಂದ ಹೊರಬೀಳದೆ ಅದೆಷ್ಟೋ ದಿನಗಳಾಗಿದ್ದವು. ಕ್ಯಾಮೆರಾ ಧೂಳು ತಿನ್ನುತ್ತ ಮೂಲೆಯಲ್ಲಿ ಬಿದ್ದಿತ್ತು. ಎಲ್ಲವೂ ಚೊಕ್ಕಟವಾಗಿರಬೇಕು, ಅಚ್ಚುಕಟ್ಟಾಗಿರಬೇಕು, ಸುಂದರವಾಗಿರಬೇಕು ಎಂದು ಸದಾ-ಸರ್ವದಾ ಬಡಬಡಿಸುತ್ತಿದ್ದವನಿಗೆ ಈಗ ನಾಲ್ಕು ನಾಲ್ಕು ದಿನಗಳಾದರೂ ಸ್ನಾನ ಮಾಡಬೇಕು ಎಂಬ ಎಚ್ಚರಿಕೆ ಕೂಡ ಇರುತ್ತಿರಲಿಲ್ಲ. ತನ್ನ ಕೋಣೆಯ ಬಾಗಿಲು ಹಾಕಿಕೊಂಡು ಸುಮ್ಮನೆ ಕುಳಿತುಕೊಳ್ಳುತ್ತಿದ್ದ. ಕೋಣೆಯಲ್ಲಿಯ ಸಾಮಾನುಗಳೂ ಅಸ್ತವ್ಯಸ್ತವಾಗಿ ಬಿದ್ದಿರುತ್ತಿದ್ದವು. ಅತ್ತ ಇವನ ಗಮನವೇ ಇರುತ್ತಿರಲಿಲ್ಲ.

ಇವನು ಹೀಗೆ ಕುಳಿತಾಗ ಒಂದು ದಿನ ಸೂಸಿ ಇವನ ಕೋಣೆಗೆ ಬಂದಳು. 'ಇದೇನು ಹೀಗೆ ಕುಳಿತಿದ್ದೀರಿ? ಕಸವನ್ನು ತೆಗೆಯುವವಳಿಗೆ ಹೇಳಿದರೆ ಎಲ್ಲವನ್ನೂ ಸರಿಯಾಗಿರಿಸುತ್ತಿದ್ದಳು' ಎಂದಳು.

ಶಾಮ ಉತ್ತರವನ್ನೇ ಕೊಡಲಿಲ್ಲ.

'ಇಂದು ನಾನು ಸರಿಯಾಗಿರಿಸುತ್ತೇನೆ' ಎಂದು ಎಲ್ಲ ಚಿತ್ರಗಳ ಮೇಲಿನ ಧೂಳು ಕೊಡಹಿ ವ್ಯವಸ್ಥಿತವಾಗಿಟ್ಟಳು. ಪುಸ್ತಕಗಳನ್ನು ಓರಣವಾಗಿ ಹೊಂದಿಸಿದಳು. ಮಾಸಿದ ಬಟ್ಟೆಗಳನ್ನು ಒಂದು ಬದಿಗಿರಿಸಿ ಗಂಜಿಯಾಗಿ ಬಂದ ಬಟ್ಟೆಗಳನ್ನು ತಂದಿರಿಸಿದಳು. ಶಾಮನು ಇಂದು ಕ್ಷೌರ ಮಾಡಿಕೊಳ್ಳಲೇಬೇಕೆಂದು ಹೇಳಿ ಕ್ಷೌರದ ಸಾಮಾನುಗಳನ್ನು ತೆಗೆದಿರಿಸಿ ನೀರು ತಂದು ಕೊಟ್ಟಳು.

ಶಾಮನ ಕ್ಷೌರವಾಯಿತು; ಸ್ನಾನವಾಯಿತು. ಗಂಜಿ ಬಟ್ಟೆಗಳನ್ನು

ಹಾಕಿಕೊಂಡ. ಸೂಸಿಯೆ ಅವನಿಗೆ ಎಲ್ಲ ಬಟ್ಟೆ ತೊಡಿಸಿದಳು. ಸ್ನಾನಕ್ಕೆ ಕೂಡ ಅವಳೇ ನೀರು ತುಂಬಿಕೊಟ್ಟಳು. ಶಾಮನಿಗೆ ಒಂದು ವರ್ಷದ ಹಿಂದಿನ ತನ್ನ ಜೀವನದ ನೆನಪಾಯಿತು. ಅಂದಿನಂತೆ ಇಂದಾದರೂ ಸೂಸಿ ತನಗಾಗಿ ದುಡಿಯುತ್ತಲಿದ್ದಾಳೆ ಎಂದು ಅವನಿಗೆ ಸಂತೋಷವಾಯಿತು. 'ದಿನಾಲು ಹೀಗೆಯೆ ಇದ್ದಿದ್ದರೆ!' ಎಂಬ ಉದ್ಗಾರವು ಶಾಮುನಿಂದ ಹೊರಬಿದ್ದಿತು.

'ಬೇಡವೆಂದು ಅಂದವರಾರು? ಬೇಕಾದ ಹಾಗೆ ಕೆಲಸದವರಿದ್ದಾರೆ, ಅವರಿಗೆ ಹೇಳಿ ಅವರ ಕಡೆಯಿಂದ ಕೆಲಸ ಮಾಡಿಸಿಕೊಳ್ಳಲು ನಿಮಗೆ ಆಗುವುದಿಲ್ಲವಲ್ಲ!' ಎಂದು ಶಾಮುನು ಕುಳಿತಿದ್ದ ಕುರ್ಚಿಯ ಕೈಮೇಲೆ ಕುಳಿತುಕೊಂಡು ಅವನ ಕೂದಲುಗಳನ್ನು ಸರಿಪಡಿಸತೊಡಗಿದಳು.

'ಸೂಸಿ! ಹೀಗೆಯೆ ಇರೋಣ. ದಿನಾಲು ನೀನು ನನ್ನ ಸಂಗಡ ಹೀಗೆಯೆ ಇರಬೇಕು. ನನಗೆ ಈ ಆಡಂಬರವು ಬೇಡ; ಆಳು ಹೋಳು ಗಳು ಬೇಡ; ನನಗೆ ನೀನೊಬ್ಬಳೇ ಸಾಕು. ನೀನು ಮಾತ್ರ ನನ್ನವ ಳಾಗಿರು.'

'ನಾನು ಯಾವಾಗಲೂ ನಿಮ್ಮವಳೇ. ಅಲ್ಲವೆಂದು ಎಂದಾದರೂ ಹೇಳಿದ್ದೇನೆಯೆ? ಆದರೆ ಏನೇನೊ ಕೆಲಸಗಳು. ಸಂತೋಷವಾಗಿ ಕುಳಿತು ಕೊಂಡು ಮಾತನಾಡಬೇಕೆಂದರೆ ಅವಕಾಶ ದೊರೆಯದಂತಾಗಿದೆ. ಸಂದರ್ಶ-ನದ ಸಲುವಾಗಿ ಬರುವವರ ಕಾಟವಂತೂ ಹೇಳತೀರದಷ್ಟಾಗಿದೆ. ದಿನಾಲು ಇಷ್ಟೊಂದು ಪತ್ರಗಳು, ಅವುಗಳಲ್ಲಿ ಕೆಲವಕ್ಕಾದರೂ ಉತ್ತರ ಕೊಡಲೇ ಬೇಕಾಗುವುದು.'

ಶಾಮುನು ಮುಂದುವರಿಸಿದ. 'ಈ ವೈಭವವು ಬೇಡ. ಮಾನ-ಮರ್ಯಾದೆ, ಕಲಾ-ಕೀರ್ತಿ ಎಲ್ಲವೂ ಸಾಕು. ಈ ಪಟ್ಟಣವನ್ನೇ ಬಿಟ್ಟು ಬಿಡೋಣ, ನಮ್ಮ ಹಳ್ಳಿಗೆ ಹೋಗೋಣ. ಅಲ್ಲಿ ಸುಖವಾಗಿ ಹೊಲವನ್ನು ಮಾಡಿಸಿಕೊಂಡಿರೋಣ.'

'ಹಳ್ಳಿಗೆ ಹೋಗುವುದೇ? ಇದನ್ನೆಲ್ಲ ಬಿಟ್ಟು ಹಳ್ಳಿಗೆ ಹೋಗಿ ಅಲ್ಲೇನು ಮಾಡಬೇಕು?'

ಶಾಮು ಏನೋ ಹೇಳಿಬಿಟ್ಟ. ಅವಳಿಗೆ ತನ್ನ ಮನಸ್ಸಿನ ಅಭಿಪ್ರಾಯವನ್ನು ತಿಳಿಸುವುದು ತನ್ನಿಂದ ಸಾಧ್ಯವಿಲ್ಲವೆಂಬುದು ಗೊತ್ತಿದ್ದರೂ ಏನೋ ಉದ್ವೇಗದ ಭರದಲ್ಲಿ ಹೇಳಿಬಿಟ್ಟಿದ್ದ. ಇನ್ನೂ ಹೆಚ್ಚು ಕೀರ್ತಿ ಗಳಿಸಬೇಕು, ಇನ್ನೂ ಹೆಚ್ಚು ಹಣ ಗಳಿಸಬೇಕು, ಸಿನೇಮಾ ಪ್ರಪಂಚಕ್ಕೆ ಆದರ್ಶಪ್ರಾಯಳೆಂದೆನಿಸಿಕೊಳ್ಳಬೇಕು, ಎಂದು ಆತುರದಿಂದ ಹಾರೈಸುತ್ತಿದ್ದವಳಿಗೆ ಈ ಮಾತುಗಳು ವಿಷಪ್ರಾಯವೆಂದು ತೋರಬಹುದು ಎಂದವನಿಗೆ ಮೊದಲೇ ಗೊತ್ತಿತ್ತು. ಆದರೂ ಹೇಳಿದ. ತಡೆಯಲು ಆಗಲಿಲ್ಲವೆಂದೇ ಅವನು ಹೇಳಿದ-ಆವಳು ಈ ಮಾತುಗಳನ್ನು ಗಮನಿಸಬಹುದೆಂದು ಕೂಡ ಅವನಿಗೆನಿಸಿರಲಿಲ್ಲ. ಈಗ ಅವಳಿಗೆ ಉತ್ತರ ಕೊಡಲು ಬಾರದೆ ಮೊದಲಿನಕಿಂತಲೂ ಹೆಚ್ಚು ಸಂಕಟಕ್ಕೊಳಗಾದ.

' ಏನಾದರೂ ಮಾಡುವುದು. ನನಗೆ ಇದೆಲ್ಲ ಬೇಸರ ಬಂದಿದೆ '

' ಬೇಸರ ಬರಲು ಕಾರಣ ? '

ಶಾಮನು ಸುಮ್ಮನಿದ್ದ

' ಮುಂದಿನ ಚಿತ್ರಕ್ಕೆ ಏನಿಲ್ಲೆಂದರೂ ೧೫ ಸಾವಿರ ಕೊಡಲು ಸಿದ್ಧರಾಗಿದ್ದಾರೆ. ನಾನು ಬಿಗಿ ಹಿಡಿದರೆ ಇನ್ನೂ ಹೆಚ್ಚು ದೊರೆಯಬಹುದು. ಆದರೆ ಈ ಸಲ ನಾಯಕನ ಪಾತ್ರ ವಹಿಸುವವನು ಒಳ್ಳೆ ಹೆಸರುವಾಸಿಯಾದವನು. ಅವನ ಜೊತೆಯಲ್ಲಿ ಅಭಿನಯಿಸಬೇಕು ಎಂದು ನನಗೆ ಆಸೆಯಾಗಿದೆ. ಬಹಳವೆಂದರೆ ಈ ಚಿತ್ರ ೩-೪ ತಿಂಗಳೊಳಗಾಗಿಯೆ ಪೂರ್ತಿಯಾಗುವುದು. ನೀವು ಚಿತ್ರ ತೆಗೆಯುವುದನ್ನಂತೂ ಸಂಪೂರ್ಣವಾಗಿ ನಿಲ್ಲಿಸಿಯೇ ಬಿಟ್ಟಿರಿ.... '

ವಕ್ತೃವಿನಕಿಂತಲೂ ಶ್ರೋತೃವಾಗಿರುವುದೇ ಹಿತವಾಗಿದೆ ಎಂದೆನಿಸಿತು ಶಾಮನಿಗೆ.

' ಈ ಚಿತ್ರ ಮುಗಿದನಂತರ ಭರತನಾಟ್ಯ ಸ್ವಲ್ಪ ಅಭ್ಯಾಸಿಸಬೇಕೆಂದಿದ್ದೇನೆ. 'President' ಚಿತ್ರದಲ್ಲಿಯ ಲೀಲಾ ದೇಸಾಯಿಯ ನರ್ತನ ನೋಡಲಿಲ್ಲವೆ, ಹೇಗಿತ್ತು ? ಆ ಚಿತ್ರದಲ್ಲಿ ಎಲ್ಲರೂ ಸೇರಿ ೨॥ ಗಂಟೆ

ಕಾಲ ಕಷ್ಟಪಟ್ಟು ಅಭಿನಯಿಸಿದ್ದೂ ಒಂದೇ ಅವಳು, ೨|| ನಿಮಿಷ ನರ್ತನ ಮಾಡಿದ್ದೂ ಒಂದೇ–ಹೃದಯವನ್ನೇ ನಡುಗಿಸಿಬಿಡುತ್ತಾಳೆ '

'ಹೂ–ಸರಿ–ಮುಂದೆ ? '

'ಮುಂದೆ ! ನಾನೇನು ಕತೆ ಹೇಳುತ್ತೇನೆ ಎಂದುಕೊಂಡಿರೇನು ? ಮುಂದೆ ! ಮುಂದೆ ನೀವು ನಗಬೇಕು. ಈ ಜೋಲು ಮುಖ ಹಾಕಿಕೊಂಡು ಕುಳಿತುಕೊಳ್ಳುವುದನ್ನು ಬಿಟ್ಟು ಬಿಡಬೇಕು. ಸದ್ಯಕ್ಕೆ ನೀವು ನನ್ನ ಸಂಗಡ ಹೊರಗೆ ಹೊರಡಬೇಕು.'

'ಎಲ್ಲಿಗೆ ?'

'ಇಂದು ಗಾರ್ಬೊನ ಚಿತ್ರ ಇದೆ. 'ಮೆರಿ ಮೌಸ್ಕ'. ಆ ಪುಣ್ಯಾತ್ಮಳನ್ನು ನೋಡಿಕೊಂಡು ಬರೋಣ'

ಚಿತ್ರವನ್ನು ನೋಡುವುದಕ್ಕೆ ಹೊರಡಿಸಿಯೇ ಬಿಟ್ಟಳು. ಚಿತ್ರವನ್ನು ನೋಡುತ್ತಿರುವಾಗಲೆಲ್ಲ ಸೂಸಿ ಗಾರ್ಬೊಳನ್ನು ಮುಕ್ತಕಂಠದಿಂದ ಹೊಗಳುತ್ತಿದ್ದಳು. 'ಅವಳು ಸುಮ್ಮನೆ ನಿಂತರೆ ಸಾಕು, ಅದರಲ್ಲಿ ಒಂದು ಠೀವಿಯಿದೆ–ಗಾಂಭೀರ್ಯವಿದೆ; ಅವಳ ಅರೆಮುಚ್ಚಿದ ಕಣ್ಣುಗಳಲ್ಲಿ ತುಂಬಿರುವ ಶಾಂತಭಾವವು ಅವರ್ಣನೀಯವಾದುದು....' ಇತ್ಯಾದಿ ಹೇಳುತ್ತಲೇ ಇದ್ದಳು.

ಇದಾವುದನ್ನೂ ಶಾಮನು ಗಮನಿಸಿರಲಿಲ್ಲ. ಅವನಿಗೆ ಕಂಡುದು ಗಾರ್ಬೊನ ಪ್ರಿಯಕರ ಹಾಗು ಅವನ ಅಂತರಂಗದಲ್ಲಿ ನಡೆದ ತುಮುಲ ಯುದ್ಧ. 'ಗಾರ್ಬೊ ಈ ರೀತಿ ಅಭಿನಯಿಸುವುದನ್ನು ನೋಡಿ ಅವನು ಹೇಗೆ ಸಹಿಸಿಕೊಂಡಿದ್ದಾನೆ. ಗಾರ್ಬೊ ಒಮ್ಮೆ ನಾಯಕನಿಗೆ ಮುದ್ದು ಕೊಟ್ಟರೆ ಪ್ರೇಕ್ಷಕರ ಹೃದಯವೆಲ್ಲವೂ ಚೆದುರಿ ಹೋಗುವುದು. ಅದನ್ನು ನೋಡಿ ಅವಳ ಪ್ರಿಯಕರನಿಗೆ ಏನೂ ಅನ್ನಿಸುವುದಿಲ್ಲವೇ ? ' ಚಿತ್ರ ಮುಗಿಯುವವರೆಗೆ ಇದೇ ಯೋಚನೆಯನ್ನು ಮಾಡುತ್ತಲಿದ್ದನು.

ಮನೆಗೆ ಮರಳಿದರು. ಅವನ ಹೃದಯವು ಅಸೂಯೆಯಿಂದ ತುಂಬಿಕೊಂಡಿತ್ತು. 'ನನ್ನ ಸೂಸಿ ನನ್ನವಳಾಗಿರಬೇಕು– ಸಂಪೂರ್ಣವಾಗಿ ನನ್ನವಳೇ ಆಗಿರಬೇಕು. ಅವಳು ಇತರರೊಡನೆ ಸಲಿಗೆಯಿಂದಿರುವು

ದನ್ನು ನಾನು ನೋಡಲಾರೆ. ಅವಳು ನನಗಾಗಿ ಹಾಡಬೇಕು, ನನಗಾಗಿ ನಲಿಯಬೇಕು, ಅವಳು ಶೃಂಗರಿಸಿಕೊಂಡು ಸಂತೋಷವಾಗಿದ್ದರೆ ಅದು ಕೇವಲ ನನಗಾಗಿ–ನನ್ನ ಮನಸ್ಸನ್ನು ಉಲ್ಹಾಸಗೊಳಿಸುವದಕ್ಕಾಗಿ. ನನ್ನ ವಿನಃ ಅವಳಿಗೆ ಅಸ್ತಿತ್ವವಿಲ್ಲ. ನಾನೆಂದರೆ ಅವಳ ಜೀವ–ಜೀವನದ ಸರ್ವಸ್ವವಾಗಿರಬೇಕು.

' ಎಲ್ಲ ವೃತ್ತಪತ್ರಗಳೂ ಅವಳನ್ನು ಯಥೇಚ್ಛವಾಗಿ ಹೊಗಳುತ್ತ ಲಿವೆ. ಉಮಾಪತಿರಾಯರು ಚಲಚ್ಚಿತ್ರದ ದೇವತೆಯನ್ನು ಕಂಡು ಹಿಡಿ ದರು ಎಂದು ಹೇಳುತ್ತಲಿದ್ದಾರೆ. ಅವಳ ಹಾಡು ಪ್ರತಿಯೊಂದು ಚಿಕ್ಕ ಉಪಹಾರಗೃಹದಲ್ಲಿಯೂ ಜನರ ಮನವನ್ನು ತಣಿಸುತ್ತಲಿದೆ. ಪ್ರತಿದಿನ ಅವಳ ವಿಳಾಸಕ್ಕೆ ನೂರಾರು ಪತ್ರಗಳು ಬರುತ್ತಲಿವೆ. ಅನೇಕರು ಅವ ಳನ್ನು ಕಾಣಲು ಬರುತ್ತಲಿದ್ದಾರೆ. ಅವಳು ಕೀರ್ತಿಯನ್ನು ಸಂಪಾದಿಸಿ ದ್ದಾಳೆ. ಹಣವನ್ನೂ ಸಂಪಾದಿಸಿದ್ದಾಳೆ– ಇನ್ನೂ ಸಂಪಾದಿಸುತ್ತಾಳೆ.

' ಆದರೆ ನನಗೆ ಹಣವು ಬೇಡ; ಕೀರ್ತಿಯುಃ ಬೇಡ; ಅವಳು ಬೇಕು. ಸ್ವಾರ್ಥಿ ಎಂದು ಜನರು ಆಡಿಕೊಳ್ಳಲಿ. ಒಬ್ಬ ಕಲಾವಿದೆಯ ಜೀವನವನ್ನು ಹಾಳುಮಾಡುತ್ತಲಿದ್ದಾನೆ ಎಂದು ಜನರು ನನ್ನನ್ನು ತಿರಸ್ಕರಿಸಲಿ. ಬಡ ತನದ ಬೇಗೆಯ ಪರಿವೆಯು ನನಗಿಲ್ಲ–ಸಾಲಗಾರರು ನನ್ನನ್ನು ಮುತ್ತಿದರೂ ಚಿಂತೆಯಿಲ್ಲ. ಅವಳು ನನ್ನವಳಾಗಿದ್ದರೆ ಸಾಕು.

' ನನ್ನ ಈ ಚಿಕ್ಕ ಹೃದಯದಲ್ಲಿ ಅವಳ ವಿಶಾಲವಾದ ಜೀವನವನ್ನು ಅಡಗಿಸಿ ಬಿಡುವುದು ನನ್ನಿಂದ ಸಾಧ್ಯವೇ ? ಈ ನಾಲ್ಕೆಂಟು ತಿಂಗಳುಗಳ ಅವಧಿಯಲ್ಲಿ ಅವಳಲ್ಲಿ ವಿಶೇಷ ಬದಲಾವಣೆಯಾಗಿದೆ. ಅವಳು ಎಷ್ಟೋ ಮುಂದುವರೆದಿದ್ದಾಳೆ. ನಾನು ಅಷ್ಟೇ ಹಿಂದೆ ಹೋಗಿದ್ದೇನೆ. ಇಂದು ಅವಳು ನನ್ನವಳು–ನನ್ನ ವಸ್ತು ಎಂದು ಹೇಳಿಕೊಳ್ಳಲಾರೆ–ಅವಳು ಪ್ರಪಂಚದ ಸೊತ್ತಾಗಿದ್ದಾಳೆ. ಅವಳ ಜೀವನದ ಕಡೆಗೆ ಪ್ರಪಂಚದ ಲಕ್ಷ್ಯವಿದೆ. ಆವಳ ಜೀವನದ ವ್ಯತ್ಯಾಸಗಳನ್ನು ಎಲ್ಲರೂ ಏಕಾಗ್ರಚಿತ್ತ ದಿಂದ ನೋಡುತ್ತಲಿದ್ದಾರೆ–ಆತ್ಮೀಯ ದೃಷ್ಟಿಯಿಂದ ನೋಡುತ್ತಲಿದ್ದಾರೆ.

ಹೀಗಿರುವಾಗ ಅವಳನ್ನು ನನ್ನ ಹೃದಯದಲ್ಲಿ ಬಚ್ಚಿಟ್ಟುಕೊಳ್ಳಲು ಸಾಧ್ಯವೆ ?

'ಈಗೇನು ಮಾಡಲಿ ? ಕಣ್ಣು ತೆರೆಯದ ಗಿಳಿಯ ಮರಿಯೊಂದನ್ನು ಸಾಕಿ ಸಲುಹಿದೆ. ಹಾರಲು ಕಲಿಸಿದೆ. ಸೃಷ್ಟಿಯ ಸೊಬಗನ್ನು ನೋಡಿ ನಲಿಯುವ ದೃಷ್ಟಿಯನ್ನು ಕೊಟ್ಟೆ. ಅದು ಈಗ ಆಕಾಶದಲ್ಲಿ ಹಾರಾಡುತ್ತಿದೆ. ಅನಂತವಾದ ಆಕಾಶದಲ್ಲಿ–ಅಸಂಖ್ಯ ನಕ್ಷತ್ರಗಳ ಮಧ್ಯದಲ್ಲಿ-ಸ್ವೇಚ್ಛೆಯಿಂದ ಹಾರಾಡುತ್ತಿದೆ. ಸುಂದರವಾದ ಸೃಷ್ಟಿಯನ್ನು ನೋಡಿ ನಲಿಯುತ್ತಲಿದೆ. ಸ್ವಾತಂತ್ರ್ಯದ ಸವಿಯನ್ನು ಸವಿಯುತ್ತಲಿದೆ. ನನ್ನ ಗಿಳಿ ನನ್ನ ಗೂಡು ಬಿಟ್ಟಿತಲ್ಲಾ ಎಂದು ಕೊರಗಲೊ ! ನನ್ನ ಗಿಳಿ ಹೇಗೆ ಹಾಡಿ–ಹಾರಿ ನಲಿಯುತ್ತಲಿದೆ ಎಂದು ಸಂತೋಷಪಡಲೋ !

'ಸೂಸಿ ಪ್ರಪಂಚದ ಸೊತ್ತಾಗಿದ್ದಾಳೆ ! ತನ್ನ ಕಲಾ ಪ್ರತಿಭೆಯಿಂದ ಎಲ್ಲರನ್ನು ಸಂತೋಷಗೊಳಿಸುವುದೇ ತನ್ನ ಕರ್ತವ್ಯವೆಂದು ಭಾವಿಸುತ್ತಿದ್ದಾಳೆ ! ಎಲ್ಲರ ಸಂತೋಷಕ್ಕಾಗಿ ಶೃಂಗರಿಸಿಕೊಳ್ಳುತ್ತಾಳೆ! ಎಲ್ಲರ ಸಂತೋಷಕ್ಕಾಗಿ ಹಾಡುತ್ತಾಳೆ ! – ಅಭಿನಯಿಸುತ್ತಾಳೆ ! – ಕಲಾಪ್ರದರ್ಶನವನ್ನು ಮಾಡುತ್ತಾಳೆ ! ಕಲಾವತಿಯಾಗಿದ್ದಾಳೆ !!'

ಕಲಾವತಿ ! ಕಲಾವತಿ ! ಶಾಮನ ಮೈಯಲ್ಲಿ ನಡುಕ ಹುಟ್ಟಿತು. ಬೆಚ್ಚಗೆ ಡ್ರಾಯಿಂಗ ರೂಮಿನಲ್ಲಿ ಕುಳಿತಿದ್ದರೂ ಚಳಿಗೆ ಸಿಕ್ಕವನಂತೆ ಅವನ ಮೈಯೆಲ್ಲವೂ ನಡುಗಲಾರಂಭಿಸಿತು. ಬೆದರಿ ಅತ್ತ ಇತ್ತ ನೋಡಿದ. ಬದಿಯ ಕೋಣೆಯಲ್ಲಿ ಪಲ್ಲಂಗದ ಮೇಲೆ ಏನನ್ನೋ ಓದುತ್ತ ಸೂಸಿ ಒರಗಿದ್ದಳು. ಸಿನೇಮಾದಿಂದ ಬಂದು ಡ್ರೆಸ್ಸನ್ನು ಕೂಡ ಬದಲಾಯಿಸದೆ ಶಾಮನು ಡ್ರಾಯಿಂಗ ರೂಮಿನ ಆರಾಮ ಕುರ್ಚಿಯ ಮೇಲೆ ಕುಳಿತಿದ್ದನು. ಎಲ್ಲವೂ ಸ್ತಬ್ಧವಾಗಿತ್ತು. ಶಾಮನಿಗೆ ತನ್ನ ಎದೆ ಬಡೆದುಕೊಳ್ಳುವ ಶಬ್ದವೇ ತನಗೆ ಕರ್ಕಶವಾಗಿ ಕೇಳತೊಡಗಿತು. ಎದೆಯು ಸುಮ್ಮನೆ ಬಡೆದುಕೊಳ್ಳಲಿಲ್ಲ 'ಕಲಾವತಿ' 'ಕಲಾವತಿ' 'ಸೂಸಿ ಒಬ್ಬ ಕಲಾವತಿ' – 'ವೇಶ್ಯೆ !' ಎಂದು ಕೂಗಿಕೊಳ್ಳುತ್ತಿದೆ ಎಂದೆನಿಸಿತು ಅವನಿಗೆ.

'ಪ್ರಪಂಚದ ಸೊತ್ತನ್ನು ಪ್ರಪಂಚಕ್ಕಾಗಿ ಬಿಟ್ಟು ಕೊಡುತ್ತೇನೆ. ನನ್ನ ಅಧಿಕಾರದ ಬಲದಿಂದ ಇವಳ ಸ್ವಾತಂತ್ರ್ಯವನ್ನ ಅಪಹರಿಸಿ ಕೊಳ್ಳುವ ಇಚ್ಛೆ ನನಗಿಲ್ಲ, ತನ್ನ ಹಿತವನ್ನು ತಾನು ಕಂಡುಕೊಳ್ಳಲಿ. ಅವಳು ಈಗ ಅಸಹಾಯ ಶೂರಳು. ತನಗೆ ಬೇಕಾದವರೊಡನೆ ಸಲಿಗೆಯಿಂದಿರಲಿ, ತನ್ನ ಮನಸ್ಸಿಗೆ ಬಂದಂತೆ ವರ್ತಿಸಲಿ. ಅವಳ ಜೀವನಪಥವಲ್ಲಿ ನಾನು ಪ್ರತಿಬಂಧಕವಾಗಿರಲಾರೆ. ಅವಳ ಕಲಾಪ್ರತಿಭೆಯಿಂದ ಜಗತ್ತಿಗೆ ಕಲ್ಯಾಣ ವಾಗುತ್ತಿದ್ದರೆ ಅದಕ್ಕೆ ನಾನೇಕೆ ಕಟಂಕವಾಗಲಿ ?'

'ಇನ್ನೂ ನಿದ್ದೆ ಬರಲಿಲ್ಲವೆ?' ಸೂಸಿ ಕೇಳಿದಳು.

ಶಾಮನು ಉತ್ತರ ಕೊಡಲಿಲ್ಲ.

'ಬನ್ನಿ, ಇಲ್ಲಿಯೇ ಮಲಗುವಾ'

ಶಾಮು ಅವಳ ಕಡೆ ನೋಡಿದ.

'ವಿಸ್ತಾರವಾದ ಪ್ರಪಂಚದಲ್ಲಿ ಇವಳೊಬ್ಬಳನ್ನೇ ಬಿಟ್ಟರೆ ಇವಳ ಗತಿಯೇನಾಗಬಹುದು ? ಒಂಟಿಯಾಗಿ ಜೀವಿಸಬಲ್ಲಳೆ ಇವಳು ? ಒಬ್ಬಳೇ ಜೀವನದ ಸಮಸ್ಯೆಗಳನ್ನೆಲ್ಲ ಎದುರಿಸಬಲ್ಲಳೇ ? ನನಗೇಕೊ ಸಂದೇಹ ಅವಳಿಗೆ ನಾನು ಬೇಕು. ನನಗಾಗಿ, ಜೀವದಕ್ಕಿಂತಲೂ ಹೆಚ್ಚೆಂದು ಭಾವಿ ಸಿದ ನಾಚಿಕೆಯನ್ನು ತೊರೆದು ಚಲಚ್ಚಿತ್ರದಲ್ಲಿ ಭಾಗವಹಿಸಲು ಸಿದ್ಧಳಾ ದಳು. ಅಲ್ಲಿಯ ಎಲ್ಲ ಅಪಮಾನಗಳನ್ನು ನನ್ನ ಮುಖನೋಡಿ ಸಹಿಸಿ ಕೊಂಡಳು. ನನ್ನ ಸಲಹೆ-ಸೂಚನೆಗಳ ಮೇರೆಗೆ ತನ್ನ ಜೀವನವನ್ನು ಮಾರ್ಪಡಿಸಿಕೊಂಡಳು. ನಾನು ಕಲಿಸಿದ ಪಾಠಗಳಲ್ಲಿ ನನ್ನನ್ನೇ ಸೋಲಿಸಿ ಬಿಡುವಷ್ಟು ಜಾಣ್ಮೆಯನ್ನು ಸಂಪಾದಿಸಿದಳು. ಈಗಲೂ ದಿವಸಕ್ಕೆ ಒಂದಾ ವರ್ತಿಯಾದರೂ ನನ್ನನ್ನು ಮಾತನಾಡಿಸದಿದ್ದರೆ ಅವಳಿಗೆ ಸಮಾಧಾನ ವಿಲ್ಲ. ತಾನು ಹೊರಗೆ ಹೋಗುವಾಗಲೆಲ್ಲ ನನ್ನನ್ನು ಕರೆಯುತ್ತಾಳೆ. ನಾನೇ ಹೋಗದಿದ್ದರೆ ಅವಳೇನು ಮಾಡಬೇಕು ?

'ನನಗೂ ಅವಳನ್ನು ಬಿಡುವ ಮನಸ್ಸಿಲ್ಲ. ಅವಳು ನನ್ನವಳು-ನನ್ನ ಜೀವದ ಜೀವವಾಗಿದ್ದವಳು. ಅವಳು ಹೇಗಿದ್ದರೂ ನನ್ನವಳೇ—ಒಂದು ವೇಳೆ ನನ್ನ ಸಂದೇಹಗಳು ನಿರಾಧಾರವಾಗಿದ್ದರೂ ಇರಬಹುದು. ಕಮಲೆಯ

ವಿಷ ಬೀಜಾರೋಪಣದ ಫಲವಾಗಿ ನನ್ನ ಮನಸ್ಸು ಕಲುಷಿತವಾಗಿರಬಹುದು ಯಾರು ಬಲ್ಲರು? ನನ್ನ ಪಾಪ ಪೂರಿತ ದೃಷ್ಟಿಗೆ ಎಲ್ಲವೂ ಪಾಪಮಯವಾಗಿ ಕಾಣುತ್ತಿರಬಹುದು.

'ಆದರೆ ಅಂದು ಮಾಧವನನ್ನು ನೋಡಿ ನಕ್ಕದ್ದೇಕೆ? ಕನ್ನಡಿಯಲ್ಲಿ ಒಬ್ಬರನ್ನೊಬ್ಬರು ನೋಡಿ ತಮಾಷೆ ಮಾಡಿದ್ದೇಕೆ? ನಾನು ಬೇಡವೆಂದು ಸ್ಪಷ್ಟವಾಗಿ ಹೇಳಿದ್ದರೂ ಕೇಳದೆ ಆ ದೃಶ್ಯದಲ್ಲಿ ಅಭಿನಯಿಸಿದ್ದೇಕೆ? ಆ ದೃಶ್ಯದ ವಿಷಯವಾಗಿ ಇಂದಿನ ವರೆಗೆ ನನ್ನ ಸಂಗಡ ಒಂದೂ ಮಾತನಾಡಲಿಲ್ಲ! ನಾನು ಯಾವಾಗ ಮನೆಗೆ ಬರುವೆನೊ ಎಂದು ಕಾಯ್ದುಕೊಂಡಿರುತ್ತಿದ್ದವಳು ಈಗ ನಾನು ಮನೆಯಲ್ಲಿಯೇ ಇದ್ದರೂ ತನ್ನ ಕೆಲಸದಲ್ಲಿಯೇ ಮುಳುಗಿರುತ್ತಾಳೆ. ಇಲ್ಲ, ಅವಳು ಮೊದಲಿನಂತಿಲ್ಲ. ಅವಳಿಗೆ ನಾನು ಬೇಕಿಲ್ಲ.'

'ಗಂಟೆ ಎರಡಾಯಿತೇನೊ ಏಳಬಾರದೆ?' ಸೂಸಿಯೆಂದಳು.

ಅವಳಿಗೆ ಮುಖ ಕಾಣದಂತೆ ಕೈಯಲ್ಲಿ ಶಾಮನೂ ವೃತ್ತ ಪತ್ರವೊಂದನ್ನು ಹಿಡಿದುಕೊಂಡ. ಈಗ ಅವಳ ಮಾತುಗಳನ್ನು ಕೇಳುವ ಇಚ್ಛೆ ಕೂಡ ಅವನಿಗೆ ಇರಲಿಲ್ಲ. ಅಲ್ಲಿ ಕೂಡುವುದೇ ಬೇಡವೆಂದು ಚಟ್ಟನೆ ಎದ್ದು ಕಿಡಕಿಯ ಬಳಿಗೆ ಬಂದ. ಕಿಡಕಿಯಲ್ಲಿ ಮುಖವನ್ನಿಟ್ಟು ಹೊರಗೆ ನೋಡುತ್ತ ನಿಂತುಕೊಂಡ. ಆಕಾಶದಲ್ಲಿ ಚಂದ್ರನು ಮಿನುಗುತ್ತಿದ್ದನು. ಗಾಳಿಯಲ್ಲಿ ತೂಗುತ್ತ ಗಿಡಗಳು ಮೆಲ್ಲಗೆ ಶಬ್ದ ಮಾಡುತ್ತಿದ್ದವು.

ಕೆಲವು ನಿಮಿಷಗಳ ವರೆಗೆ ಆ ಸುಂದರ ದೃಶ್ಯವನ್ನು ನೋಡುತ್ತ ನಿಂತುಕೊಂಡ ಮನೆಯಿಂದ ಸ್ವಲ್ಪ ದೂರದಲ್ಲಿ ಅಸ್ಪಷ್ಟವಾದ ಮಾರ್ಗವೊಂದು ಕಾಣಿಸಿತು. ಬೆಳದಿಂಗಳಿನ ದಿನವಾದುದರಿಂದ ಬೀದಿಯ ದೀಪಗಳೆಲ್ಲ ನಂದಿದ್ದವು. ಆಕಾಶದಲ್ಲಿ ಚಂದ್ರನು ಮಿನುಗುತ್ತಿದ್ದರೂ ಬದಿಯ ಗಿಡಗಳ ನೆರಳಿನಿಂದ ಮಾರ್ಗವೆಲ್ಲವೂ ಕತ್ತಲೆಯಿಂದ ಆವರಿಸಿಕೊಂಡಿತ್ತು. ಆ ದಾರಿಗುಂಟ ತಾನೊಬ್ಬನೆ ಹೊರಟಂತೆ ಅವನಿಗೆ ಭಾಸವಾಯಿತು. ಆ ದಾರಿ ದೂರದಲ್ಲಿ ಕಾಣುವ ಗುಡ್ಡದ ವರೆಗೆ ಹೋಗುವುದೆಂಬುದು ಅವನಿಗೆ ಗೊತ್ತಿತ್ತು. ಆದರ ಮುಂದೆ ಅದು ಎಲ್ಲಿಗೆ ಹೋಗುವ

ದೆಂಬುದು ಅವನಿಗೆ ತಿಳಿಯದು. ಆ ದಾರಿಗುಂಟ ಹೊರಟಿದ್ದಾನೆ ಅದು ಮುಳ್ಳು ಕಲ್ಲುಗಳಿಂದ ತುಂಬಿ ಹೋಗಿದೆ. ದೊಡ್ಡ ಅಡವಿ; ಕಾಡು ಮೃಗಗಳು, ಮುಂದೆ ದಾರಿಯೇ ಕಾಣದಂತಾಯಿತು. ಇನ್ನೇನು ಗತಿ ಎಂದು ಕತ್ತು ಮೇಲೆ ಮಾಡಿದ—ಚಂದ್ರ ನಗುತ್ತಲಿದ್ದಾನೆ.

ಚಂದ್ರನನ್ನೇ ದಿಟ್ಟಿಸುತ್ತ ನಿಂತ. 'ತನ್ನ ಪ್ರಶಾಂತ ಕಿರಣಗಳಿಂದ ವಿಶ್ವವನ್ನು ಬೆಳಗುವ ಆ ಚಂದ್ರನ ಮೊಗದ ಮೇಲಿನ ಆ ಕಲೆ ಎಂತಹುದು? ಅದು ಎಷ್ಟು ಕರಾಳವಾಗಿದೆ? ಇಂತಹ ಶಾಂತ – ಪ್ರಶಾಂತ ಮೂರ್ತಿ ಚಂದ್ರನಿಗೂ ಕಲೆಯುಂಟಿದೆಯೋ? ಆ ಕಲೆಯು ಮಂದಿಗೆ ಕಾಣಬಾರ ದೆಂದು ಹೇಗೆ ಕುಲುಕುಲು ನಗುತ್ತಲಿದ್ದಾನೆ! ಅವನು ಎಷ್ಟು ನಕ್ಕರೆ ಏನು? ಕಲೆಯಿರುವುದು ಸುಳ್ಳೇ?'

ಏಕೋ ಸೂಸಿಯ ಕೋಣೆಯ ಕಡೆ ನೋಡಿದ. ಮೇಜಿನ ಮೇಲೆ ಒಂದು ದೀಪ ಉರಿಯುತ್ತಲಿತ್ತು. ಅದರ ಬೆಳಕು ಕೋಣೆಯೆಲ್ಲವನ್ನೂ ವ್ಯಾಪಿಸಿತ್ತು. ದೀಪದ ಕೆಳಗಡೆಗೆ ಮಾತ್ರ ಕತ್ತಲು! ಕೋಣೆಯೆಲ್ಲವನ್ನು ಬೆಳಗುವ ದೀಪ; ತನ್ನ ಕೆಳಗಿನ ಕತ್ತಲೆಯನ್ನು ನಿವಾರಿಸಿಕೊಳ್ಳಲು ಅಸಮರ್ಥವಾಗಿದೆ!

'ದೀಪದ ಕೆಳಗೆ ಕತ್ತಲೆ. ಆದರೆ ದೀಪವನ್ನು ಹಚ್ಚುವುದು ಏತಕ್ಕಾಗಿ? ಬೆಳಕಿಗಾಗಿ. ದೀಪ ಕತ್ತಲೆಯನ್ನು ಹೇಗೆ ಹೊಡೆದೋಡಿಸುತ್ತಿದೆ ಎಂಬುದನ್ನು ಮಾತ್ರ ನಾವು ಗಮನಿಸುತ್ತೇವೆ – ಅದರ ಕೆಳಗೇ ಕತ್ತಲೆಯಿದೆ ಎಂಬುದನ್ನು ನಾವು ಲಕ್ಷ್ಯಕ್ಕೆ ತರುವುದಿಲ್ಲ. ದೀಪ ಬೆಳಕನ್ನು ಕೊಡುತ್ತಿದೆ– ನಮ್ಮ ಜೀವನಕ್ಕೆ ಅತ್ಯವಶ್ಯಕವಾದ ಬೆಳಕನ್ನು ಕೊಡುತ್ತಿದೆ–ನಾವು ಬದುಕಿರಲು ಮಾರ್ಗವನ್ನು ಕಲ್ಪಿಸಿಕೊಡುತ್ತಿದೆ; ನಮ್ಮ ಜೀವನದ ಸೌಂದರ್ಯವನ್ನು ಹೆಚ್ಚಿಸುತ್ತದೆ; ಅದರ ಕೆಲಸವಾಯಿತು. ಅದರ ಕೆಳಗಿನ ಕತ್ತಲೆಯಿಂದ ನಮಗಾದ ಹಾನಿಯೇನು? 'ದೀಪ' ಎನ್ನುತ್ತಲೆ ನಮಗೆ ಬೆಳಕಿನ ಕಲ್ಪನೆಯಾಗುವುದೆ ವಿನಃ ಕತ್ತಲೆಯದಲ್ಲ. ಆದರೂ ಬೆಳಕಿನ ಮೂರ್ತಿಮಂತ ಸ್ವರೂಪವಾದ ದೀಪವೇ ತನ್ನಡಿಯಲ್ಲಿ ಕತ್ತಲೆಯನ್ನು ಅಡಕವಾಗಿರಿಸಿಕೊಂಡಿದೆ ಎಂಬ ಮಾತು ಸುಳ್ಳಲ್ಲ.'

ಶಾಮ ಕೋಣೆಯೊಳಕ್ಕೆ ಬಂದ. ಸೂಸಿ ಇನ್ನೂ ಓದುತ್ತಲೇ ಇದ್ದಳು. ಮೈಮೇಲಿನ ಬಟ್ಟೆಗಳನ್ನು ಒಂದೊಂದಾಗಿ ತೆಗೆದು ಶಾಮು ಗೂಟದ ಮೇಲಿರಿಸಿದ. ಸೂಸಿ ಇನ್ನೂ ಓದುತ್ತಲೇ ಇದ್ದಳು. ಬೆಳ್ಳಗಿನ ಹಾಸಿಗೆ; ಅದರ ಮೇಲೆ ನೀಲಿ ಬಣ್ಣದ ಸೀರೆಯನ್ನುಟ್ಟು ಒರಗಿದ್ದಳು.! ಶಾಮನ ಲಕ್ಷ್ಯವು ಅತ್ತ ಹೊರಳಿತು. ಅವಳ ಬಿಳಿದಾದ ತೋಳುಗಳು, ಮುಂಗೈಯಲ್ಲಿ ನೀಲಿ ಬಳೆಗಳು ! ಆ ಬೆಳ್ಳನೆಯ ಮುಖದ ಮೇಲೆ ಎದ್ದು ತೋರುವ ಹುಬ್ಬುಗಳು, ನೀರಲ ಹಣ್ಣಿನಂತಿರುವ ಕಣ್ಣುಗಳು. ದಿಟ್ಟಿಸಿ ನೋಡಿದ- ಪ್ರಪಂಚವೆ ಕರಿ–ಬಿಳಿಯ ಅಪೂರ್ವ ಸಮ್ಮಿಶ್ರಣದಂತೆ ತೋರಿತವನಿಗೆ.

'Art is a lamp that lights the world ! ಎಷ್ಟು ಚೆನ್ನಾಗಿದೆ ಈ ಮಾತು' ಎಂದು ತನ್ನಷ್ಟಕ್ಕೆ ಅಂದಂತೆ ಅಂದುಕೊಂಡಳು - ಸೂಸಿ.

ಕಲೆಯೂ ದೀಪದಂತೆ ! ಕಲೆ ದೀಪ ! ದೀಪದ ಕೆಳಗೆ ಕತ್ತಲು !!

ಶಾಮ ಇನ್ನೂ ಸೂಸಿಯನ್ನೇ ನೋಡುತ್ತಲಿದ್ದ. ಮುಖದಲ್ಲಿ ಎಂತಹ ಗಾಂಭೀರ್ಯವಿದೆ !– ಸ್ಥಿರತೆಯಿದೆ !– ಶಾಂತಿಯಿದೆ ! ಮೊದಲಿನ ಚಂಚಲತೆಯಿಲ್ಲ !– ಹುಡಗಾಟವಿಲ್ಲ !- ಲಜ್ಜೆಯಿಲ್ಲ ! ಎಂಟು ತಿಂಗಳಲ್ಲಿ ಎಷ್ಟು ಹಿರಿಯಳಾಗಿ ಬೆಳೆದಿದ್ದಾಳೆ !

ಶಾಮನ ಕಣ್ಣೆದುರಿಗೆ ಒಂದು ಚಿತ್ರವು ಕಟ್ಟಿದಂತಾಯಿತು. 'ಸೂಸಿ ಬಿಳಿ ಸೀರೆಯನ್ನುಟ್ಟಿದ್ದಾಳೆ ! ಕೂದಲುಗಳನ್ನು ಹರಹಿದ್ದಾಳೆ; ಕೈಯಲ್ಲಿ ದಿವ್ಯ ಜ್ಯೋತಿಯೊಂದನ್ನು ಹಿಡಿದುಕೊಂಡಿದ್ದಾಳೆ, ಅಂತರಿಕ್ಷದಲ್ಲಿ ಹಾರುತ್ತಿದ್ದಾಳೆ; ಎಂತಹ ಸುಂದರವಾದ ದೃಶ್ಯವದು !'

ಆ ದೃಶ್ಯವನ್ನು ಚಿತ್ರಿಸಿ ತಾರಿಣಿಯ ಕಲಾ ಜ್ಯೋತಿಯ ಜೊತೆಗೆ ತನ್ನ ಕಲಾ ಜ್ಯೋತಿಯೂ ಪ್ರಪಂಚವನ್ನು ಬೆಳಗುವಂತೆ ಮಾಡಬೇಕು ಎಂದು ನಿಶ್ಚಯಿಸಿದ.

— **ಸಮಾಪ್ತ** —

**ಬೆಲೆ ಕಡಿಮೆ!** ● **ಹೆಚ್ಚುಕಾಲ ಬಾಳಿಕೆ!!**




**ಆರ್ಟಿಫಿಶಲ್ ರೋಲ್ಡ್‌ಗೋಲ್ಡ್‌ನಿಂದ ತಯಾರಿಸಿದ**
**ಗ್ಯಾರಂಟೀಡ ಆಭರಣಗಳು.**

**ಬಡವರಿಗೆ ಭಾಗ್ಯ!** ● **ಶ್ರೀಮಂತರಿಗೆ ಆದಾಯ!!**

ನಮ್ಮ ಫ್ಯಾಕ್ಟರಿಯಲ್ಲಿ ವಿವಿಧ ಬಗೆಯ ಬಳೆಗಳೂ, ಕುತ್ತಿಗೆಯ ತರ ತರದ ಸರಗಳೂ, ಕೈ ಉಂಗುರ, ಲೋಲಕ, ಮತ್ತು ಕೈಗಡಿಯಾರಗಳ ಚೈನುಗಳೂ ಅತಿ ಸುಲಭ ಕ್ರಯಕ್ಕೆ ೧ ವರ್ಷ, ೩ ವರ್ಷ, ಹಾಗೂ ಜಾಸ್ತಿಕಾಲದ ವರೆಗೆ ಬಾಳ್ವಿಕೆ ಬರುವಂತೆ ತಯಾರಿಸಲ್ಪಡುತ್ತವೆ. ಗಿರಾಕಿಗಳನ್ನು ತೃಪ್ತಿಪಡಿಸುವುದೇ ನಮ್ಮ ಧ್ಯೇಯ. ದಯವಿಟ್ಟು ಒಂದಾವರ್ತಿ ಪರೀಕ್ಷಿಸಿ ಖಾತ್ರಿ ಮಾಡಿಕೊಳ್ಳಬೇಕು.

ಸಚಿತ್ರ ಕ್ಯಾಟಲಾಗು ಉಚಿತ. ಇಂದೇ ಬರೆಯಿರಿ.

ವಿಳಾಸ:— **ಮಾರುತಿ ಇಲೆಕ್ಟ್ರಿಕ್ ಪ್ಲೇಟಿಂಗ ಆ್ಯಂಡ್**
**ಪಾಲಿಶಿಂಗ ವರ್ಕ್ಸ.** ಮಂಗಳೂರು (ದ. ಕ.)

# ಗಜಕರ್ಣ, ಹುರಕು, ತದ್ದು

ಮುಂತಾದ ತ್ವಚರೋಗಗಳಿಂದ
ಪೀಡಿತರಾದ ಜನರಿಗೆ

( ರಜಿಸ್ಟರ್ಡ )

# ಗೋವಾ ಮಲಮು

# GOA OINTMENT. RGD

For Ringworm, Itch, and all other Skin Diseases.

## ಗುಣಬರದಿದ್ದರೆ ಹಣ ತಿರುಗಿ ಕೊಡುವೆವು.

ಸಣ್ಣ ಡಬ್ಬಿ ೧ ಆಣೆ—ಬಾಟ್ಲಿ ೪ ಆಣೆ

ಎಲ್ಲಕಡೆಯಲ್ಲಿಯೂ ದೊರೆಯುತ್ತದೆ.

## ಸ್ಟಾರ ಕಂಪನಿ, ಬೆಳಗಾಂವ

ಶ್ರೀ

# ಕರ್ನಾಟಕ ಸಾಹಿತ್ಯ ಮಂದಿರ

ಪ್ರಕಾಶಕರು, ಧಾರವಾಡ

ಕೆಲವು ಉತ್ತಮ ಗ್ರಂಥಗಳು

| | | |
|---|---|---|
| **ನನ್ನ ನಲ್ಲ:** | ಮಧುರ ಚೆನ್ನರ ಕವನಸಂಗ್ರಹ | ೦-೧೦-೦ |
| **ಕಾಮನ ಬಿಲ್ಲು:** | ಸಂ. ಅ. ನ. ಕೃಷ್ಣರಾಯರು (ವಿವಿಧ ಕತೆಗಾರರ ೨೪ ಕತೆಗಳ ಸಂಗ್ರಹ) | ೧-೧೨-೦ |
| **ಯಮುನೆ ಸೋಲು:** | 'ಶ್ರೀರಂಗ'ರ ಏಕಾಂಕ ನಾಟಕ | ೦-೪-೦ |
| **ಅಭಿನವಪಂಪ:** | ವಿವಿಧ ಪಂಡಿತರ ಲೇಖಗಳು (ಬಿ. ಎಂ. ಶ್ರೀ. ಯವರ ಮುನ್ನುಡಿಯೊಡನೆ) | ೧-೪-೦ / ೧-೧೭-೦ |
| ನೇಮಿಚಂದ್ರ ವಿರಚಿತ **ಲೀಲಾವತಿ ಪ್ರಬಂಧ** | ಸಂ. ಕೆ. ಜಿ. ಕುಂದಣಗಾರರು ೯-೧೦ ಆಶ್ವಾಸನಗಳು | ೦-೧೨-೦ |
| **ಅಶಾಂತಿಪರ್ವ:** | ಆನಂದಕಂದರು | ೧-೧೨-೦ / ೨-೮-೦ |
| **ಗತವೈಭವ:** | ಆಲೂರ ವೆಂಕಟರಾಯರು | ೧-೦-೦ |

ಎಲ್ಲ ವಾಚನಾಲಯುಗಳಿಗೂ ಶಾಲೆಗಳಿಗೆ ಉಪಯೋಗವಾಗುವ ಹೊಸಗನ್ನಡ, ಹಳೆಗನ್ನಡ **ಪುಸ್ತಕಗಳೂ,** ಇಂಗ್ಲೀಷ ಮತ್ತು ಹಿಂದೀ ಪುಸ್ತಕಗಳೂ ಅಲ್ಲದೆ ಎಲ್ಲರ ಅಭಿರುಚಿಗೆ ಹೊಂದುವಂಥ ಉತ್ತಮ **ಫೌಂಟಿನ್ ಪೆನ್ನುಗಳೂ** ಮತ್ತು **ಸ್ಟೇಶನರಿ ಸಾಮಾನುಗಳೂ** ನಮ್ಮಲ್ಲಿ ರಿಯಾಯತಿ ದರದಲ್ಲಿ ಸಿಗುವವು.

ದಯವಿಟ್ಟು ಒಂದಾವರ್ತಿ ಬಂದು ನೋಡಿರಿ.

ಪ್ರತಿಯೊಬ್ಬರೂ ಬನ್ನಿರಿ! ಪರೀಕ್ಷಿಸಿ ನೋಡಿರಿ!!

ಎಂದೂ—ಎಲ್ಲಿಯೂ—ಯಾರಿಂದಲೂ ದೊರೆಯಲಸಾಧ್ಯವಾದ

ಸೌಕರ್ಯ—ಸೌಲಭ್ಯ—ಸುವ್ಯವಸ್ಥೆ

ನಮ್ಮಲ್ಲಿವೆ ಎಂಬ ಮಾತು ನಿಮಗೆ ಮನದಟ್ಟಾಗುವದು.

# NATIONAL STUDIO

**HUBLI & GADAG**

ಸದಾ ಸರ್ವದಾ

ನಿಮ್ಮ ಸೇವೆಗೆ ಸಿದ್ಧವಿದೆ.

ನ್ಯಾಶನಲ್ ಫೋಟೋ ಆರ್ಟ ಸ್ಟೂಡಿಯೊ

ರಾಧಾಕೃಷ್ಣ ಪೇಟೆ, ಹುಬ್ಬಳ್ಳಿ. ● ಸ್ಟೇಶನ್ ರೋಡು, ಗದಗ.

ಬಡವಂ ಬಲ್ಲಿದನಾಗನೇ ?

# ದಿ ಡೆಕ್ಕನ ಇನ್‌ವೆಸ್ಟಮೆಂಟ ಆ್ಯಂಡ

# ಕಮರ್ಶಿಯಲ್ ಕಂಪನಿ ಲಿಮಿಟೆಡ್

ಹೆಡ್ ಆಫೀಸ :— ಮಡಿಮನ್ ಬಿಲ್ಡಿಂಗ ಹುಬ್ಬಳ್ಳಿ.

**ಒಂದೇ ಒಂದು ಬಾಂಡು ನಿಮ್ಮನ್ನು ಐಶ್ವರ್ಯ ಶಿಖರಕ್ಕೇರಿಸುವದು.**

ಹಿಂದುಸ್ಥಾನದ ಪ್ರಸಿದ್ಧ ಆ್ಯಕ್ಚುಅರಿಗಳಾದ **ಜಿ. ಎಸ್. ಮರಾಠೆ**

ಅವರಿಂದ ತುಂಬಾ ಪ್ರಶಂಸಿಸಲ್ಪಟ್ಟ ಲಾಭದಾಯಕ

ಹೊಸ ಪದ್ಧತಿಯ ಹೊಸ ಯೋಜನೆಯಿದು.

ಬಾಂಡುದಾರರಿಗೆ ಹೇರಳವಾದ ಪ್ರತಿಫಲ ( ಬೋನಸ್ಸು ) ಹಂಚಲಾಗಿದೆ.

ಪ್ರತಿ ಮಾರ್ಚ, ಜೂನ್, ಸಪ್ಟಂಬರ, ಡಿಸೆಂಬರ ೩೦ನೇ ತಾ. ಗಳಿಗೊಮ್ಮೆ,

ಪ್ರತಿ ತ್ರೈಮಾಸಿಕಕ್ಕೊಮ್ಮೆ ಬೋನಸ್ಸು ಹಂಚಲಾಗುವದು.

ಬಾಂಡಿನ ಬೆಲೆ ೧೦-೦-೦ ಪ್ರವೇಶ ಫೀ ೪-೮-೦

ಪ್ರಚಾರ ಕಾರ್ಯಕ್ಕೆ ಸಮರ್ಥರಾದ ಏಜಂಟರು ಎಲ್ಲ ಕಡೆಯಲ್ಲಿಯೂ

ಬೇಕಾಗಿದ್ದಾರೆ.

ವಿಶೇಷ ವಿವರಗಳಿಗಾಗಿ ಹೆಡ್ ಆಫೀಸಿಗೆ ಬರೆಯಿರಿ.

**ಮ್ಯಾನೇಜಿಂಗ ಡೈರೆಕ್ಟರ.**

---

**ಧಾರವಾಡ ನಾಗರಿಕರಿಗೆ ಸಂತೋಷದ ಸುದ್ದಿ**

ವೆಚ್ಚದಲ್ಲಿ ಉಳಿತಾಯ ! ಮೆಚ್ಚಿನಲ್ಲಿ ಆದಾಯ !

ಮುಂಬೈ-ಪುಣೆ ನಗರಗಳಿಗೆ ಹೋಗುವ ಅವಶ್ಯಕತೆಯೇ ಇಲ್ಲ !

**( ಮಾರ್ಕೇಟ ರೋಡಿನಲ್ಲಿರುವ )**

# ನಮ್ಮ ಸಿಟಿ ಸ್ಟೋರಿನಲ್ಲಿ

ಇಂದಿನ ಹೊಸ ಮಾದರಿಯ ಸ್ಟೇಶನರಿ ಸಾಮಾನುಗಳೂ

ನವನಾಗರಿಕತೆಯ ಫ್ಯಾಶನ್ನುಗಳ ಕಸೂತಿ-ಹೆಣಿಕೆಯ ಒಡವೆಗಳೂ

ತರತರದ ಅಚ್ಚುಮೆಚ್ಚಿನ ಸುವಾಸಿಕ ದ್ರವ್ಯ-ತೈಲಗಳೂ

ಇನ್ನೂ ಅನೇಕ ತರಹದ ಸೊಬಗಿನ ಸೌಕರ್ಯದ ಸುಂದರವಾದ

ಸರಕುಗಳೂ ಅಗ್ಗವಾಗಿ ದೊರೆಯುವವು.

**ನಾಗರಿಕರ ಸೇವೆ-ಸಮಾಧಾನಗಳೇ ನಮ್ಮ ಧ್ಯೇಯವಾಗಿದೆ.**

॥ ಸಿರಿಗನ್ನಡಂ ಗೆಲ್ಗೆ ॥

# ಕನ್ನಡ ಪುಸ್ತಕಗಳ ವಿವಿಧ ಸಂಗ್ರಹ.

ಚಿಕ್ಕ ಬಾಲಕರಿಗೂ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೂ, ಪ್ರೌಢ ಸ್ತ್ರೀ ಪುರುಷರಿಗೂ, ವಕೀಲ ಡಾಕ್ಟರರಿಗೂ, ಶಿಕ್ಷಕರಿಗೂ ಉಪಯುಕ್ತವಾದ ಪುಸ್ತಕಗಳು ನಮ್ಮಲ್ಲಿ ದೊರೆಯುವವು.

ನಿಮಗೆ ಯಾವ ತರದ ಪುಸ್ತಕ ಬೇಕಾದರೂ ನಮ್ಮಲ್ಲಿಗೆ ಬಂದು ತೆಗೆದುಕೊಳ್ಳಿ.

## ಮೊನ್ನೆ ತಾನೆ ಬಂದ ಪುಸ್ತಕಗಳು:—

| | | |
|---|---|---|
| ೧. | ಚೋದ್ಯಪುರದ ಚೋಚಿಗರಾಯ | ೧—೦—೦ |
| ೨. | ಸ್ಕೂಲ್ ಮಿಸ್ಟ್ರೆಸ್ | ೧—೪—೦ |
| ೩. | ಕನ್ನಡ ಕೈಪಿಡಿ ಭಾಗ ೧. (ಮೈಸೂರ ವಿಶ್ವವಿದ್ಯಾಲಯದ ಪ್ರಕಟನೆ) | ೧—೬—೦ |
| ೪. | ನೈಷ್ಕರ್ಮ್ಯ ಸಿದ್ಧಿ | ೩—೦—೦ |
| ೫. | ಮಹಾಭಾರತ ದ್ರೋಣಪರ್ವ | ೧—೧೪—೦ |
| ೬. | ಅಕಬರ ಚಕ್ರವರ್ತಿ | ೧—೯—೦ |
| ೭. | ರಾಸೆಲಾಸ | ೧—೦—೦ |
| ೮. | ಛತ್ರಪತಿ ಶಿವಾಜಿ ಮಹಾರಾಜ | ೦—೧೨—೦ |
| ೯. | ಕಥೆಗಳನ್ನೊಳಗೊಂಡ ಬೀರಬಲ್ಲನ ಚರಿತ್ರೆ | ೧—೬—೦ |
| ೧೦. | ಕರ್ನಾಟಕ ಸಿಂಹಾಸನ ಸ್ಥಾಪನೆ | ೧—೦—೦ |

## ಶ್ರೀ ಶಂಕರ ಕರ್ನಾಟಕ ಪುಸ್ತಕ ಭಾಂಡಾರ,

ಮಾಳಮಡ್ಡಿ, ಧಾರವಾಡ.

## ಆರ್. ಕೆ. ಕಬ್ಬೂರ, ಕೊಪ್ಪೀಕರ ರೋಡು

[ ಹುಬ್ಬಳ್ಳಿ ]

ಬೆಲೆ ಕಡಿಮೆ !  ಹೊಸ ಮಾಲು !!  ಒಂದೇ ಧಾರಣಿ !!!

ಕಿರಾಣಿ ಸಾಮಾನುಗಳು, ಸ್ಟೇಶನರಿ ಸಾಮಾನುಗಳು, ಪೋಮೇಡ್ಸ್, ಸೋಪ್ಸ, ಸೆಂಟ್ಸ್, ಮುಂತಾದವುಗಳೂ ಹಾಗೂ ಇತರ ಸುಗಂಧ ದ್ರವ್ಯಗಳೂ, ಆಯುರ್ವೇದಿಕ ಲೋಧ್ರ, ಜೀವಾಮೃತ, ಆತಂಕ ನಿಗ್ರಹ ಮತ್ತು ಮೋಹ ಧ್ವಂಸಿನಿ ಮೊದಲಾದ ಖಾತ್ರಿದಾಯಕ ಪೇಟೆಂಟ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ. ಕ್ಯಾಟಲಾಗು ಉಚಿತ.

ದಯವಿಟ್ಟು ಒಂದಾವರ್ತಿ ಬಂದು ಪರೀಕ್ಷಿಸಿರಿ.

## ಶಾರದಾ ಸ್ಟೋರ್ಸ ಧಾರವಾಡ.

ಮನಸ್ಸಿಗೆ ಸಂತೋಷವಾಗಬೇಕಾದರೆ ಮನೆಯು ಚೊಕ್ಕಟವಾಗಿರಬೇಕು; ಅಚ್ಚುಕಟ್ಟಾಗಿರಬೇಕು. ನಿಮ್ಮ ಆದಾಯದಲ್ಲಿ ಸ್ವಲ್ಪ ಭಾಗವನ್ನು ವೆಚ್ಚಮಾಡಿದರೆ ಸಾಕು; ಬಗೆಬಗೆಯ ಚಿತ್ರಗಳು ಬಣ್ಣದ ಕ್ಯಾಲೆಂಡರುಗಳು, ಚಿಕ್ಕ ದೊಡ್ಡ ಕನ್ನಡಿಗಳು ಇವುಗಳಿಂದ ಮನೆಯನ್ನು ಸರ್ವೋತ್ಕೃಷ್ಟವಾಗಿ ಸಿಂಗರಿಸಬಹುದು. ಇದು ಸಾಧ್ಯವೇ ಎಂದು ನಿಮಗೆ ಅಚ್ಚರಿಯಾಗಬಹುದು ! ನಮ್ಮನ್ನು ವಿಚಾರಿಸಿರಿ.

**ಜಿ. ವ್ಹಿ. ಗುಡಿ, ಮಾರ್ಕೆಟ ರೋಡ, ಧಾರವಾಡ.**

## ಕಟ್ಟಿ ಇವರ ಆರ್ಟ ಸ್ಟುಡಿಯೊ

### ರಾಮದೇವಗಲ್ಲಿ, ಬೆಳಗಾವಿ.

ಎಲ್ಲತರದ ಫೋಟೋಗ್ರಾಫಿ ಸಾಮಾನುಗಳು ಯೋಗ್ಯ ದರದಿಂದ ಸಿಗುತ್ತವೆ.

ಮತ್ತು ಉತ್ತಮ ತರಗತಿಯ ಫೋಟೋ ಫ್ರೇಮುಗಳು

ಸಿಗುತ್ತವೆ.

ಫೋಟೋ ಮೆಡಾಲಿಯನ್ಸ, ಉಂಗರದಲ್ಲಿಡುವ ಫೋಟೋ

ಫ್ರೇಮುಗಳು ಸಿಗುತ್ತವೆ.

ಉತ್ತಮತರಗತಿಯ ಭಾವ ಚಿತ್ರಗಳಿಗಾಗಿ ನಮ್ಮ ಸ್ಟುಡಿಯೋಕ್ಕೆ ಬನ್ನಿ.

ಎಲ್ಲ ತರಗತಿಯ ಮತ್ತು ಎಲ್ಲ ಬಣ್ಣಗಳಿಂದ ತಯಾರಾಗುವ

ಫೋಟೋ ಎನ್‌ಲಾರ್ಜಮೆಂಟ ನಮ್ಮ ವೈಶಿಷ್ಟ್ಯವು.